ಕರ್ನಾಟಕ ಲಲಿತಕಲಾ ಅಕಾಡೆಮಿ

ಜನಪ್ರಿಯ ದೇಶಿ ಕಲಾಮಾಲೆ

ಯಕ್ಷಗಾನ ಮತ್ತು ಚಿತ್ರಕಲೆ

● ಉಪಾಧ್ಯಾಯ ಮೂಡುಬೆಳ್ಳೆ



ಯಕ್ಷಗಾನ ಮತ್ತು ಚಿತ್ರಕಲೆ

ಪ್ರಧಾನ ಸಂಪಾದಕರು

ಪೀಟರ್ ಎ. ಲೂಯಿಸ್

ಲೇಖಕರು

ಉಪಾಧ್ಯಾಯ ಮೂಡಬೆಳ್ಳ

ಕರ್ನಾಟಕ ಲಲಿತಕಲಾ

ಕರ್ನಾಟಕ ಲಲಿತಕಲಾ ಅಕಾಡೆಮಿ

ಕನ್ನಡ ಭವನ, ಜೆ.ಸಿ. ರಸ್ತೆ

ಬೆಂಗಳೂರು - ೫೬೦ ೦೦೨

YAKSHAGANA MATTU CHITRAKALE
By : Upadyaya Mudubelle
Published by
B.T. Munirajayya, Registrar
Karnataka Lalithakala Academy
Kannada Bhavana, J.C.Road
BANGALORE-560002

First Impression : 2004

Pages : viii + 42 Price Rs : 40-00

ಬೆಲೆ ರೂ. : ೪೦-೦೦

ಪ್ರಥಮ ಮುದ್ರಣ : ೨೦೦೪

ಪ್ರಧಾನ ಸಂಪಾದಕರು
ಶ್ರೀ ಪೀಟರ್ ಎ. ಲೂಯಿಸ್

ಸಂಪಾದಕರು
ಡಾ.ಎಸ್.ಸಿ.ಪಾಟೀಲ

ಪ್ರಕಟಣಾ ಸಮಿತಿ ಸದಸ್ಯರು
ಶ್ರೀ ಸುರೇಶ ಡಿ.ಹಾಲಬಾವಿ
ಡಾ. ಪೂರ್ಣಿಮಾ ಪಾಟೀಲ
ಶ್ರೀ ಪಿ.ಎಸ್.ಕಡೇಮನಿ
ಶ್ರೀ ಬಿ.ಎಸ್.ದೇಸಾಯಿ
ಶ್ರೀ ದಿಲೀಪಕುಮಾರ ಕಾಳೆ

ಪ್ರಕಾಶಕರು
ಶ್ರೀ ಬಿ.ಟಿ.ಮುನಿರಾಜಯ್ಯ, ರಿಜಿಸ್ಟ್ರಾರ್
ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು

ಸಮನ್ವಯಕಾರ : ಶ್ರೀ ಪ.ಸ.ಕುಮಾರ

ಮುಖಪುಟ : ಶ್ರೀ ಸುಧಾಕರ ದರ್ಬೆ

ಅಕ್ಷರ ಜೋಡಣೆ : ಯೂಜಿ ಗ್ರಾಫಿಕ್ಸ್, ಹೊಸಪೇಟೆ

ಮುದ್ರಣ
ಇಳಾ ಪ್ರಿಂಟರ್ಸ್, ನಂ. ೩೬, ೪೦ ಅಡಿ ರಸ್ತೆ
ರಾಘವನಗರ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಬೆಂಗಳೂರು - ೨೬. ✆ : ೨೬೭೫೭೧೫೯

ಅಧ್ಯಕ್ಷರ ಮಾತು

ಆತ್ಮೀಯರೆ,

ಲಲಿತಕಲಾ ಅಕಾಡೆಮಿಯ ಅಧ್ಯಕ್ಷನಾಗಿ ಮೂರು ವರ್ಷಗಳಾಗುತ್ತಿದೆ. ಈ ಅವಧಿಯಲ್ಲಿ ನಾನು ಮತ್ತು ಸದಸ್ಯರ ತಂಡ, ರೂಪಿಸಿ ನಿರ್ವಹಿಸಿದ ಕಾರ್ಯಕ್ರಮಗಳನ್ನು ನಿಮ್ಮ ಮುಂದಿಡುವುದು ನನ್ನ ಜವಾಬ್ದಾರಿ ಹಾಗೂ ಸಂತೋಷದ ವಿಷಯ. ನಾವು ಮೂರು ವರ್ಷಗಳು ಕಾರ್ಯಕ್ರಮಗಳನ್ನು ರೂಪಿಸುವಾಗ ಯುವ ಪೀಳಿಗೆಗೆ ಸಿಂಹಪಾಲು ನೀಡಿದ್ದೇವೆ, ಹೊಸತನವನ್ನೂ ಕಾಪಾಡಿಕೊಂಡಿದ್ದೇವೆ.

'ಯಂಗ್ ಸ್ಟ್ರೋಕ್ಸ್' 'ನಿಮ್ಮೊಂದಿಗೆ ನಾವು' 'ಮನೆಗೊಂದು ಕಲಾಕೃತಿ', 'ಜನಪದ ಶೃತಿ-ಆಧುನಿಕ ಕೃತಿ', ಯುವಕಲಾವಿದರಿಗೆ ಫೆಲೋಶಿಪ್ ಮುಂತಾದ ನವೀನ ಹಾಗೂ ಉಪಯುಕ್ತ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆ. ಕರ್ನಾಟಕವನ್ನು ನಾಲ್ಕು ವಿಭಾಗಗಳಾಗಿ ಮಾಡಿ, ಪ್ರತಿ ಕಾರ್ಯಕ್ರಮದಲ್ಲಿ ನಾಲ್ಕೂ ವಿಭಾಗದ ಕಲಾವಿದರಿಗೆ ಸಮಪಾಲು ದೊರಕುವಂತೆ ಮಾಡಿದ್ದು ಕಲಾವಿದರಿಗೆ ಸಂತಸ ತಂದಿದೆ.

ಯಂಗ್ ಸ್ಟ್ರೋಕ್ಸ್: ಕರ್ನಾಟಕದ ನಾಲ್ಕು ವಿಭಾಗಗಳಿಂದ ಆಯ್ದ ಪ್ರತಿಭಾವಂತ ಯುವಕಲಾವಿದರ ಕಲಾಪ್ರದರ್ಶನವನ್ನು ಬೆಂಗಳೂರು, ಮುಂಬೈ ಮತ್ತು ನವದೆಹಲಿಯಲ್ಲಿ ಪ್ರದರ್ಶಿಸಿದ್ದೇವೆ. ಸುಂದರ ಕೈಪಿಡಿಯನ್ನು ಮುದ್ರಿಸಿದ್ದೇವೆ.

ಮನೆಗೊಂದು ಕಲಾಕೃತಿ : ಮಧ್ಯಮ ವರ್ಗದ ಜನರ ಮನೆಯಲ್ಲಿ ನಾಡಿನ ಕಲಾವಿದರ ಕೃತಿಗಳು ರಾರಾಜಿಸಬೇಕೆಂಬ ಉದ್ದೇಶದಿಂದ ಕಡಿಮೆ ಬೆಲೆಯಲ್ಲಿ ಕಲಾಕೃತಿಗಳನ್ನು ಮಾರಾಟ ಮಾಡಿದೆವು. ಜನರ ಉತ್ಸಾಹ ಹಾಗೂ ಪ್ರೋತ್ಸಾಹ ನಮ್ಮನ್ನು ನಿಬ್ಬೆರಗಾಗಿಸಿತು. ಐದು ನೂರಕ್ಕೂ ಹೆಚ್ಚು ಕಲಾಕೃತಿಗಳು ಮಧ್ಯಮ ವರ್ಗದ ಮನೆಗಳನ್ನು ಅಲಂಕರಿಸಿದರೆ, ಅಕಾಡೆಮಿ ಬೊಕ್ಕಸಕ್ಕೆ ಲಕ್ಷಕ್ಕೂ ಹೆಚ್ಚು ಆದಾಯ ಬಂತು.

ನಿಮ್ಮೊಂದಿಗೆ ನಾವು : ಕರ್ನಾಟಕದ ಎಲ್ಲ ಕಡೆಗಳಲ್ಲೂ ಈ ಕಾರ್ಯಕ್ರಮಕ್ಕೆ ನಿರೀಕ್ಷೆಗೆ ಮೀರಿದ ಯಶಸ್ಸು ಲಭಿಸಿದೆ. ಈಗಾಗಲೇ ಎಪ್ಪತ್ತೈದು ಸಾವಿರ ಜನರಿಗೆ ಕಲೆಯ ಕಿರು ಪರಿಚಯವನ್ನು ಮಾಡಿಸಿದೆ.

ಜನಪದ ಶೃತಿ-ಆಧುನಿಕ ಕೃತಿ : ಜಾನಪದದ ಬೇರುಗಳು ಗಟ್ಟಿಯಾಗಿರುವ ಹಳ್ಳಿಯಲ್ಲಿ ಆಧುನಿಕ ಚಿತ್ರಕಲೆಯನ್ನು ಎತ್ತಿನ ಬಂಡಿಗಳ ಮೇಲೆ ಚಿತ್ರಿಸಿ 'ಚಲಿಸುವ ಗ್ಯಾಲರಿ'ಗಳನ್ನು ನಿರ್ಮಿಸಿದ್ದೇವೆ.

ಯುವ ಕಲಾವಿದರಿಗೆ ಫೆಲೋಶಿಪ್ : ಮೂವರು ಯುವ ಪ್ರತಿಭೆಗಳನ್ನು ಆಯ್ಕೆ ಮಾಡಿ ಅವರಿಗೆ ಒಂದು ವರ್ಷದ ಅವಧಿಗೆ ತಿಂಗಳಿಗೆ ರೂ.೩೦೦೦ (ಮೂರು ಸಾವಿರ) ಧನ ಸಹಾಯ ನೀಡಿ ಸ್ವತಂತ್ರವಾಗಿ ಚಿಂತಿಸಿ ಅಭಿವ್ಯಕ್ತಿಸುವ ವಾತಾವರಣವನ್ನು ನಿರ್ಮಿಸಿ ಕೊಟ್ಟಿದ್ದೇವೆ.

ಈ ಎಲ್ಲಾ ಕಾರ್ಯಕ್ರಮಗಳು ಯುವಶಕ್ತಿಯ ಪಾಲಾದರೆ, ಹೊಸದುರ್ಗದ ಹತ್ತಿರವಿರುವ ಸಾಣೆಹಳ್ಳಿಯಲ್ಲಿ ಹಿರಿಯ ಕಲಾವಿದರ ಶಿಬಿರ, ಬೆಂಗಳೂರಿನಲ್ಲಿ ಕಲಾವಿದೆಯರ ಶಿಬಿರ, ಬೆಂಗಳೂರು ಹಾಗೂ ಗುಲ್ಬರ್ಗಾದಲ್ಲಿ ಗ್ರಾಫಿಕ್ ಶಿಬಿರವನ್ನು ನಡೆಸಿದ್ದೇವೆ. ಶ್ರೀ ಜಿ.ಎಸ್.ದಂಡಾವತಿಮಠ ಹಾಗೂ ಡಾ.ಎಂ.ವಿ.ಮಿಣಜಿಗಿಯವರ ಶತಮಾನೋತ್ಸವ ಕಾರ್ಯಕ್ರಮಕ್ಕೂ ಪರೋಕ್ಷವಾಗಿ ನಾವು ಕಾರಣಕರ್ತರಾಗಿದ್ದೇವೆ.

ಇದರೊಂದಿಗೆ ವಾರ್ಷಿಕ ಕಲಾಪ್ರದರ್ಶನ, ವಾರ್ಷಿಕ ಪ್ರಶಸ್ತಿ ಸಮಾರಂಭ, ಜಿಲ್ಲಾವಾರು ಕಲಾಶಿಬಿರ, ಏಕವ್ಯಕ್ತಿ ಹಾಗೂ ಸಮೂಹ ಕಲಾಪ್ರದರ್ಶನಗಳಿಗೆ ಧನಸಹಾಯ ಮುಂತಾದ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ನಿರ್ವಹಿಸಿದ್ದೇವೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯಕ್ರಮ, ಐಫೆಕ್ಸ್ ಕಲಾಪ್ರದರ್ಶನಗಳಿಗೆ ಸಹಯೋಗ ನೀಡಿದ್ದೇವೆ.

ಹಿರಿಯ ಕಲಾವಿದರಿಗೆ ನೀಡುವ ವಾರ್ಷಿಕ ಪ್ರಶಸ್ತಿಯ ಜೊತೆಗೆ ಕಲಾಕ್ಷೇತ್ರದ ಅಭಿವೃದ್ಧಿಗೆ ನಿಸ್ವಾರ್ಥ ಸೇವೆ ಸಲ್ಲಿಸಿದ ಚೇತನಗಳಿಗೆ ವಾರ್ಷಿಕ ಪುರಸ್ಕಾರವನ್ನು ನೀಡಿ ಗೌರವಿಸುವುದನ್ನು ಪ್ರಾರಂಭಿಸಿದ್ದೇವೆ. ಈ ವರ್ಷ ವಾರ್ಷಿಕ ಕಲಾ ಪ್ರದರ್ಶನದಲ್ಲಿ ನೀಡುವ ಬಹುಮಾನಗಳನ್ನು ಹಿರಿಯ ಕಲಾವಿದರ ಹೆಸರಿನಲ್ಲಿ ನೀಡುವುದರೊಂದಿಗೆ ಅವರನ್ನು ಸ್ಮರಿಸುತ್ತಿದ್ದೇವೆ.

ಇಷ್ಟೆಲ್ಲಾ ಆದರೂ ಮನಸ್ಸಿನಲ್ಲಿ ಕೊರತೆ ಕೊರೆಯುತ್ತಿದೆ. ರಾಷ್ಟ್ರಮಟ್ಟದ ಕಲಾಶಿಬಿರ, ರಾಷ್ಟ್ರಮಟ್ಟದ ವಿಚಾರಗೋಷ್ಠಿ, ಕಲಾಕೃತಿಗಳ ಮಾರಾಟ ಕೇಂದ್ರ, ಹಾಸನದಲ್ಲಿ ರಾಷ್ಟ್ರೀಯ ಕಲಾಗ್ರಾಮ, ವಿಭಿನ್ನ ಶೈಲಿಯ ಭಾವಚಿತ್ರದ ಶಿಬಿರವನ್ನು ಈ ಅವಧಿಯಲ್ಲಿ ನಡೆಸಲಾಗದಿದ್ದುದಕ್ಕೆ ನಮ್ಮ ಮನಸ್ಸುಗಳಲ್ಲಿ ಇನ್ನೂ ಅತೃಪ್ತಿ ಕಾಡುತ್ತಿದೆ.

ಕರ್ನಾಟಕ ಲಲಿತಕಲಾ ಅಕಾಡೆಮಿಯ ಹಲವು ಹತ್ತು ಕಾರ್ಯಕ್ರಮಗಳಲ್ಲಿ ಪುಸ್ತಕ ಪ್ರಕಟಣಾ ಯೋಜನೆಯು ಒಂದು. ಅದರ ಅಂಗವಾಗಿ ಪ್ರತಿ ಮೂರು ತಿಂಗಳಿಗೊಮ್ಮೆ ಕಲಾವಾರ್ತೆ ಎಂಬ ಸಂಚಿಕೆಯನ್ನು ಅಕಾಡೆಮಿ ನಿಯಮಿತವಾಗಿ ಪ್ರಕಟಿಸುತ್ತ ಬಂದಿದೆ. ಮುದ್ರಣ ಹಾಗೂ ವಿನ್ಯಾಸಗಳಲ್ಲಿ ಕಲಾತ್ಮಕತೆಗೆ ಒತ್ತುಕೊಟ್ಟು, ಕಲಾವಾರ್ತೆಯನ್ನು ವಾರ್ತಾ ಸಂಚಿಕೆಯಾಗಿಸದೆ ಸಂಗ್ರಹಯೋಗ್ಯ ಸಂಚಿಕೆಯನ್ನಾಗಿಸಿದ್ದೇವೆ. ಹಾಗೆಯೇ ಅಕಾಡೆಮಿಯ

ಎಲ್ಲ ಸದಸ್ಯರ ತೀರ್ಮಾನದಂತೆ ಹತ್ತು ಜನ ಹಿರಿಯ ಕಲಾವಿದರ ಚಿತ್ರಸಂಪುಟ ಮತ್ತು ಒಂಬತ್ತು ಜನ ಹಿರಿಯ ಕಲಾವಿದರಾದ ಪ್ರೊ.ವ್ಹಿ.ಜಿ.ಅಂದಾನಿ, ಎಸ್.ಕಾಳಪ್ಪ, ಎಚ್.ಎಸ್. ಇನಾಮತಿ, ಕೆ.ಕೇಶವಯ್ಯ, ಪುರುಷೋತ್ತಮ ಕಾರಂತ, ಎಂ.ಆರ್.ಬಾಳೀಕಾಯಿ, ರಘೋತ್ತಮ ಪುಟ್ಟಿ, ವ್ಹಿ.ಟಿ.ಕಾಳೆ ಹಾಗೂ ಸಿ.ಚಂದ್ರಶೇಖರ್ ಅವರುಗಳ ಜೀವನ ಸಾಧನೆಗಳ ಪುಸ್ತಕಗಳು ಸಿದ್ಧಗೊಂಡಿವೆ. ಇವರಲ್ಲಿ ಮೂವರು ಕಲಾವಿದರು ಇಂದು ಇಲ್ಲವಾಗಿದ್ದಾರೆ. ಅವರ ಬಗ್ಗೆ ಮಾಹಿತಿ ಸಂಗ್ರಹಿಸುವುದು ಅತ್ಯಂತ ದುಸ್ತರ ಕಾರ್ಯವಾಗಿದ್ದು, ಆಯಾ ಲೇಖಕರು ಆ ಕಾರ್ಯವನ್ನು ಸಾಹಸವೆಂಬಂತೆ ತೆಗೆದುಕೊಂಡು ಬರೆದಿದ್ದಾರೆ. ಉಳಿದ ಲೇಖಕರು ತಮ್ಮ ಲೇಖನದ ಕಲಾವಿದರನ್ನು ಅನೇಕ ಬಾರಿ ಸಂಪರ್ಕಿಸಿ, ಸಂದರ್ಶಿಸಿ ಅಭ್ಯಾಸ ಪೂರ್ಣವಾಗಿ ಬರೆದಿದ್ದಾರೆ. ಈ ಎಲ್ಲ ಬರಹಗಾರರಿಗೆ ಮತ್ತು ಸಂಪಾದಿಸಿಕೊಟ್ಟ ಡಾ.ಅ.ಲ. ನರಸಿಂಹನ್ ಅವರಿಗೆ ಅಕಾಡೆಮಿ ಪರವಾಗಿ ಧನ್ಯವಾದಗಳು. ಅಕಾಡೆಮಿಯ ಇನ್ನೊಂದು ಗ್ರಂಥ 'ಮುಖಗಳೊಂದಿಗೆ ಮುಖಾಮುಖಿ' ಭಾವಚಿತ್ರ ಪರಂಪರೆ ಶೀರ್ಷಿಕೆಯ ಅಧ್ಯಯನ ಯೋಗ್ಯ ಕೃತಿಯನ್ನು ನಮ್ಮ ಮನವಿಯಂತೆ ಬರೆದು ಕೊಟ್ಟಿರುವ ವಿಮರ್ಶಕರಾದ ಶ್ರೀ ಕೆ. ವಿ.ಸುಬ್ರಹ್ಮಣ್ಯಂರವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ಕರ್ನಾಟಕದ ಎಲ್ಲ ಜಿಲ್ಲೆಗಳ ಸಮಗ್ರ ಚಿತ್ರಕಲೆಯ ಸ್ಥೂಲ ನೋಟವನ್ನು ಒಂದೆಡೆಗೆ ಮಾಡಿಕೊಡುವ ಉದ್ದೇಶದಿಂದ **ಕರ್ನಾಟಕ ಚಿತ್ರಕಲಾ ದರ್ಶನ** ಎಂಬ ಬೃಹತ್ ಸಂಪುಟವನ್ನು ತರುತ್ತಿದ್ದು, ಇದನ್ನು ಡಾ.ಎಸ್.ಸಿ.ಪಾಟೀಲ ಅವರು ಸಂಪಾದಿಸಿ ಕೊಡುತ್ತಿದ್ದಾರೆ. ಅದಕ್ಕಾಗಿ ಹೆಚ್ಚಿನ ಅನುದಾನಕ್ಕಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ದೇಶಿ ಚಿತ್ರಕಲೆಯನ್ನು ಪ್ರಾದೇಶಿಕ ವೈಶಿಷ್ಟ್ಯತೆಯ ಹಿನ್ನೆಲೆಯಲ್ಲಿ ಪರಿಚಯಿಸುವ ದೃಷ್ಟಿಯಿಂದ ಈ ಕೆಳಗಿನ ಗ್ರಂಥಗಳನ್ನು ತಜ್ಞ ವಿದ್ವಾಂಸರಿಂದ ಬರೆಯಿಸಿ ಇದೀಗ ಪ್ರಕಟಿಸುತ್ತಿದ್ದೇವೆ.

೧. ರಂಗೋಲಿ ಚಿತ್ರಕಲೆ

೨. ಶೀಗಿ ಚಿತ್ರಕಲೆ

೩. ಕಸೂತಿ ಚಿತ್ರಕಲೆ

೪. ಹಚ್ಚೆ ಚಿತ್ರಕಲೆ

೫. ಬೆಳದಿಂಗಳ ಚಿತ್ರಕಲೆ

೬. ಚಿತ್ತಾರಗೊಂಬೆ ಚಿತ್ರಕಲೆ

೭. ನಾಗಾರಾಧನೆ ಮತ್ತು ಚಿತ್ರಕಲೆ

೮. ಯಕ್ಷಗಾನ ಮತ್ತು ಚಿತ್ರಕಲೆ

೯. ಬಿದರಿ ಚಿತ್ರಕಲೆ

೧೦. ಭೂತಾರಾಧನೆ ಮತ್ತು ಚಿತ್ರಕಲೆ

ಅಳಿದು ಹೋಗುತ್ತಿರುವ ನಮ್ಮ ಜಾನಪದರ ಈ ಚಿತ್ರಕಲೆಯನ್ನು ಉಳಿಸಿ ಬೆಳೆಸಿಕೊಳ್ಳುವ ಮತ್ತು ಜನಸಾಮಾನ್ಯರಿಗೂ ಪರಿಣಿತರಿಗೂ ಸುಲಭ ಬೆಲೆಯಲ್ಲಿ ಕಲೆಯ ಈ ಸಾಹಿತ್ಯವನ್ನು ತಲುಪಿಸುವುದು ನಮ್ಮ ಉದ್ದೇಶವಾಗಿದೆ. ಎಲ್ಲ ವರ್ಗದ ಜನರು ಕಲೆಯನ್ನು ಅರ್ಥೈಸಿಕೊಳ್ಳಬೇಕು ಮತ್ತು ಅದರೊಂದಿಗೆ ತಾವೂ ಬೆರೆತುಕೊಳ್ಳಬೇಕು ಅಂದಾಗ ಮಾತ್ರ ಕಲೆ ಉಳಿಯುತ್ತದೆ ಮತ್ತು ಬೆಳೆಯುತ್ತದೆ. ಇಂತಹ ಕೆಲಸಗಳು ಹಲವಾರು ರೀತಿಯಿಂದ ಆಗಬೇಕಾಗಿದೆ. ಕಲಾ ಪ್ರದರ್ಶನ, ಕಲಾಶಿಬಿರ, ವಿಚಾರ ಸಂಕಿರಣ, ಕಲಾ ಪ್ರಾತ್ಯಕ್ಷಿಕೆ ಇತ್ಯಾದಿಯಾಗಿ ಮಾಡುತ್ತ ಹೆಚ್ಚು ಹೆಚ್ಚು ಜನಪ್ರಿಯಗೊಳಿಸುವ ಕೆಲಸಗಳು ನಡೆದಷ್ಟು ಈ ಕ್ಷೇತ್ರ ಬೆಳೆಯುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಜನಪ್ರಿಯ ಕಲಾಮಾಲಿಕೆಯಲ್ಲಿ ಈ ಹೊತ್ತಿಗೆಗಳನ್ನು ಪ್ರಕಟಿಸುತ್ತಿದ್ದೇವೆ. ನಮ್ಮ ಮನವಿಯನ್ನು ಒಪ್ಪಿ ಈ ಹೊತ್ತಿಗೆಗಳನ್ನು ತಮ್ಮ ಬಿಡುವಿಲ್ಲದ ವೇಳೆಯಲ್ಲಿಯೂ ನಮಗಾಗಿ ಕಷ್ಟಪಟ್ಟು ಬರೆದುಕೊಟ್ಟ ಎಲ್ಲ ಲೇಖಕರಿಗೆ ಮತ್ತು ಈ ಪುಸ್ತಕಗಳ ಯೋಜನೆಯನ್ನು ರೂಪಿಸಿ, ಪರಿಣಿತ ಲೇಖಕರನ್ನು ಹುಡುಕಿ, ಅವರಿಂದ ಬರವಣಿಗೆಯನ್ನು ಬರೆಯಿಸಿ ಅವುಗಳನ್ನು ಸುಂದರವಾಗಿ ಸಂಪಾದಿಸಿ ಕೊಟ್ಟವರು ಅಕಾಡೆಮಿಯ ಸದಸ್ಯರಾದ ಸಂಶೋಧಕ ಡಾ.ಎಸ್.ಸಿ.ಪಾಟೀಲ ಅವರಿಗೆ ಅಕಾಡೆಮಿಯ ಪರವಾಗಿ ವಂದನೆಗಳು.

ನಾವು ಮೂರು ವರ್ಷಗಳಲ್ಲಿ ಮಾಡಿದ ಕಾರ್ಯಕ್ರಮಗಳ ಪಟ್ಟಿಯನ್ನು ನಿಮ್ಮ ಮುಂದಿಟ್ಟಿದ್ದೇವೆ. ಎಲ್ಲಾ ಕಾರ್ಯಕ್ರಮಗಳಲ್ಲೂ ನಮ್ಮೊಡನೆ ಸಹಕರಿಸಿದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕೇಂದ್ರ ಲಲಿತಕಲಾ ಅಕಾಡೆಮಿ, ರೀಜನಲ್ ಸೆಂಟರ್ ಚೆನ್ನೈ, ಐಫೇಕ್ಸ್ ಸಂಸ್ಥೆಗೆ ವಂದನೆಗಳು. ನನ್ನೊಡನೆ ಇದುವರೆಗೂ ಸಹಕರಿಸಿ ಉಪಯುಕ್ತ ಸಲಹೆಗಳನ್ನು ನೀಡಿದ ಸದಸ್ಯ ಮಿತ್ರರೆಲ್ಲರಿಗೂ ನನ್ನ ಇಡೀ ತಂಡದ ಪರವಾಗಿ ಹಾಗೂ ವೈಯಕ್ತಿಕವಾಗಿ ಮತ್ತೊಮ್ಮೆ ವಂದನೆಗಳನ್ನು ಸಲ್ಲಿಸುತ್ತಿದ್ದೇನೆ.

ವಿಶೇಷವಾಗಿ ಸಮನ್ವಯಕಾರರಾಗಿ ಈ ಕಾರ್ಯ ಆಗು ಮಾಡಿದ ಸದಸ್ಯ ಶ್ರೀ ಪ.ಸ. ಕುಮಾರ್ ಅವರಿಗೆ ನನ್ನ ಕೃತಜ್ಞತೆಗಳು. ಈ ಎಲ್ಲ ಪ್ರಕಟಣೆಗಳೂ ವಿವಿಧ ಮುದ್ರಣಾಲಯಗಳಲ್ಲಿ ರೂಪತಳೆದಿದ್ದು, ಅವುಗಳ ಮಾಲೀಕರಿಗೆ, ಮುಖಚಿತ್ರವನ್ನು ಕಲಾಕೃತಿಯೆಂಬಂತೆಯೇ ರಚಿಸಿಕೊಟ್ಟ ಶ್ರೀ ಸುಧಾಕರ ದರ್ಬೆ ಅವರಿಗೆ, ಅಕಾಡೆಮಿ ರಿಜಿಸ್ಟ್ರಾರ್ ಶ್ರೀ ಬಿ.ಟಿ. ಮುನಿರಾಜಯ್ಯ ಮತ್ತು ಸಿಬ್ಬಂದಿವರ್ಗ, ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಬೆಂಬಲ ನೀಡಿದ ಮಹನೀಯರಿಗೆಲ್ಲಾ ನಮ್ಮ ಧನ್ಯವಾದಗಳು. ನಮ್ಮ ಈ ಕಿರುಪ್ರಯತ್ನಗಳನ್ನು ಕಲಾವಿದರು, ಸಹೃದಯ ಕಲಾಸಕ್ತರು ತುಂಬು ಹೃದಯದಿಂದ ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಬೆಂಗಳೂರು
೨೦೦೪

ಪೀಟರ್ ಎ. ಲೂಯಿಸ್
ಅಧ್ಯಕ್ಷರು

ಸಂಪಾದಕೀಯ

ಎಲ್ಲ ಅನ್ಯಶಿಸ್ತುಗಳಲ್ಲಿ ಆದಂತೆ ದೃಶ್ಯಕಲೆಯ ಕ್ಷೇತ್ರದಲ್ಲೂ ಹೊಸ ನೀರು ಪಶ್ಚಿಮದಿಂದ ಹರಿದು ಬಂದಿದೆ. ಅದರೊಂದಿಗೆ ನಮ್ಮದೇ ಆದ ದೇಶಿಪರಂಪರೆಯ ತಿಳುವಳಿಕೆಯ ಹಿನ್ನಲೆಯಲ್ಲಿಯೂ ಈ ಕಲೆ ಬೆಳೆದು ಬಂದಿದೆ. ಈ ಎರಡೂ ವಿಭಿನ್ನ ಜ್ಞಾನ ಪರಂಪರೆಯ ತಿಳುವಳಿಕೆಯ ಸಂಪರ್ಕ, ಸಂಸರ್ಗದಲ್ಲಿ ಮತ್ತೊಂದು ಬಗೆಯ ಹೊಸಜ್ಞಾನ ಪ್ರವಾಹ ನಮ್ಮ ಕಲಾಪ್ರಪಂಚದಲ್ಲಿ ಸಂಚಲನೆಗೊಂಡಿದ್ದು ಅದು ನಮ್ಮನ್ನು ದಿಗ್ಭ್ರಮೆಗೊಳಿಸುವಷ್ಟು ಈ ಕ್ಷೇತ್ರವನ್ನು ಆವರಿಸಿಕೊಳ್ಳುತ್ತಿದೆ.

ನಮ್ಮ ತನವನ್ನೆಲ್ಲ ನಾವು ಎಲ್ಲಿ ಕಳೆದುಕೊಳ್ಳುತ್ತೇವೆ ಎಂಬ ಆತಂಕ ಕೂಡ ಕಲಾವಲಯದಲ್ಲಿ ಉಂಟಾಗುತ್ತದೆ. ಜಾಗತೀಕರಣ ನಮ್ಮ ಸ್ಥಳೀಕರಣದ ಕಲಾ ಸಂಸ್ಕೃತಿಯ ಮೇಲೆ ಮೂಡಿಸಿದ ಈ ಪರಿಣಾಮದ ಬಗ್ಗೆ ಗಂಭೀರ ಚಿಂತನೆಗಳು ನಡೆಯಬೇಕಾಗಿವೆ. ಇಂತಹ ಸಂಕ್ರಮಣ ಕಾಲದಲ್ಲಿ ಸಹಜವಾಗಿಯೇ ದೇಶಿಕಲಾ ಚಿಂತನೆಗೆ ಹೆಚ್ಚು ಪ್ರಾಮುಖ್ಯತೆ ಪ್ರಾಪ್ತವಾಗುತ್ತಲಿದೆ.

ಕರ್ನಾಟಕದಲ್ಲಿ ಈಗ ಸ್ಥಾನಿಕ ನೆಲೆಯಲ್ಲಿ ಪ್ರಾದೇಶಿಕ ಹಿನ್ನಲೆಯ ದೇಶಿಚಿತ್ರ ಕಲೆಯ ಬಹುವಿನ್ಯಾಸಗಳ ಕಡೆಗೆ ನಾವು ಗಮನಹರಿಸಬೇಕಾಗಿದೆ. ಇಂದು ಶಿಷ್ಟಪರಂಪರೆಯ ಚಿತ್ರಕಲೆ ವ್ಯಾಪಕವಾದ ಪ್ರಚಾರ ಮಾಧ್ಯಮದಿಂದ ಮುಂಚೂಣಿಯಲ್ಲಿದ್ದು ಚಿತ್ರಕಲೆ ಎಂದರೆ ಶಿಷ್ಟ ಚಿತ್ರಕಲೆಯೇ ಎಂಬ ವಾತಾವರಣ ಉಂಟಾಗಿದೆ. ಆದರೆ ಈ ಕಲೆಯ ತಾಯಿಬೇರುಗಳು ಜನಪದ ಚಿತ್ರಕಲೆಯಿಂದ ಬಂದವುಗಳು ಎಂಬ ಪ್ರಜ್ಞೆಯನ್ನು ನಾವು ಅರಿಯಬೇಕಾಗಿದೆ. ಈ ಹಿನ್ನಲೆಯಲ್ಲಿ ನಮ್ಮ ಜಾನಪದ ನೆಲೆಯ ಚಿತ್ರಕಲಾ ಸಂಸ್ಕೃತಿಯನ್ನು ನಾವು ಜಾಗತಿಕ ನೆಲೆಯಲ್ಲಿ ಪರಿಚಯಿಸುವ, ಅನ್ವಯಗೊಳಿಸುವ, ಕಾರ್ಯಕ್ರಮಗಳನ್ನು ಅಸ್ತಿತ್ವಕ್ಕೆ ತರಬೇಕಾಗಿದೆ. ಈ ದಿಸೆಯಲ್ಲಿ ಅಕಾಡೆಮಿಯ ಈ ಯೋಜನೆ ಒಂದು ಸಣ್ಣ ಪ್ರಯತ್ನ ಮಾತ್ರ. ಹೆಚ್ಚಿನ ಅಧ್ಯಯನಗಳಿಗೆ ಇದು ನಾಂದಿಯಾಗುತ್ತದೆ ಎಂಬ ವಿಶ್ವಾಸ ನಮ್ಮದಾಗಿದೆ. ಸಾವಿರಾರು ವರ್ಷಗಳ ನಮ್ಮ ಚಿತ್ರಕಲೆಯನ್ನು ಅಭ್ಯಸಿಸಿದಾಗ ಕೂಡ ನಮ್ಮ ಜಾನಪದದ ವಿವಿಧ ಮುಖಗಳು ಅದರಲ್ಲಿ ಅಂತರ್ಗತವಾಗಿರುವುದನ್ನು ಮತ್ತು ಅದಕ್ಕೆ ಒಂದು ಜೀವಶಕ್ತಿ ಒದಗಿಸಿರುವುದನ್ನು ವಿದ್ವಾಂಸರು ಈಗಾಗಲೇ ಗುರುತಿಸಿದ್ದಾರೆ. ಹೀಗೆ ಜಾನಪದ ನಮ್ಮ ಪ್ರಾಚೀನ ಮಾರ್ಗ ಚಿತ್ರಕಲೆಯ ಒಂದು ಅವಿಭಾಜ್ಯ ಅಂಗವಾಗಿರುವುದನ್ನು ಯಾರು ಅಲ್ಲಗಳೆಯುವಂತಿಲ್ಲ.

ಜಾನಪದ ಜನಪದರ ಬದುಕಿನ ಸಂಸ್ಕೃತಿಯನ್ನು ಬಿಂಬಿಸುವ ಜೀವಂತ ವ್ಯವಸ್ಥೆ. ಜನಾಂಗದ ಬದುಕಿನೊಂದಿಗೆ ಪರಂಪರಾಗತವಾಗಿ ಬೆಳೆದು ಬಂದಿರುವ ಜನಪದ ಚಿತ್ರಕಲೆ ಆಯಾ ಪ್ರದೇಶದ ಜನಾಂಗದ ಸಾಂಸ್ಕೃತಿಕ ಅಧ್ಯಯನಕ್ಕೆ ಮೂಲ ಆಕರ ಸಾಮಗ್ರಿಯಾಗಿದೆ. ನಾಡಿನ ಸಂಸ್ಕೃತಿ ಹಾಗೂ ಪರಂಪರೆಯನ್ನು ಜೀವಂತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡು ಬಂದ ಹಿರಿಮೆ ಇವುಗಳಿಗೆ ಇದೆ. ವ್ಯಕ್ತಿ ತನ್ನ ಅನುಭವಗಳಿಗೆ ಜೀವ ಕೊಟ್ಟಿದ್ದು, ಬಣ್ಣ ತುಂಬಿದ್ದು ಇಂಥ ಕಲೆಗಳ ಮೂಲಕವೇ. ವ್ಯಕ್ತಿಯ ಬದುಕಿನಷ್ಟೇ ವೈವಿಧ್ಯಮಯ, ವರ್ಣಮಯವಾಗಿ ಈ ಕಲೆ ಬೆಳೆದು ಬಂದಿದೆ.

ಇಂದಿನ ಶಿಷ್ಟಪರಂಪರೆ ಚಿತ್ರಕಲೆಯೇ ನಮ್ಮ ಚಿತ್ರಕಲೆ ಎಂಬ ಭ್ರಮೆಯಲ್ಲಿರುವ ನಮಗೆ ನಮ್ಮ ದೇಶಿಚಿತ್ರಕಲೆಯ ಬಗೆಗಿನ ತಿಳುವಳಿಕೆ ತೀರ ಕಡಿಮೆ. ಈ ಕೊರತೆಯನ್ನು ಹೋಗಲಾಡಿಸುವ ಪ್ರಯತ್ನವಾಗಿ ಅಕಾಡೆಮಿ ದೇಶೀ ಜನಪ್ರಿಯ ಕಲಾಮಾಲೆಯ ಅಡಿಯಲ್ಲಿ ಕರ್ನಾಟಕದ ವಿವಿಧ ಪ್ರದೇಶದ ಪ್ರಾತಿನಿಧಿಕವಾದ ಜನಪದ ಚಿತ್ರಕಲೆಯ ಗ್ರಂಥಗಳನ್ನು ಹೊರತರಲಾಗುತ್ತಿದೆ. ಇಲ್ಲಿ ಜನಪದ ಚಿತ್ರಕಲೆಯನ್ನು ತಾತ್ವಿಕ ಮತ್ತು ಸೈದ್ಧಾಂತಿಕ ನೆಲೆಯಲ್ಲಿ ವ್ಯಾಖ್ಯಾನಿಸುವ, ವಿಶ್ಲೇಷಿಸುವ ಮತ್ತು ದಾಖಲೀಕರಣಗೊಳಿಸುವ ಮಹತ್ವದ ಉದ್ದೇಶವನ್ನು ಹೊಂದಲಾಗಿದ್ದು ಕ್ಷೇತ್ರಕಾರ್ಯದಿಂದ ಮೂಲ ಪ್ರಮಾಣಭೂತವಾದ ಸಂಶೋಧನಾ ವಿವರಗಳು ಇಲ್ಲಿ ಹರಳುಗಟ್ಟಿ ನಿಂತಿವೆ.

ಈ ಗ್ರಂಥಗಳನ್ನು ಬರೆಯಿಸುವ ಸಂದರ್ಭದಲ್ಲಿ ನಾನು ಕೊಟ್ಟ ತೊಂದರೆಯನ್ನು ಸಹಿಸಿಕೊಂಡು ಪ್ರೀತಿಯಿಂದ ಬರೆದುಕೊಟ್ಟ ಎಲ್ಲಾ ಸನ್ಮಿತ್ರ ಬರಹಗಾರರಿಗೆ ಮತ್ತೊಮ್ಮೆ ವಂದನೆಗಳನ್ನು ಹೇಳುತ್ತೇನೆ.

ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಪೀಟರ್ ಎ.ಲೂಯಿಸ್ ಮತ್ತು ಪ್ರಕಟಣಾ ಸಮಿತಿಯ ಸದಸ್ಯರು ಹಾಗೂ ಅಕಾಡೆಮಿಯ ಎಲ್ಲಾ ಸದಸ್ಯರು ಈ ಯೋಜನೆಯಲ್ಲಿ ಈ ಗ್ರಂಥಗಳನ್ನು ಪ್ರಕಟಿಸಲು ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದರೊಂದಿಗೆ ಸಹಕಾರ ನೀಡಿದ್ದಾರೆ. ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ಬಿ.ಟಿ.ಮುನಿರಾಜಯ್ಯ ಅವರು ನನಗಿಂತಲೂ ಹೆಚ್ಚು ಕಾಳಜಿವಹಿಸಿ ಬರಹಗಳನ್ನು ತರಿಸಿಕೊಡಲು ಮತ್ತು ಮುದ್ರಣದ ಜವಾಬ್ದಾರಿಯನ್ನು ಹೊತ್ತು ಸಹಾಯ ಮಾಡಿದ್ದಾರೆ. ಅವರು ತೋರಿದ ಪ್ರೀತಿ, ಸಹಕಾರಕ್ಕೆ ವಂದನೆಗಳು. ಪ್ರಕಟಣೆಯಲ್ಲಿ ಸಹಾಯ ಮಾಡಿದ ಸ್ನೇಹಿತ ಸದಸ್ಯರಾದ ಪ.ಸ.ಕುಮಾರ ಅವರಿಗೂ ಅಕಾಡೆಮಿಯ ಸಿಬ್ಬಂದಿ ವರ್ಗದವರಿಗೂ ಮತ್ತು ಕಡಿಮೆ ವೇಳೆಯಲ್ಲಿ ಅಕ್ಷರ ಜೋಡಣೆ ಮತ್ತು ಪುಟವಿನ್ಯಾಸ ಮಾಡಿಕೊಟ್ಟ ಹೊಸಪೇಟೆಯ ಯಾಜಿ ಗ್ರಾಫಿಕ್ಸ್‌ನ ಸವಿತಾ ಯಾಜಿ ಮತ್ತು ಗಣೇಶ ಯಾಜಿಯವರಿಗೆ ಸಹ ವಂದನೆಗಳನ್ನು ತಿಳಿಸುವುದು ನನ್ನ ಕರ್ತವ್ಯವಾಗಿದೆ.

ಬಸವ ಜಯಂತಿ
೨೦೦೪

ಡಾ. ಎಸ್. ಸಿ. ಪಾಟೀಲ
ಸಂಪಾದಕರು



ಒಡ್ಡೋಲಗ



ಒಡ್ಡೋಲಗ



ರಾವಣನ ಪಾತ್ರ



ಶೂರ್ಪನಖಿ



ಸ್ತ್ರೀ ಪಾತ್ರ



ಋಷಿ ಪಾತ್ರ



ಬಡಗುತಿಟ್ಟಿನ ಕಿರೀಟವೇಷ



ಬಡಗುತಿಟ್ಟಿನ ಪಗಡೆವೇಷ



ಬಡಗುತಿಟ್ಟಿನ ಹಾಸ್ಯಗಾರ



ಬಡಗುತಿಟ್ಟಿನ ಸ್ತ್ರೀವೇಷ



ಬಡಗುತಿಟ್ಟಿನ ಸ್ತ್ರೀವೇಷ



ಹಾಸ್ಯಗಾರರ ವಿವಿಧ ರೂಪಗಳು



ಬಡಗುತಿಟ್ಟಿನ ಬಣ್ಣದ ಚೌಕಿ



ಬಾಲ ಗೋಪಾಲ ವೇಷ



ಬಡಗುತಿಟ್ಟಿನ ಮುಖವರ್ಣಿಕೆ



ಬಡಗುತಿಟ್ಟಿನ ಪಾತ್ರಧಾರಿಗಳು (ಮಹಿಳಾ ಕಲಾವಿದರು)



ಗರುಡನ ಪಾತ್ರ



ಬೇಡ ಮತ್ತು ಸ್ತ್ರೀ ವೇಷ



ತೆಂಕುತಿಟ್ಟಿನ ಪಾಂಡವ ಪಾತ್ರಗಳು



ಬಡಗುತಿಟ್ಟಿನ ಪಾಂಡವ ಪಾತ್ರಗಳು

ಲಲಿತಕಲೆಗಳ ಸಾಲಿಗೆ ಸೇರುವ ಯಕ್ಷಗಾನವು ಕರಾವಳಿ ಕರ್ನಾಟಕದ ಗಂಡುಕಲೆ ಯೆನಿಸಿದೆ. ಇದೊಂದು ಪ್ರಾಚೀನ ರಂಗಕಲೆಯಾಗಿದ್ದು ಇದರೊಳಗೆ ಸಂಗೀತ, ಸಾಹಿತ್ಯ, ಚಿತ್ರ, ಅಭಿನಯ, ಕುಣಿತ, ವೇಷ-ಭೂಷಣ, ಅಲಂಕಾರ ಹೀಗೆ ಕಲೆಯ ಎಲ್ಲ ಅಂಗಗಳು ಹಾಸು ಹೊಕ್ಕಾಗಿರುವು ದರಿಂದ ಇದೊಂದು 'ಸಂಕೀರ್ಣ ಕಲೆ' ಎನಿಸಿದೆ. ಜನರ ಮನಸ್ಸನ್ನು ಸೂರೆಗೊಳ್ಳುವ ಮೋಹಕ ಶಕ್ತಿ ಯಕ್ಷಗಾನಕ್ಕಿದೆ. ಈ ಮಣ್ಣಿನ ಆರಾಧನಾ ಕಲೆಗಳಾದ ಭಜನೆಯ ಕುಣಿತ, ಕಂಬಳ, ಭೂತದ ಕೋಲ, ಕಾಡ್ಯನಾಟ, ನಾಗಮಂಡಲ ಮುಂತಾದವುಗಳ ಮಧ್ಯೆ ಭರತನ ನಾಟ್ಯಶಾಸ್ತ್ರದ ಹೊಳಹನ್ನು ಹೊಂದಿಕೊಂಡು, ದೇವಾಲಯದಿಂದ ಬಯಲಿಗೆ ಬಂದು ಬಯಲಾಟವಾಗಿ, ದಶಾವತಾರದ ಕಥೆಗಳನ್ನು ತಿಳಿಸುತ್ತಾ ದಶಾವತಾರದ ಆಟವಾಗಿ, ಭಾಗವತರ ನಿರ್ದೇಶನದಲ್ಲಿ ಭಾಗವತರಾಟವಾಗಿ ಯಕ್ಷಗಾನ ರೂಪುಗೊಂಡಿದೆ. ಯಕ್ಷ ಗಾನದ ಸೊಬಗಿಗೆ ಬಣ್ಣಗಾರಿಕೆ ಮತ್ತು ಕಲಾತ್ಮಕ ಉಡುಗೆ ತೊಡುಗೆಗಳು ಅಗತ್ಯವಾಗಿವೆ.

ವಿಧಗಳು

ಯಕ್ಷಗಾನವನ್ನು ಮೂಡಲಪಾಯ, ಪಡುವಲಪಾಯವೆಂದು ಎರಡು ವಿಭಾಗ ಮಾಡುತ್ತಾರೆ. ಮೂಡಲಪಾಯದಲ್ಲಿ ದೊಡ್ಡಾಟ, ಸಣ್ಣಾಟಗಳಿದ್ದಂತೆ, ಪಡುವಲಪಾಯ ದಲ್ಲಿ ತೆಂಕುತಿಟ್ಟು, ಬಡಗುತಿಟ್ಟು ಎಂಬ ಎರಡು ಪದ್ಧತಿಗಳಿವೆ. ಕಾಸರಗೋಡು, ದಕ್ಷಿಣ ಕನ್ನಡ ಜಿಲ್ಲೆಯವರು ತೆಂಕುತಿಟ್ಟನ್ನು ಅನುಸರಿಸಿದರೆ ಉಡುಪಿ, ಉತ್ತರ ಕನ್ನಡ ಜಿಲ್ಲೆಯವರು ಬಡಗುತಿಟ್ಟನ್ನು ಅನುಸರಿಸುತ್ತಾರೆ. ಇತ್ತೀಚೆಗೆ ತೆಂಕು ತಿಟ್ಟಿನಲ್ಲಿ ತುಳುಭಾಷೆಯಲ್ಲಿ ಯಕ್ಷ ಗಾನವನ್ನು ಆಡುತ್ತಾರೆ.

ಯಕ್ಷಗಾನದ ಪ್ರಾಚೀನತೆಯ ಬಗ್ಗೆ ತಿಳಿಯುವಾಗ ಮೊದಲ ಉಲ್ಲೇಖ ೧೨ ನೆಯ ಶತಮಾನದ ಕನ್ನಡ ಕಾವ್ಯ 'ಚಂದ್ರ ಪ್ರಭ ಪುರಾಣ'ದಲ್ಲಿ ಬರುತ್ತದೆ. ೧೬ನೇ ಶತಮಾನದ ಕವಿ ರತ್ನಾಕರವರ್ಣಿ ತನ್ನ ಕೃತಿಯಲ್ಲಿ ಹೇಳಿರುವ 'ಎಕ್ಕಲಗಾಣ' ಎನ್ನುವ ನೃತ್ಯನಾಟಕವನ್ನು ಯಕ್ಷಗಾನವೆಂದೇ ತಿಳಿದುಕೊಳ್ಳಲು ಸಾಧ್ಯವಿದೆ. ಯಕ್ಷಗಾನವು ಉತ್ತರ ಭಾರತದ ಜನಪದ

ಕಲಾ ಆಚರಣೆಯಾದ ಜಾತ್ರಾ, ಚೌ, ಮಣಿಪುರಿ, ಭವಾಯ್, ಅಂಕಿಯಾನಾಟ್; ದಕ್ಷಿಣ ಭಾರತದ ವೀಥಿ ನಾಟಕ (ತೆಲುಗು), ತೆರುಕೂತ್ತ್ (ತಮಿಳು), ಕಥಕ್ಕಳಿ (ಮಲಯಾಳಂ), ದಶಾವತಾರಿ (ಕೊಂಕಣಿ-ಗೋವೆ), ಘಟ್ಟದ ಕೋರೆ ಇತ್ಯಾದಿ ರಂಗಕಲೆಗಳ ಪ್ರಾಚೀನತೆಯೇ ಯಕ್ಷಗಾನಕ್ಕೂ ಇರಬಹುದು ಎನ್ನಲಾಗಿದೆ. ಕರ್ನಾಟಕದ ಹಲವು ಭಾಗಗಳಲ್ಲಿ ಯಕ್ಷಗಾನ ರಂಗಭೂಮಿ ೧೬ನೆಯ ಶತಮಾನದಿಂದ ರೂಢಿಯಲ್ಲಿತ್ತು ಎಂದು ತಿಳಿದುಬಂದಿದೆ. ಪ್ರಸಂಗ ಸಾಹಿತ್ಯವು ಆಗ ಬೆಳೆಯಲಾರಂಭಿಸಿತ್ತು. ಅದೇ ಕಾಲದಲ್ಲಿ ಪ್ರಚಾರಗೊಂಡ ದಾಸ ಸಾಹಿತ್ಯದ ಪ್ರಭಾವ ಯಕ್ಷಗಾನ ಸಾಹಿತ್ಯದ ಮೇಲಾಗಿದೆಯೆಂದು ಒಪ್ಪಿಕೊಳ್ಳಬಹುದು. ಅಲ್ಲದೆ ಅದು ಸಾಕಷ್ಟು ನೃತ್ಯ ಪ್ರಧಾನ ನಾಟಕವಾಗಿ ಮುಂದುವರಿದಿತ್ತು.

ಹದಿನಾರನೆಯ ಶತಮಾನದ ಅವಧಿಯಲ್ಲಿ ಕರ್ನಾಟಕದ ಬಹು ಭೂಭಾಗವನ್ನು ವಿಜಯನಗರದ ಅರಸರುಗಳು ಆಳಿಕೊಂಡಿದ್ದರು. ಅವರ ಕಾಲದಲ್ಲಿ ಸಂಗೀತ, ಸಾಹಿತ್ಯ, ಕಲೆಗಳಿಗೆ ಹೆಚ್ಚಿನ ಪ್ರೋತ್ಸಾಹ ಸಿಗುತ್ತಿತ್ತು. ಅವರ ರಾಜಧಾನಿಯಾದ ವಿಜಯನಗರ ಇಂದಿನ ಬಳ್ಳಾರಿ ಜಿಲ್ಲೆಯಲ್ಲಿದೆ. ಬಳ್ಳಾರಿ ಜಿಲ್ಲೆಯ ಸೋಮಸಮುದ್ರ ಎಂಬಲ್ಲಿನ ಲಕ್ಷ್ಮೀ ನಾರಾಯಣ ದೇವಾಲಯದಲ್ಲಿರುವ ಒಂದು ಹಳೆಯ ದಾನಶಾಸನದಲ್ಲಿ (೧೫೫೬ ರ ಕಾಲ) ಯಕ್ಷಗಾನದ ಉಲ್ಲೇಖ ಸಿಗುತ್ತದೆ. ಆ ದೇವಾಲಯದಲ್ಲಿ ತಾಳಮದ್ದಳೆ ಸೇವೆಯನ್ನು ಸಲ್ಲಿಸಿದ ಇಬ್ಬರು ಬ್ರಾಹ್ಮಣರಿಗೆ ಉಂಬಳಿಕೊಟ್ಟ ದಾಖಲೆಯಿದೆ.

'ತಾಳಮದ್ದಳೆ' ಎನ್ನುವುದು ಯಕ್ಷಗಾನ ಆಟದ ಒಂದು ಪ್ರಭೇದ. ಇಂದಿನ ರೂಢಿಯಂತೆ ಈ 'ತಾಳಮದ್ದಳೆ' ಎಂಬುದು ವೇಷಭೂಷಣಗಳಿಲ್ಲದೆ, ಜನರು ಒಂದೆಡೆ ಕುಳಿತು ನೋಡುವ ರಂಗಪದ್ಧತಿಯೇ ಇರಬೇಕು. ಇಂದಿಗೂ ಈ ಪದ್ಧತಿ ಬಳ್ಳಾರಿ ಜಿಲ್ಲೆಯಲ್ಲೂ, ಮಲೆನಾಡಿನಲ್ಲೂ ರೂಢಿಯಲ್ಲಿದೆ. ಕಥಾನಕ ಹಾಡುವ ಭಾಗವತನ ಸುತ್ತಲೂ ಪಾತ್ರಧಾರಿಗಳು ತಮ್ಮ ನಿತ್ಯ ಉಡುಗೆಯಲ್ಲಿ ಕುಳಿತು ಮಾತಿನ ಮೂಲಕ ಕಥಾನಕವನ್ನು ಸಾಗಿಸುತ್ತಾರೆ. ಇಲ್ಲಿ ಕುಣಿತವಿಲ್ಲ, ವೇಷವಿಲ್ಲ, ಗದ್ಯವೇ ಮುಖ್ಯ ಮಾಧ್ಯಮ. ಈ ಗದ್ಯ ಸ್ವಯಂಸ್ಫೂರ್ತಿಯಿಂದ ಆಡುವಂತಹುದು. ಪಾತ್ರಧಾರಿಯ ಜ್ಞಾನ ಮತ್ತು ಭಾವ ಪ್ರಕಾಶನದ ಮೇಲೆ ಇದು ಪರಿಣಾಮಕ್ಕೆ ಬರುತ್ತದೆ. ಹಿಂದೆ ತಾಳಮದ್ದಳೆ ಸೇವೆಯಲ್ಲಿ ಕಥಾನಕವಿರಲಿಲ್ಲ. ಸಾಂಪ್ರದಾಯಿಕ ಯಕ್ಷಗಾನ ಆಟದವರನ್ನು ತಮ್ಮ ಊರಿಗೆ ಆಮಂತ್ರಿಸಿದರೆ, ಆಟದವರು ಊರನ್ನು ಸೇರುತ್ತಲೇ ತಮ್ಮನ್ನು ಆಹ್ವಾನಿಸಿದವರ ಮನೆಯಲ್ಲೂ, ಆ ಊರಿನ ದೇವಸ್ಥಾನದಲ್ಲೂ ಕುಳಿತು 'ತಾಳಮದ್ದಳೆ ಸೇವೆ' ಮಾಡುವ ರೂಢಿಯಿತ್ತು.

ಈ ಸೇವೆಯಲ್ಲಿ ಭಾಗವತ ದೇವತಾಸ್ತುತಿ ಮಾಡುತ್ತಾನೆ. ತಾಳ ಬಾರಿಸುತ್ತಾನೆ. ಅವನ ಜತೆಯಲ್ಲಿ ಮದ್ದಲೆಗಾರ ಮದ್ದಳೆ ನುಡಿಸುತ್ತಾನೆ. ಈ ಸೇವೆ ಯಕ್ಷಗಾನ ತಾಳಮದ್ದಳೆ ಕೂಟದ ಒಂದು ಪೂರ್ವಭಾವಿ ಅಂಗ ಎಂಬುದನ್ನು ನಾವು ಒಪ್ಪಿಕೊಳ್ಳಬಹುದು.

ಯಕ್ಷಗಾನ ಆರಂಭ ಕಾಲದಿಂದಲೂ ದೇವಾಲಯಗಳ ಕೂಸಾಗಿತ್ತು. ಈಗಲೂ ಮೇಳಗಳು ದೇವರ ಹೆಸರಿನಲ್ಲಿಯೇ ಇರುತ್ತವೆ. ಆಟ ಪ್ರಾರಂಭಿಸುವುದು ದೇವಸ್ಥಾನದ ಬಯಲಿನಲ್ಲಿಯೇ. ಆ ವರ್ಷದ ಮುಕ್ತಾಯದ ಆಟ ಕೂಡಾ ಅಲ್ಲಿಯೇ. ಹೆಚ್ಚಿನ ಮೇಳಗಳು ಗಣಪತಿ, ಶಿವ, ವಿಷ್ಣು, ದೇವಿಯರ ಹೆಸರಿನಲ್ಲಿಯೇ ನಡೆದುಬಂದಿವೆ. ದೇವಿ ಹಾಗೂ ಗಣಪತಿಯ ಹೆಸರಿನ ಮೇಳಗಳು ಬಹಳಷ್ಟಿವೆ. ಯಾವ ದೇವರ ಹೆಸರಿನಲ್ಲಿ ಮೇಳ ಇರುವುದಾದರೂ ಚೌಕಿಯಲ್ಲಿ (ವೇಷ ಹಾಕುವ ಸ್ಥಳ) ನಡೆಯುವುದು ಗಣಪತಿ ಪೂಜೆಯೇ. ರಾಜ ವೇಷದ ಕಿರೀಟವನ್ನೇ ಗಣಪತಿ ಎಂದು ಭಾವಿಸಿ ಪೂಜಿಸುತ್ತಾರೆ.

ಯಕ್ಷಗಾನದ ಅವಯವಗಳು

ಯಕ್ಷಗಾನ ರಂಗಸ್ಥಳದಲ್ಲಿ ಭಾಷೆ, ಸಂಗೀತ, ನೃತ್ಯಗಳೆಂಬ ಮೂರು ಮಾಧ್ಯಮಗಳು ಕೂಡಿಕೊಂಡಿರುತ್ತವೆ. ಇವಲ್ಲದೆ ಮುಖವರ್ಣಿಕೆ ಮತ್ತು ಉಡುಗೆ, ಅಲಂಕಾರಗಳೂ ಇರುತ್ತವೆ. ಯಕ್ಷಗಾನವು ಜಾನಪದ ಕಲೆ ಎಂದು ಕರೆಯುವ ಕಾರಣ ಇದು ಜನಪದದ ಪೋಷಣೆಯಿಂದ ಬೆಳೆದು ಬಂದದ್ದು. ಈ ಕಲೆಯಲ್ಲಿ ಪರಿಶ್ರಮವಿರುವ ಜನರು ಗ್ರಾಮಜೀವನದಲ್ಲಿ ಬೆರೆತವರು. ಇಡೀ ರಾತ್ರಿಯ ಆಟವನ್ನು ನೋಡಿ ಮೆಚ್ಚುವವರೂ ನಮ್ಮ ಹಳ್ಳಿಯ ಜನರು.

೧. ಯಕ್ಷಗಾನ ಸಾಹಿತ್ಯ : ಯಕ್ಷಗಾನದಲ್ಲಿ ಒಂದೊಂದು ಕಥಾನಕವನ್ನೂ 'ಪ್ರಸಂಗ' ಎಂಬ ಹೆಸರಿನಿಂದ ಕರೆಯುತ್ತಾರೆ. ಹಿಂದಿನ ಯಕ್ಷಗಾನ ಕವಿಗಳು ಕೃತಿರಚನೆಯನ್ನು ಶಾರದೆಯ ಆರಾಧನೆಯೆಂದು ಬಗೆದಿದ್ದರು. ಒಂದು ಬಾರಿಯೂ ಪ್ರದರ್ಶಿಸಲ್ಪಡದ ಹಲವು ಪ್ರಸಂಗಗಳಿವೆ. ದೇವತಾಪ್ರಾರ್ಥನೆ, ಪೀಠಿಕಾಸಂಧಿ, ಕಥಾಭಾಗ, ಮಂಗಲಪದ, ಕವಿಯ ಮುದ್ರಿಕೆ ಇತ್ಯಾದಿ ನಾನಾ ರೀತಿಯ ಛಂದಸ್ಸುಗಳಿಂದ ವಿರಚಿಸಲ್ಪಟ್ಟ ಪ್ರಸಂಗಗಳು ಕನ್ನಡದ ಮಹಾಕಾವ್ಯಗಳನ್ನು ಹೋಲುತ್ತವೆ. ಯಕ್ಷಗಾನ ಪ್ರಸಂಗಗಳು ರಾಮಾಯಾಣ, ಮಹಾಭಾರತ, ಭಾಗವತಾದಿಗಳಿಂದ ಆರಿಸಿದ ಭಾಗಗಳಾಗಿರುವುದರಿಂದಲೇ ಅವು ನಮ್ಮ ಪುರಾಣಸತ್ಯವನ್ನು ಜನಸಾಮಾನ್ಯರ ಹೃದಯಕ್ಕೆ ಸಾಗಿಸುವ ಪ್ರಭಾವಿ ವಾಹಕಗಳಾಗಿವೆ.

ಅಲ್ಲದೆ ಗದುಗಿನ ಭಾರತ, ಜೈಮಿನಿ ಭಾರತ, ಬತ್ತಲೇಶ್ವರ ಕವಿಯ ರಾಮಾಯಣ, ತೊರವೆ ರಾಮಾಯಣ ಗಳಂತಹ ಮಹಾಕಾವ್ಯಗಳ ಪದ್ಯಗಳನ್ನು ಗೌರವಯುತವಾಗಿ ಪ್ರಚಾರ ಪಡಿಸುವ ಮಾಧ್ಯಮಗಳೂ ಆಗುತ್ತವೆ. ಇತ್ತೀಚೆಗೆ ಕೆಲವು ಯಕ್ಷಗಾನ ಪ್ರಸಂಗಗಳು ಪುರಾಣ ಮಾರ್ಗವನ್ನು ಬಿಟ್ಟು, ಚಾರಿತ್ರಿಕ, ಕಾಲ್ಪನಿಕ ಮತ್ತು ಕ್ಷೇತ್ರೇತಿಹಾಸಗಳಾಗಿ ರಚನೆಯಾಗಿವೆ. ಈ ನಡುವೆ ತುಳು ಯಕ್ಷಗಾನಗಳಿಗೇನೂ ಬರವಿಲ್ಲ. ಆದರೆ ಅವು ಕೆಲವೊಮ್ಮೆ ಯಕ್ಷಗಾನದ ಘನತೆಗೆ ಭಂಗ ತರುತ್ತಿವೆ.

ಯಕ್ಷಗಾನದ ಪ್ರಮುಖ ಗುಣಲಕ್ಷಣಗಳನ್ನು ತಿಳಿಸುವಾಗ ಇದೊಂದು ನೃತ್ಯ ಹಾಗೂ ಸಂಗೀತವನ್ನು ಒಳಗೊಂಡ ರಂಗಕಲೆಯಾಗಿದೆ. ಆದ್ದರಿಂದ ಇದಕ್ಕೊಂದು ಕಥೆಬೇಕು. ಕಥೆ ಸಾಮಾನ್ಯವಾಗಿ ಪುರಾಣವನ್ನು ಆಧರಿಸಿರುತ್ತದೆ. ವಿಷ್ಣುವಿನ ಅವತಾರಗಳಿಗೆ ಸಂಬಂಧಪಟ್ಟ

ಕಥೆಗಳು ತುಂಬ ಇರುತ್ತವೆ. ಈ ಕಥೆಯು ಖಂಡ ಕಾವ್ಯದ ರೂಪದಲ್ಲಿದ್ದು ವಿವಿಧ ಛಂದಸ್ಸಿನ ೨೦೦ ರಿಂದ ೩೦೦ರಷ್ಟು ಪದ್ಯಗಳನ್ನು ಒಳಗೊಂಡಿರುತ್ತದೆ.

ಲಭ್ಯವಿರುವ ಅತಿ ಪ್ರಾಚೀನವಾದ ಯಕ್ಷಗಾನ ಕಾವ್ಯವೆಂದರೆ ೧೬ನೆಯ ಶತಮಾನದ ದೇವಿದಾಸನ 'ಕೃಷ್ಣಾರ್ಜುನ ಕಾಳಗ'. ದಕ್ಷಿಣ ಕನ್ನಡದಲ್ಲಿ ಪಾರ್ತಿಸುಬ್ಬನ ಕೃತಿಗಳೇ ಪ್ರಾಚೀನ ವೆಂದು ಹೇಳುತ್ತಾರೆ. ನಂತರ ವಿಷ್ಣು ಭಾಗವತನ 'ವಿರಾಟಪರ್ವ', 'ಬಾಣಾಸುರ ಕಾಳಗ', 'ಇಂದ್ರಕೀಲಕಗಳು', 'ಶ್ರೀಕೃಷ್ಣಲೀಲೆ' ಪ್ರಾಚೀನ ಯಕ್ಷಗಾನ ಸಾಹಿತ್ಯಗಳೆಂದು ಗುರುತಿಸ ಲಾಗಿದೆ.

ಯಕ್ಷಗಾನ ಪ್ರಸಂಗಗಳ ಹೆಸರುಗಳೇ 'ಕಾಳಗ'ಗಳೆಂದು ಇರುತ್ತದೆ. ಉದಾಹರಣೆಗೆ-ಬಭ್ರುವಾಹನ ಕಾಳಗ, ತಾಮ್ರಧ್ವಜ ಕಾಳಗ, ಸುಧನ್ವ ಕಾಳಗ, ಮಾರೀಮುಖ ಕಾಳಗ ಇತ್ಯಾದಿ. ಅದೇರೀತಿ ಪ್ರಣಯ, ವಿವಾಹ ಮೊದಲಾದ ಕಥೆಗಳಿಗೆ ಸಂಬಂಧಿಸಿದಂತೆ 'ಕಲ್ಯಾಣ, ಪರಿಣಯ, ಸ್ವಯಂವರ' ಮೊದಲಾದ ಹೆಸರುಗಳಿರುತ್ತವೆ. ಕನಕಾಂಗಿ ಕಲ್ಯಾಣ, ರುಕ್ಷಿಣಿ ಸ್ವಯಂವರ, ದ್ರೌಪದೀ ಸ್ವಯಂವರ, ಸುಭದ್ರಾ ಪರಿಣಯ ಇತ್ಯಾದಿ ಪ್ರಸಂಗಗಳು.

ನಮ್ಮ ಜಿಲ್ಲೆಯಲ್ಲಿ ಯಕ್ಷಗಾನ ಸಾಹಿತ್ಯ ವನ್ನು ಬೆಳಗಿಸಿದ ಕವಿಗಳು ಹಲವರು. ಕೆಲವರು ತಮ್ಮ ಕೃತಿಯಲ್ಲಿ ಕುಲ, ಗೋತ್ರ, ರಚನಾಕಾಲವನ್ನು ಸೂಚಿಸಿದ್ದಾರೆ. ಮತ್ತೆ ಕೆಲವರು ಅನಾಮಧೇಯರಾಗಿಯೇ ಉಳಿದಿರುವರು.

ಲಭ್ಯವಿರುವ ಅತಿ ಪ್ರಾಚೀನವಾದ ಯಕ್ಷಗಾನ ಕಾವ್ಯ ಕ್ರಿ.ಶ. ೧೫೬೪ರಲ್ಲಿ ರಚಿತವಾಗಿದೆ. ಅದು ಸಿಕ್ಕಿದ್ದು ಬ್ರಹ್ಮಾವರದಲ್ಲಿ. ಕೃತಿಯ ಹೆಸರು ವಿರಾಟಪರ್ವ. ಇದು ತಾಡವಾಲೆಯ ಗ್ರಂಥ. ಇದನ್ನು ಬರೆದ ಕವಿ ಅಜಪುರದ ರಾಮ ಪುತ್ರನಾದ ವಿಷ್ಣು ವಾರಂಬಳ್ಳಿ ಎಂಬವ. ಈತನು 'ಇಂದ್ರಕೀಲಕ', 'ಬಾಣಾಸುರ ಕಾಳಗ' ಎಂಬ ಇನ್ನೆರಡು ಪ್ರಸಂಗಗಳನ್ನೂ ಬರೆದಿದ್ದಾನೆ. ಇವನ ನಂತರ ೧೬ನೇ ಶತಮಾನದ ದೇವಿದಾಸ ಎಂಬವನು 'ಕರ್ಣಾರ್ಜುನ ಕಾಳಗ, ಚಿತ್ರಸೇನ ಕಾಳಗ, ಕೃಷ್ಣಸಂಧಾನ' ಪ್ರಸಂಗಗಳನ್ನು ರಚಿಸಿದ್ದಾನೆ. ೧೬ನೇ ಶತಮಾನದಲ್ಲಿ ರಚಿತವಾದ ಇನ್ನಿತರ ಪ್ರಮುಖ ಯಕ್ಷಗಾನ ಪ್ರಸಂಗಗಳೆಂದರೆ: ಐರಾವತ (ಅಜ್ಞಾನ ಕವಿ), ಪಂಚವಟಿ, ಬಭ್ರುವಾಹನ ಕಾಳಗ, ರುಕ್ಮಿಣೀ ಸ್ವಯಂವರ, ಸಭಾಲಕ್ಷಣ, ಕೃಷ್ಣ ಬಾಲಲೀಲೆ (ಇವಿಷ್ಟೂ ಅಜ್ಞಾತ ಕವಿಗಳದ್ದು), ಕನಕಾಂಗಿ ಕಲ್ಯಾಣ (ನಿತ್ಯಾನಂದ ಅವಧೂತ), ಕರ್ಣಾರ್ಜುನ ಕಾಳಗ (ಪಾಂಡೇಶ್ವರ ವೆಂಕಟ), ಕಾಲನೇಮಿಕಾಳಗ (ಪರಮೇಶ್ವರ ಭಟ್ಟ), ತಾಮ್ರಧ್ವಜ ಕಾಳಗ (ರಾಮ), ಶಂಬರಾಸುವ ಕಾಳಗ (ನಗಿರೆಯ ಸುಬ್ರಹ್ಮಣ್ಯ) ದಕ್ಷಿಣ ಕನ್ನಡದಲ್ಲಿ ಪಾರ್ತಿಸುಬ್ಬನ ಕೃತಿಗಳೇ ಪ್ರಾಚೀನವೆಂದು ಹೇಳುತ್ತಾರೆ.

ಈತ ಕುಂಬಳೆಯವ. 'ಯಕ್ಷಗಾನ ವಾಲ್ಮೀಕಿ' ಎಂಬ ಹಿರಿಮೆ ಹೊತ್ತಿರುವ ಪಾರ್ತಿಸುಬ್ಬನು ಯಕ್ಷಗಾನಕ್ಕೆಂದೇ 'ಪುತ್ರಕಾಮೇಷ್ಠಿ', 'ಸೀತಾಕಲ್ಯಾಣ' ಇತ್ಯಾದಿ ಎಂಟು ರಾಮಾ

ಯಣ ಪ್ರಸಂಗಗಳನ್ನು `ಐರಾವತ`ವೆಂಬ ಮಹಾಭಾರತ ಪ್ರಸಂಗವನ್ನೂ, `ಕೃಷ್ಣಚರಿತೆ` ಎಂಬ ಭಾಗವತ ಪ್ರಸಂಗವನ್ನೂ ಇವನು ಬರೆದಿದ್ದಾನೆ. ಕವಿ ದೇವಿದಾಸನ 'ದೇವಿ ಮಹಾತ್ಮೆ', `ಕೃಷ್ಣಸಂಧಾನ`, `ಭೀಷ್ಮಪರ್ವ', 'ಸೈಂಧವವಧೆ', `ಚಿತ್ರಸೇನ ಕಾಳಗ`, `ಗಿರಿಜಾ ಕಲ್ಯಾಣ` ಮುಂತಾದವು ಜನಪ್ರಿಯ ಪ್ರಸಂಗಗಳಾಗಿವೆ. ಇವರ ನಂತರದ ಕಾಲದಲ್ಲಿ ಹಟ್ಟಿಯಂಗಡಿ ರಾಮಭಟ್ಟ, ನಿತ್ಯಾನಂದ ಅವಧೂತ, ಮೂಲಿಕೆ ವೆಂಕಣ್ಣ, ಧ್ವಜಪುರ ನಾಗಪ್ಪಯ್ಯ ಮಟ್ಟಿ ವಾಸುದೇವ ಪ್ರಭು, ಕುದ್ರೆಪಾಡಿ ಈಶ್ವರ, ಸಂಕಯ್ಯ ಭಾಗವತ, ಮೂಲಿಕೆಯ ರಾಮಕವಿ ಮೊದಲಾದವರು ಗಮನಾರ್ಹ ಯಕ್ಷಗಾನ ಸಾಹಿತ್ಯವನ್ನು ರಚಿಸಿದ್ದಾರೆ. ಮೂಲಿಕೆಯ ಕವಿ ವೆಂಕಣ್ಣನು (೧೭೫೦) 'ಮಾನಸ ಚರಿತ್ರೆ' ಎಂಬ ಪ್ರಸಂಗವನ್ನು ಬರೆದಿದ್ದಾನೆ. ಮೂಲಿಕೆಯ ಇನ್ನೊಬ್ಬ ಕವಿ ಮಟ್ಟಿವಾಸುದೇವ ಪ್ರಭುರವರು (ಕ್ರಿ.ಶ.೧೮೦೫-೧೮೬೦) ಸಮುದ್ರ ಮಥನ, ಚಂದ್ರಹಾಸ ಚರಿತ್ರೆ, ರಾಧಾವಿಲಾಸ, ಬಿಲ್ಲಹಬ್ಬ ಮುಂತಾದ ಪ್ರಸಂಗಗಳನ್ನೂ ಬರೆದಿರುವರು. ವಿಟ್ಲದ ಅರಮನೆಯ ಆಸ್ಥಾನ ವಿದ್ವಾಂಸನಾಗಿದ್ದ ಸಂಕಯ್ಯ ಭಾಗವತನು (೧೮೮೭ರಲ್ಲಿ) ತುಳು ಪಂಚವಟಿಯನ್ನು ಬರೆದಿದ್ದನು.

ಅಲ್ಲದೆ ವಿಮಲಾನಂದ ಕವಿಯ ಗಯಚರಿತೆಯ ಆಧಾರದಿಂದ ಕೃಷ್ಣಾರ್ಜುನ ಕಾಳಗ ವೆಂಬ ಪ್ರಸಂಗವನ್ನೂ ಬರೆದಿದ್ದಾನೆ. ಮೂಲಿಕೆಯ ಕವಿ ರಾಮಕೃಷ್ಣ (೧೮೩೦-೧೯೧೦) ಮತ್ತು ಹಳೇಮಕ್ಕಿ ರಾಮ ಎಂಬವರೂ ಕೃಷ್ಣಾರ್ಜುನ ಕಾಳಗ ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಹಟ್ಟಿಯಂಗಡಿ ರಾಮಭಟ್ಟರು ಅತಿಕಾಯ ಕಾಳಗ, ಸುಭದ್ರಾ ಕಲ್ಯಾಣಗಳನ್ನು ಬರೆದಿದ್ದಾರೆ. ದೇವೀ ಮಹಾತ್ಮೆಯನ್ನು ಪ್ರಥಮಬಾರಿಗೆ ರಚಿಸಿರುವ ದೇವಿದಾಸನು ಗಿರಿಜಾ ಕಲ್ಯಾಣ, ಅಭಿಮನ್ಯು ಕಾಳಗ ಮೊದಲಾದ ಕೃತಿಗಳನ್ನು ರಚಿಸಿದ್ದಾನೆ.

ಕ್ರಿ.ಶ.೧೬೦೦ರಲ್ಲಿ ಕವಿ ಪಾಂಡೇಶ್ವರದ ವೆಂಕಟನು ಕರ್ಣಾರ್ಜುನ ಕಾಳಗವನ್ನೂ, ಗೆರೆಸೊಪ್ಪೆ ಶಾಂತಯ್ಯನು ತೆಂಕುತಿಟ್ಟಿನ ಕರ್ಣಪರ್ವವನ್ನೂ, ಅಜಪುರದ ವೆಂಕಟನು ಮೈರಾವಣ ಕಾಳಗ ವನ್ನೂ, ಧ್ವಜಪುರದ ನಾಗಪ್ಪಯ್ಯನು ನಳಚರಿತ್ರೆಯನ್ನೂ, ಭೀಮಕವಿಯು ರಾಜಸೂಯವನ್ನೂ ಬರೆದು ಆ ಶತಮಾನದ ಯಕ್ಷಗಾನ ಸಾಹಿತ್ಯವನ್ನು ಬೆಳಗಿಸಿರುವರು. ಬೋರಾಡಿ ವೆಂಕಟರಮಣಯ್ಯನವರು ಜಾಂಬವತಿ ಕಲ್ಯಾಣ ಮತ್ತು ಸತ್ಯಭಾಮಾ ಪರಿಣಯ ವನ್ನೂ, ವಾಮಂಜೂರು ಪರಮೇಶ್ವರಯ್ಯನವರು ರೇವತೀ ಕಲ್ಯಾಣವನ್ನೂ ಬರೆದಿದ್ದಾರೆ.

೧೯ನೆಯ ಶತಮಾನದಲ್ಲಿ ರಚಿತವಾದ ಇನ್ನಿತರ ಪ್ರಮುಖ ಯಕ್ಷಗಾನ ಸಾಹಿತ್ಯಗಳೆಂದರೆ ಕುದ್ರೆಪ್ಪಾಡಿ ಈಶ್ವರನು ಬರೆದಿರುವ (೧೮೦೦-೧೮೬೦) ಅಶ್ವಮೇದ ಪರ್ವ, ಸುಧನ್ವ ಕಾಳಗ, ನಂದಳಿಕೆ ಲಕ್ಷ್ಮೀನಾರ್ಣಪ್ಪನು ರಚಿಸಿರುವ ರತ್ನಾವತೀ ಕಲ್ಯಾಣ ಮತ್ತು ಕುಮಾರ ವಿಜಯ ಗಳು. ಅದೇ ರೀತಿ ಬನ್ನೂರು ನಾರಾಯಣ ಭಾಗವತರ ಮೂಲಕಾಸುರ ಕಾಳಗ, ಬಡಕಬೈಲು ಪರಮೇಶ್ವರಯ್ಯನ ತುಳು ಕೃಷ್ಣಸಂಧಾನ, ಅಂಬರೀಷ ಚರಿತ್ರೆ, ದೇವೀಮಹಾತ್ಮೆ, ದಶಾ ವತಾರ, ಕುರುಕ್ಷೇತ್ರ, ದೇವ ಪಾಂಡ್ಯ ಪ್ರತಾಪವನ್ನು ಬರೆದ ಅಡೂರು ಬಡಕ್ಕಿಲ ವಿಷ್ಣಯ್ಯ,

ಹಲವು ಯಕ್ಷಗಾನ ಕೃತಿಗಳ ಪ್ರಕಾಶನಕ್ಕೆ ಕಾರಣನಾದ ಕಡಂದಲೆ ರಾಮರಾಯನು ದ್ರೌಪದೀ ಪ್ರತಾಪ, ರಾಮಾಂಜನೇಯ ಕಾಳಗಗಳೆಂಬ ಪ್ರಸಂಗಗಳನ್ನು ಬರೆದಿರುವನು.

ಮೃದಂಗ ಶಾರ್ದೂಲನೆಂಬ ಬಿರುದಾಂಕಿತ ಕೆಮ್ಮಣ್ಣು ನಾರ್ಣಪ್ಪಯ್ಯನವರು ಕಮಲ ಕುಮಾರಿಯೆಂಬ ಐತಿಹಾಸಿಕ ಪ್ರಸಂಗವನ್ನೂ ಶುಕ ಸಪ್ತತಿಯಿಂದ ಆರಿಸಿದ ಪ್ರಯಾಗ ಕ್ಷೇತ್ರ ಮಹಾತ್ಮೆಯನ್ನೂ ಬರೆದಿರುವರು.ಪೆರಡಾಲ ಕೃಷ್ಣಯ್ಯನವರು ಗೆಲುವಿನ ಕತ್ತಿ ಮತ್ತು ಯಾದವಾಭ್ಯುದಯಗಳನ್ನೂ, ಡಿ.ವಿ.ಹೊಳ್ಳರು ತ್ರಿಪುರದಹನ, ಅಕ್ಷಯಾಂಬರ ವಿಲಾಸ, ಕೃಷ್ಣವಿಜಯ ಪ್ರಸಂಗಗಳನ್ನೂ, ಕಿರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರು ಸ್ವಯಂಪ್ರಭಾ ಪರಿಣಯ, ಶಿವಪಂಚಾಕ್ಷರಿ ಮಹಿಮೆಗಳನ್ನೂ, ಕಾಸರಗೋಡಿನ ಸಿದ್ಧಾಂತಿ ಪಂಡಿತ ಸುಬ್ರಾಯನು ರಾವಣವಧೆ ಪ್ರಸಂಗವನ್ನೂ ವಿರಚಿಸಿ ಕೀರ್ತಿ ಪಡೆದಿರುವರು. ಸುರತ್ಕಲ್ಲಿನ ಬಳಿಯ ಮೈಪಾಡಿ ವೆಂಕಟರಮಣರು (೧೮೬೦-೧೯೪೦) ಪ್ರಹ್ಲಾದ ಚರಿತ್ರೆ, ಮದಾಲಸಾ ಕಲ್ಯಾಣ, ಕುಮಾರ ವಿಜಯಗಳನ್ನೂ, ಜತ್ತಿ ಈಶ್ವರ ಭಾಗವತರು ಮಕರಾಕ್ಷ ಕಾಳಗ, ಸಂಪೂರ್ಣ ರಾಮಾಯಣ, ಅಂಜನಾ ವಿಲಾಸಗಳನ್ನೂ, ಅದ್ಯಪಾಡಿಯ ಕವಿ ರಾಮಕೃಷ್ಣನು ಭದ್ರಾಯು ಚರಿತ್ರೆ, ಮಾರ್ಕಂಡೇಯ ಚರಿತ್ರೆ, ವಾಮನಚರಿತ್ರೆ, ವೃತ್ರಾಸುರ ಕಾಳಗ ಮುಂತಾದ ಪ್ರಸಂಗಗಳನ್ನೂ ಬರೆದು ಪ್ರಸಿದ್ಧರಾಗಿರುವರು. ಭಾಗವತಿಗೆ ಮತ್ತು ಕೃತಿರಚನೆ ಎರಡರಲ್ಲೂ ಪ್ರಸಿದ್ಧರಾಗಿರುವ ದಿ.ಬಲಿಪ ನಾರಾಯಣ ಭಾಗವತರು (೧೮೮೭-೧೯೬೪) ಅಹಲ್ಯಾಶಾಪ, ನಾಗವಿಜಯ, ಆಟದೊಳಗಣ ಆಟವೆಂಬ ಪ್ರಸಂಗಗಳನ್ನು ರಚಿಸಿರುವರು. ಮೌವ್ವಾರು ಕಿಟ್ಟಣ್ಣ ಭಾಗವತರು (೧೮೯೨-೧೯೭೪) ಕನಕಮಾಲಿನಿ ಸ್ವಯಂವರವನ್ನೂ, ಅಗರಿ ಶ್ರೀನಿವಾಸ ಭಾಗವತರು ಭರತೇಶ ವೈಭವ, ಲಲಿತೋಪಾಖ್ಯಾನ, ತಿರುಪತಿ ಮಹಾತ್ಮೆ, ಕಟೀಲು ಕ್ಷೇತ್ರಮಹಾತ್ಮೆ ಪ್ರಸಂಗಗಳನ್ನೂ, ಪುತ್ತಿಗೆ ಜ್ಯೊಸ ರಾಮಕೃಷ್ಣ ಭಾಗವತರು ಶ್ರೀರಾಮಪಟ್ಟಾಭಿಷೇಕವನ್ನೂ ಬರೆದಿರುವರು.

ಪ್ರಸಿದ್ಧ ಅರ್ಥಧಾರಿಯಾಗಿ 'ಕವಿಭೂಷಣ'ರೆನಿಸಿರುವ ಕೆ.ವಿ.ವೆಂಕಪ್ಪ ಶೆಟ್ಟರು ಭರತೇಶ ದಿಗ್ವಿಜಯ, ವಾಲಿಸುಗ್ರೀವ ಇತ್ಯಾದಿ ಯಕ್ಷಗಾನ ಪ್ರಬಂಧಗಳನ್ನೂ ಬರೆದಿರುವರು. ಚವರ್ಕಾಡು ಶಂಭು ಜೋಯಿಸರು ಕುಮುದಾಕ್ಷಿ ಕಲ್ಯಾಣವನ್ನು ರಚಿಸಿರುವರು.

ಪ್ರಸಿದ್ಧ ಯಕ್ಷಗಾನ ಪ್ರಸಂಗಗಳಾದ ಭಾನುಮತಿ ಕಲ್ಯಾಣವನ್ನು ಬವುಲಾಡಿ ಹಿರಿಯಣ್ಣ ಹೆಬ್ಬಾರರು, ಮದನಾಂಗಿ ಕಲ್ಯಾಣವನ್ನು ವೆಂಕಟೇಶನಾತ್ಮಜ ರಾಮನು, ವಿಷಯಾ ಕಲ್ಯಾಣವನ್ನು ಜಿ.ಪರಮೇಶ್ವರ ಭಟ್ಟರು, ನವೀನ ಸುಭದ್ರಾ ಕಲ್ಯಾಣವನ್ನು ಪರಮೇಶ್ವರರು, ತರಣಿಸೇನ ಕಾಳಗವನ್ನು ಅಲೆಟ್ಟಿ ರಾಮಣ್ಣ ಶಗ್ರಿತ್ತಾಯರು, ನೀಲಧ್ವಜ ಕಾಳಗವನ್ನು ಅಜ್ಜನಗದ್ದೆ ಶಂಕರ ನಾರಾಯಣಯ್ಯ, ರಾವಣಾಸುರ ಕಾಳಗವನ್ನು ಕೊರ್ಡೆಲ್ ವೆಂಕಟ್ರಾಯರು, ಭಸ್ಮಾಸುರ ಕಾಳಗ ಮತ್ತು ರಾವಣವಧೆಯನ್ನು ಕುಂಜಿಬೆಟ್ಟು ಅನಂತಯ್ಯನವರು ಬರೆದಿರುವರು.

ಭದ್ರಾಯು ಚರಿತ್ರೆಯನ್ನು ವಾರಂಬಳ್ಳಿ ವೆಂಕಪ್ಪಯ್ಯ, ಭೀಷ್ಮ ಪ್ರಪಂಚವನ್ನು ಮಗೆಗಾರ ಸೀತಾರಾಮ ಹೆಗಡೆ, ಬೈದ್ಯರ್ಕಳ ಪ್ರತಾಪವನ್ನು ಪಂದುಬೆಟ್ಟು ವೆಂಕಟ್ರಾಯರು, ವಿಜಿತಾಶ್ವ ವಿಜಯವನ್ನು ರಾಮಚಂದ್ರ ಪುಣಿಂಚಿತ್ತಾಯರು, ರಾಜಹಂಸ ವಿಜಯವನ್ನು ಅಂಬೆಮೂಲೆ ಗೋವಿಂದ ಭಟ್ಟರು, ಅನುಸಾಲ್ವ ಗರ್ವಭಂಗವನ್ನು ಶಂಕರ ನಾರಾಯಣಾಯ್ಯರು, ಖರಾಸುರ ವಧೆಯನ್ನು ಕುರ್ಯಾಡಿ ಶಂಕರನಾರಾಯಣ ಭಟ್ಟರು, ಕೃಷ್ಣಗಾರುಡಿ ಪ್ರಸಂಗವನ್ನು ಕೋಟ ಶ್ರೀನಿವಾಸ ನಾಯಕರು ಬರೆದಿರುವರು.

ಆಶುಕವಿ ಕನ್ಯಾನ ವೆಂಕಟರಮಣ ಭಟ್ಟರು ಬ್ರಹ್ಮಕಪಾಲ ಪ್ರಸಂಗವನ್ನು ಕೊಳಂಬೆ ಪುಟ್ಟಣ್ಣಗೌಡರು ಅಂಧಕಾಸುವ ಕಾಳಗವನ್ನೂ, ರಾಜಗೋಪಾಲಾಚಾರ್ಯರು ದ್ರೋಣಪರ್ವ ಮತ್ತು ದಿನಾಶ್ವಮೇಧಗಳನ್ನೂ, ಲಕ್ಷ್ಮೀನಾರಾಯಣಾಚಾರ್ಯರು ಸುಬಾಹು ಕಾಳಗವನ್ನೂ, ಬೋಳಾರ ವಾಸುದೇವಯ್ಯನವರು ಚಂದ್ರಮೌಳಿ ಕಾಳಗವನ್ನೂ, ಬೋಳಾರ ವಾಸುದೇವಯ್ಯ ನವರು ಚಂದ್ರಮೌಳಿ ಕಾಳಗವನ್ನೂ, ಶ್ರೀಪಾದದಾಸ ಹಂಡೆಯವರು ಚಂಪಕ ವಿಜಯ ವನ್ನೂ, ಪದ್ಯಾಣ ವೆಂಕಟೇಶ ಭಟ್ಟರು ಸೌದಾಸ ಚರಿತ್ರೆಯನ್ನು ಬರೆದಿದ್ದಾರೆ.

ಯು.ವಿ.ಗೋವಿಂದ ಭಟ್ಟರು ಮರುತಾಶ್ವಮೇಧವನ್ನೂ, ಯು.ವಾಸುದೇವ ನ್ಯಾಕರು ಗಣಪತಿ ಪ್ರತಾಪವನ್ನೂ, ಬಡಕ್ಕಿಲ ವೆಂಕಟರಮಣ ಭಟ್ಟರು ಭೀಮ ವಿಜಯವನ್ನೂ, ನಿಂಜೂರು ರಾಯಪ್ಪ ಪೈಯವರು ಸೋಮರಾಜ ಪ್ರತಾಪವನ್ನೂ, ವಶಕುಂಜ ನರಸಿಂಹ ಭಟ್ಟರು ಕಾಶ್ಮೀರ ಕಾಳಗವನ್ನೂ, ಶೀರೂರು ಫಣಿಯಪ್ಪನವರು ಕೃಷ್ಣಗಾರುಡಿಯನ್ನೂ, ಪುತ್ತೂರು ಶಿವಶಂಕರ ಶಾಸ್ತ್ರಿಗಳು ಸ್ವಾತಂತ್ರ್ಯೋದಯ, ಜಪಾನಿ ಕೃಷಿ ವಿಜಯಗಳನ್ನೂ, ಕೃಷ್ಣ ತೋಳ್ಪಾಡಿತ್ತಾಯರು ಕಲಿಯುಗ ಮಹಾತ್ಮೆಯನ್ನೂ, ಮುದ್ರಾಡಿ ವೆಂಕಪ್ಪಯ್ಯನವರು ಭೂಕೈಲಾಸ, ಮಂಡೋದರಿ ಪರಿಣಯವನ್ನೂ ರಚಿಸಿದ್ದಾರೆ.

ಭದ್ರಗಿರಿ ನೀಲಯ್ಯ ಬಂಗೇರರು ಶಿಖಂಡಿ ಸ್ವಯಂವರವನ್ನೂ, ಗುರುವೀರಭದ್ರ ನ್ಯಾಕರು ಬೇಡರ ಕಣ್ಣಪ್ಪ ಪ್ರಸಂಗವನ್ನೂ, ಪೆರ್ಡೂರು ಕೆ.ರಘುರಾಮರು ಮೇಧಾವಿ ಕಾಳಗವನ್ನೂ, ಆಗುಂಬೆ ಅನಂತಮೂರ್ತಿ ಹೆಬ್ಬಾರರು ಸುಕನ್ಯಾ ಪರಿಣಯವನ್ನೂ, ಎ.ಎಸ್.ಅನಂತಕೃಷ್ಣರು ಸತಿಸಾವಿತ್ರಿ ಪ್ರಸಂಗವನ್ನೂ ಹೆಂದಾಡಿ ಮಧುಸೂಧನ ಭಟ್ಟರು ಪಾಶುಪತಾಸ್ತ್ರವನ್ನೂ, ಕವಿ ಶಂಕರನಾರಾಯಣರು ರತ್ನಪ್ರಭಾ ಪರಿಣಯವನ್ನೂ, ಸಿ.ಬಿ.ಎಸ್. ದಾಮೋದರರು ಸತೀ ಸಾವಿತ್ರಿ ಪ್ರಸಂಗವನ್ನೂ ಬರೆದು ಯಕ್ಷಗಾನವನ್ನು ಬೆಳಗಿಸಿರುವರು.

ಯಕ್ಷಗಾನ ಖ್ಯಾತ ಕಲಾವಿದರೆನಿಸಿದ ಶೇಣಿ ಗೋಪಾಲಕೃಷ್ಣ ಭಟ್ಟರು ಶ್ರೀಮತೀ ಪರಿಣಯ ಮತ್ತು ಮೇಘನಾದ ವಿಜಯಗಳನ್ನೂ, ನಾರಂಬಾಡಿ ಸುಬ್ಬಯ್ಯ ಶೆಟ್ಟರು ದೇವು ಪುಂಜ ಪ್ರತಾಪವನ್ನೂ ಬರೆದಿರುವರು. ಕಡಂದೇಲು ಪುರುಷೋತ್ತಮ ಭಟ್ಟರು ಓಂ ಮಾಯಾ ಲೀಲಾ ಕೃತಿಯನ್ನು, ಕುಬೆವೂರು ಪುಟ್ಟಣ್ಣ ಶೆಟ್ಟರು ಶನೀಶ್ವರ ಮಹಾತ್ಮೆ, ಕಾರ್ನಾಡು ಕ್ಷೇತ್ರಮಹಾತ್ಮೆ ಮತ್ತು ಹರಿಹರ ಕ್ಷೇತ್ರಮಹಾತ್ಮೆ ಕೃತಿಗಳನ್ನು ಬರೆದಿರುವರು.

ಎ.ವಿ.ಶ್ಯಾಮರಾವ್ ಪಣಕಡೆಯವರು ತ್ರಿಶಂಕು ಸ್ವರ್ಗ ಕೃತಿಗಳನ್ನು ಮಂಗಳೂರಿನ ಮಧುಕುಮಾರರು ಗುಪ್ತಕ್ಷೇತ್ರ ಮಹಾತ್ಮೆ, ಏಕಾದಶಿ ದೇವೀಮಹಾತ್ಮೆಗಳನ್ನೂ ರಚಿಸಿ ರುವರು. ಸೀತಾನದಿ ಗಣಪಯ್ಯ ಶೆಟ್ಟರು ಕರ್ಣ ಪಟ್ಟಾಭಿಷೇಕ, ಶಕುಂತಲಾ ಪರಿಣಯ ಮತ್ತು ಹಲವು ಕ್ಷೇತ್ರಮಹಾತ್ಮೆಗಳನ್ನು ಬರೆದಿರುವರು. ಪದ್ಯರಚನೆಯಲ್ಲಿ ಸಿದ್ಧಹಸ್ತರಾದ ನಾರಾಯಣ ಸೆಟ್ಟರು ಅರುಣಾಸುರ ವಧೆ, ಕಟೀಲು ಕ್ಷೇತ್ರೇತಿಹಾಸ ವಿರಚಿಸಿರುವರು.

ಅನೇಕ ಯಕ್ಷಗಾನ ಕವಿಗಳು ತಮ್ಮ ಕುರಿತು ಯಾವುದೇ ವಿಚಾರವನ್ನು ಸೂಚಿಸದೆ ಅನಾಮಧೇಯರಾಗಿಯೇ ಉಳಿದಿರುವರು. ನೂರಾರು ಅಮೂಲ್ಯ ಅಪ್ರಕಟಿತ ಪ್ರಸಂಗಗಳು ಸುರತ್ಕಲ್ಲಿನ ವಿದ್ವಾನ್ ಕೆ.ವೆಂಕಟ್ರಾಯಾಚಾರ್ಯರಿಂದಲೂ, ಪ್ರೊ.ಅಮೃತ ಸೋಮೇಶ್ವರ ರಿಂದಲೂ ಸಂಗ್ರಹಿಸಲ್ಪಟ್ಟಿವೆ. ಅಮೃತ ಸೋಮೇಶ್ವರರು ಪುರಾಣಕತೆಗಳಿಗೆ ಆಧುನಿಕತೆಯ ಸ್ಪರ್ಶ ನೀಡಿ ಉತ್ತಮ ಕನ್ನಡ ಪ್ರಸಂಗಗಳನ್ನು ರಚಿಸಿದರು.

ಇವರು ಬರೆದ ತ್ರಿಪುರ ಮಥನ, ಮಹಾಕವಿ ಮಗಧೇಂದ್ರ, ಕಾಯಕಲ್ಪ, ಸಹಸ್ರಕವಚ ಮೋಕ್ಷ ಮುಂತಾದ ಯಕ್ಷಗಾನ ಪ್ರಸಂಗ ಗಳು ಜನಪ್ರಿಯವಾಗಿವೆ. ಇದೇ ರೀತಿ ಬೊಟ್ಟಿಕೆರೆ ಪುರುಷೋತ್ತಮ ಪೂಂಜ, ಕೆ.ಎಂ.ರಾಘವನ್ ನಂಬಿಯಾರ್‌ರವರೂ ಒಳ್ಳೆಯ ಪ್ರಸಂಗಗಳನ್ನು ಬರೆದಿದ್ದಾರೆ. ಅನಂತರಾಮ ಬಂಗಾಡಿಯವರು ತುಳು ಭಾಷೆಯಲ್ಲಿ ಯಕ್ಷಗಾನ ಪ್ರಸಂಗ ಗಳನ್ನು ಬರೆದಿದ್ದಾರೆ. ಇತ್ತೀಚೆಗೆ ಪ್ರಸಂಗ ಬರೆಯುವವರ ಸಂಖ್ಯೆಯೂ ಹೆಚ್ಚುತ್ತಿದೆ.

ಯಕ್ಷಗಾನದ ಶಾಸ್ತ್ರೀಯ ಪ್ರಸಂಗಗಳೆಲ್ಲವೂ ಮಧ್ಯಯುಗದ ಕನ್ನಡ ಕವಿಗಳಾದ ಕುಮಾರ ವ್ಯಾಸ, ಕುಮಾರ ವಾಲ್ಮೀಕಿ ಮತ್ತು ಲಕ್ಷ್ಮೀಶರ ಕಾವ್ಯಗಳಿಂದ ಪ್ರಭಾವಿತಗೊಂಡಿದೆ. ದುಷ್ಟರ ಮೇಲೆ ಶಿಷ್ಟರು, ಅಧರ್ಮದ ಮೇಲೆ ಧರ್ಮ ಹಾಗೂ ರಾಕ್ಷಸರ ಮೇಲೆ ದೇವತೆಗಳು ಜಯ ಗಳಿಸುವುದು ಯಕ್ಷಗಾನದ ಕಥಾವಸ್ತುವಾಗಿರುತ್ತದೆ. ಕಥೆಯನ್ನು ಕಾಳಗ (ಯುದ್ಧ) ಅಥವಾ ಕಲ್ಯಾಣ(ವಿವಾಹ)ಕ್ಕೆ ಒತ್ತುಕೊಟ್ಟು ಬರೆಯುತ್ತಾರೆ.

ಕಥೆಗಳು ನವರಸಗಳನ್ನೊಳಗೊಂಡಿದ್ದರೂ ಅವುಗಳಲ್ಲೂ ವೀರ, ರೌದ್ರ, ಕರುಣ, ಹಾಸ್ಯ ಹಾಗೂ ಶೃಂಗಾರ ರಸಗಳಿಗೆ ವಿಶೇಷವಾದ ಒತ್ತು ನೀಡಲಾಗುತ್ತದೆ. ಯಕ್ಷಗಾನ ಕಾವ್ಯಗಳು ಪದಲಾಲಿತ್ಯ, ನಾದಮಾಧುರ್ಯ ಮತ್ತು ನಾಟಕದ ನಿರೂಪಣೆಗಳನ್ನೊಳಗೊಂಡು ರಮ್ಯವಾಗಿರುತ್ತವೆ. ಷಟ್ಪದಿ ಕಾವ್ಯ ವಿಶೇಷವಾಗಿ ಕಂಡುಬರುತ್ತದೆ.

ಅಚ್ಚಿನ ಸೌಕರ್ಯ ಇಲ್ಲದಿದ್ದ ಕಾಲದಲ್ಲಿ ಬಾಯಿಯಿಂದ ಬಾಯಿಗೆ ಹಬ್ಬಿ ಯಕ್ಷಗಾನ ಕಾವ್ಯಗಳು ಬೆಳೆದು ಬಂದವು. ಇಪ್ಪತ್ತನೆಯ ಶತಮಾನದಲ್ಲಿ ಪುರಾಣ ಕಥಾ ಪ್ರಸಂಗಗಳ ಜೊತೆಗೆ ಪುರಾಣದ ಹಿನ್ನೆಲೆ ಇಲ್ಲದ ಹೊಸ ಕಥಾ ಪ್ರಸಂಗಗಳನ್ನು ಕವಿಗಳು ರಚಿಸಿದರು. ಜನಪದ ಕಥೆಗಳ ಆಧಾರದಲ್ಲೂ ಪ್ರಸಂಗಗಳನ್ನು ರಚಿಸಿದರು. ಬರಬರುತ್ತಾ ಐತಿಹಾಸಿಕ ಹಾಗೂ ಭೂತದ ಕಥೆಗಳನ್ನು ಯಕ್ಷಗಾನ ರೂಪಕಗಳಾಗಿ ಪರಿವರ್ತಿಸಿದರು. ಇವುಗಳೂ ಜನಪ್ರಿಯತೆ ಗಳಿಸಿದವು.

ಯಕ್ಷಗಾನ ಪ್ರಸಂಗಗಳನ್ನು ಪ್ರಕಾಶನಗೊಳಿಸುವಲ್ಲಿ ಉಡುಪಿಯ ಶ್ರೀ ಮಧ್ವಸಿದ್ಧಾಂತ ಗ್ರಂಥಾಲಯದವರು ಅತ್ಯುತ್ಸಾಹ ತೋರಿದ್ದಾರೆ. ಯಕ್ಷಗಾನದ ಎಲ್ಲಾ ಸೂಕ್ಷ್ಮ ವಿಚಾರ ಗಳನ್ನು ಡಾ. ಶಿವರಾಮ ಕಾರಂತರು ಗ್ರಂಥರೂಪದಲ್ಲಿ ಪ್ರಕಟಿಸಿದ್ದಾರೆ. ಯಕ್ಷಗಾನ ಕೃತಿ-ಕರ್ತೃಗಳ ಬಗ್ಗೆ ಕಟೀಲು ಶ್ರೀ ಪು.ಶ್ರೀನಿವಾಸ ಭಟ್ಟರು ವಿಚಾರಗಳನ್ನು ಸಂಗ್ರಹಿಸಿಟ್ಟಿದ್ದಾರೆ. ಡಾ.ಪ್ರಭಾಕರ ಜೋಶಿಯವರು ಯಕ್ಷಗಾನ ವಿಮರ್ಶಕರಾಗಿ ಪ್ರಸಿದ್ಧರಾಗಿದ್ದಾರೆ.

ಯಕ್ಷಗಾನ ಆಟ : ಯಕ್ಷಾಗನ ಮೇಳಗಳು ಪ್ರತಿವರ್ಷ ನವೆಂಬರಿನಿಂದ ಮೇ ಅಂತ್ಯದವರೆಗೆ ಸುಮಾರು ಆರುತಿಂಗಳ ಕಾಲ ಆಟವಾಡುತ್ತಾರೆ. ಸಂಚಾರಕ್ಕೆ ಹೊರಡುವ ಮುನ್ನ ಮೇಳಕ್ಕೆ ಸಂಬಂಧಿಸಿದ ದೇವಸ್ಥಾನದಲ್ಲಿ ಸೇವೆ ಆಟವನ್ನು ಆಡುತ್ತಾರೆ. ಕೊನೆಗೂ ಆಡುತ್ತಾರೆ. ಆಮೇಲೆ ಮೇಳವು ಆಯಾ ದಿನ ನಿಶ್ಚಿತವಾಗಿರುವಲ್ಲಿಗೆ ಹೋಗುತ್ತದೆ. ಹಳೆಯ ಕ್ರಮದಂತೆ ಆಟ ಆಡಿಸುವವರಲ್ಲಿ ಒಂದು ನಿರ್ಧಾರವಾಗದಿದ್ದ ದಿನ ಮೇಳದವರು ಊರಿನ ಪ್ರಮುಖರೊಬ್ಬರಲ್ಲಿಗೆ ತಾವಾಗಿಯೇ ಹೋಗಿ ತಾಳಮದ್ದಳೆ ನಡೆಸುತ್ತಿದ್ದರು. ಇದು ಅವರ ಹರಕೆ ಇರುವ ಬಗ್ಗೆ ಸೂಚನೆ ಅಥವಾ ಅವರು ಆಟ ಆಡಿಸಬೇಕೆಂಬ ಕೇಳಿಕೆ ಮುಂದಿರಿಸುವ ಕ್ರಮವೂ ಆಗಿತ್ತು.

ತಾಳಮದ್ದಳೆ ಮುಗಿಸಿ ಕಲಾವಿದರು ಸ್ನಾನ, ಊಟ ತೀರಿಸಿ ನಿದ್ದೆ ಮಾಡುತ್ತಾರೆ. ಕಲಾವಿದರು ನಿರ್ಧರಿತ ಸ್ಥಳಕ್ಕೆ ಬರುವ ಮೊದಲೇ ಅವರ ಸರಕು ಸರಂಜಾಮುಗಳು, ಅಡುಗೆಯವರು ಅಲ್ಲಿಗೆ ಬಂದಿರುತ್ತಾರೆ. ಅವರಿಗೆ ಬೇಕಾದ ಅವಶ್ಯ ಸಾಮಗ್ರಿಗಳನ್ನೂ ಆಟ ಆಡುಸುವವರು ಕೊಡುತ್ತಾರೆ. ಇಂತಿಂತಹ ವಸ್ತುಗಳನ್ನು ಕೊಡಬೇಕೆಂಬ ಬಗ್ಗೆ ಒಂದು ನಿಶ್ಚಿತ ಪಟ್ಟಿ ಇರುತ್ತದೆ.

ಸಂಜೆ ಸುಮಾರು ಏಳು ಗಂಟೆಗೆ ಚೆಂಡೆಮದ್ದಳೆಯ 'ಕೇಳಿ' ಬಡಿಯುತ್ತಾರೆ. ಇದು ಸುತ್ತಮುತ್ತಲಿನ ಜನರಿಗೆ ಆಟ ನಡೆಯುವ ಸೂಚನೆಯನ್ನು ನೀಡುತ್ತದೆ. ಆ ಬಳಿಕ ವೇಷಧಾರಿಗಳು ಊಟ ಮುಗಿಸಿ ಚೌಕಿಗೆ ಬರುತ್ತಾರೆ. ಚೌಕಿಯ ಎದುರುಗಡೆ ರಂಗಸ್ಥಳವಿರುತ್ತದೆ. ಅದು ಸುಮಾರು ೨೦ ಅಡಿ ಅಗಲ ೩೦ ಅಡಿ ಉದ್ದವಿರುತ್ತದೆ. ರಂಗಸ್ಥಳದ ಹಿಂಬದಿಗೆ ಎತ್ತರದ ಹೊಡೆಮಂಚ ಅಥವಾ ಮೇಜುಗಳನ್ನು ಜೋಡಿಸಿರುತ್ತಾರೆ.

ಅದು ಭಾಗವತ, ಸಂಗೀತಗಾರ, ಮದ್ದಳೆಗಾರರು ಕುಳಿತುಕೊಳ್ಳುವ ಸ್ಥಳ. ಅದರ ಎಡ ಬಲಗಳಲ್ಲಿ ವೇಷಧಾರಿಗಳು ಬಂದು ಹೋಗಲು ಸ್ಥಳವಿರುತ್ತದೆ. ವೇಷಧಾರಿಗಳು ಯಾವಾಗಲೂ ಭಾಗವತನ ಎಡಮಗ್ಗುಲಲ್ಲಿ ಆಗಮಿಸಿ ಬಲ ಮಗ್ಗುಲಿಂದ ನಿರ್ಗಮಿಸುತ್ತಾರೆ. ರಂಗಸ್ಥಳದ ಬಲ ಮೂಲೆಯಲ್ಲಿ ಭಾಗವತನಿಗೆ ಸಮೀಪದಲ್ಲಿ ಚೆಂಡೆ ಬಾರಿಸುವವರು ಕುಳಿತುಕೊಳ್ಳುತ್ತಾರೆ. ರಂಗಸ್ಥಳದ ಹಿಂಬದಿಗೆ ಬಣ್ಣದ ಪರದೆಯಿದ್ದು ಅದರಲ್ಲಿ ಆಯಾ ಮೇಳದ ನಾಮಫಲಕ ವಿರುತ್ತದೆ. ಭಾಗವತರ ಮೇಜಿನ ಎದುರುಗಡೆ ವೇಷಧಾರಿಗಳಿಗಾಗಿ

ಸಿಂಹಾಸನ ವಿರುತ್ತದೆ. ಅದರ ಎದುರಿಗೆ ಬೇಕಾದಾಗ ಕೆಳಕ್ಕಿಳಿಯುವ ಸುತ್ತು ಪರದೆಯಿರು ತ್ತದೆ.

ಆಟದ ಚೌಕಿ(ಬಿಡಾರ)ಯ ತಲೆಯಲ್ಲಿ ದೇವರನ್ನು ಇರಿಸುತ್ತಾರೆ. ನಂತರ ಇಬ್ಬದಿ ಯಲ್ಲೂ ಸಾಲಾಗಿ ವೇಷಧಾರಿಗಳು ಸ್ಥಾನಾನುಕ್ರಮದಿಂದ ಕುಳಿತುಕೊಳ್ಳುತ್ತಾರೆ. ಮಧ್ಯದಲ್ಲಿ ಸಾಲಾಗಿ ದೀಪಗಳನ್ನು ಇಳಿಬಿಡುತ್ತಾರೆ. ವೇಷಧಾರಿಗಳಲ್ಲಿ ಮೊದಲಿಗೆ ವೇಷನಾಯಕ, ಪ್ರತಿನಾಯಕ, ಬಣ್ಣದ ವೇಷದವರು ಕುಳಿತು ಕೊಳ್ಳುತ್ತಾರೆ. ಎರಡನೆಯದಾಗಿ ಎಡೆಬಣ್ಣ ಹಾಗೂ ಪೀಠಿಕೆವೇಷ (ನಾಯಕ)ದವರು, ಮೂರನೆಯದಾಗಿ ಪುಂಡುವೇಷ ಹಾಗೂ ಮೂರನೇ ವೇಷದವರು, ನಾಲ್ಕನೆಯದಾಗಿ ಸ್ತ್ರೀವೇಷ ಮತ್ತು ಇತರರು, ಅಡ್ಡ ಚೌಕಿಯಲ್ಲಿ ಹಾಸ್ಯಗಾರ ವೇಷದವರು ಕುಳಿತು ಕೊಳ್ಳುತ್ತಾರೆ. ಇದಿರಿಗೆ ಬಣ್ಣದ ಪೆಟ್ಟಿಗೆ ಕನ್ನಡಿಗಳನ್ನು ಇರಿಸಿಕೊಂಡು ವೇಷದ ಸಿದ್ಧತೆ ನಡೆಸುತ್ತಾರೆ. ಇಂತಹ ಪ್ರಸಂಗದಲ್ಲಿ ಇಂತಹವರು ವೇಷಗಳನ್ನು ಹಾಕ ಬೇಕೆಂಬ ಒಂದು ಪರಂಪರಾಗತ ಕ್ರಮವಿರುತ್ತದೆ. ಅದೇ ರೀತಿ ಯಾವ ವೇಷಕ್ಕೆ ಯಾವ ರೀತಿಯ ಕಿರೀಟ, ಚಲ್ಲಣ, ದಗಲೆ, ಬಣ್ಣದ ಸಾಮಗ್ರಿಗಳು, ಬಣ್ಣದ ವಸ್ತ್ರಗಳು ಇರ ಬೇಕೆಂಬುದರ ಬಗ್ಗೆಯೂ ಪೂರ್ವ ನಿಗಧಿತವಾಗಿರುತ್ತದೆ ಹಸುರು, ಹಳದಿ, ನೀಲಿ, ಕೆಂಪು ಬಣ್ಣದ ವಸ್ತುಗಳು ಮುಖ್ಯವಾಗಿ ಬಳಸಲ್ಪಡುತ್ತವೆ. ಇಡಿಯ ಕೂಟಕ್ಕೆ ಭಾಗವತನೇ ನಾಯಕ ನಾಗಿರುತ್ತಾನೆ.

ವಿನಾಯಕ ಮೂರ್ತಿಗೂ, ದೇವರ ಮೂರ್ತಿಗೂ, ಕಿರೀಟಕ್ಕೂ ಪೂಜೆಸಲ್ಲಿಸಿದ ಬಳಿಕವೇ ವೇಷ ಹಾಕುವ ಕೆಲಸ ಪ್ರಾರಂಭವಾಗುತ್ತದೆ. ಮೊದಲು ಆಟದ ಪೂರ್ವರಂಗದಲ್ಲಿ ನಿತ್ಯ ವೇಷಗಳಾದ ಬಾಲಗೋಪಾಲ, ಅರ್ಧನಾರೀಶ್ವರ, ಷಣ್ಮುಖ, ಸುಭ್ರಾಯ, ಜೋಡು ಸ್ತ್ರೀ ವೇಷ, ಮುಖ್ಯ ಸ್ತ್ರೀವೇಷಗಳು ಕ್ರಮವಾಗಿ ರಂಗಕ್ಕೆ ಬರುತ್ತಾರೆ. ಬಾಲಗೋಪಾಲರು ರಂಗ ದಲ್ಲಿ ಗಣಪತಿ ಪೂಜೆ ಮಾಡುತ್ತಾರೆ. ಈ ಮಧ್ಯೆ ಗುಲ್ಲಾಮಲ್ಲಿ, ಕೊಕ್ಕೆಚಿಕ್ಕ, ಮುಸುಲ್ಮಾನ್, ಕ್ರಿಶ್ಚಿಯನ್ ಮುಂತಾದ ಹಾಸ್ಯ ವೇಷಗಳೂ ಪೂರ್ವರಂಗದಲ್ಲಿ ಬರುವುದಿದೆ. ಮುಖ್ಯ ಭಾಗವತ ಸ್ತ್ರೀ ವೇಷದೊಂದಿಗೆ ರಂಗಕ್ಕೆ ಬರುತ್ತಾನೆ. ಮುಖ್ಯ ಸ್ತ್ರೀ ವೇಷದೊಂದಿಗೆ ಬರುವ ಹಾಸ್ಯಗಾರನು ಹೊಗಳಿಕೆ ಆರಂಭಿಸುತ್ತಾನೆ. ಆ ಮೇಳದ ದೇವರ, ಸ್ಥಳದ ದೇವರ, ಆಟ ಆಡಿಸುವವರ ಹೊಗಳಿಕೆ ನಡೆದ ಬಳಿಕ ಪೂರ್ವರಂಗ ಮುಕ್ತಾಯವಾಗುತ್ತದೆ.

ಪೂರ್ವರಂಗ ಮುಕ್ತಾಯದ ನಂತರ ಸುಮಾರು ಅರ್ಧ ಗಂಟೆಯಷ್ಟು ಕಾಲ ಚೆಂಡೆ ಮದ್ದಳೆಗಳ ಪೀಠಿಕೆ ಆರಂಭಗೊಂಡು ಸಾಗುತ್ತದೆ. ಇದರಲ್ಲಿ ಚಂಡೆಗಾರ ನಿಶ್ಚಿತವಾದ ನಿಲುಗಡೆಗಳೊಂದಿಗೆ ಹಲವು ತರದ ತಾಳ ವಿನ್ಯಾಸಗಳನ್ನು ಬಾರಿಸುತ್ತಾನೆ. ಇದರಿಂದ ಪೇಕ್ಷಕರ ಮನಸ್ಸು ಆಟದ ಭ್ರಾಮಕ ಪ್ರಪಂಚಕ್ಕೆ ಬರಲು ಸಿದ್ಧವಾಗುತ್ತದೆ. ಆಮೇಲೆ ಕಥೆ ಆರಂಭ ವಾಗುತ್ತದೆ. ಆರಂಭದ ಪಾತ್ರದ ಪ್ರವೇಶ ಒಡ್ಡೋಲಗ ಕುಣಿತ ತುಸು ದೀರ್ಘ.

ಹಾಗೆಯೇ ರಾಕ್ಷಸ-ರಾಕ್ಷಸಿ ವೇಷಗಳಿಗೆ, ಹನುಮಂತ ವೇಷಕ್ಕೆ ವಿಶಿಷ್ಟವಾದ ತೆರೆಕುಣಿತ ವಿರುತ್ತದೆ. ಮಹಿಷಾಸುರ, ವರಾಹ ಮುಂತಾದ ವೇಷಗಳು ವೇದಿಕೆಯ ಬಲುದೂರ ದಿಂದ ಹೊರಟು, ದೊಂದಿ (ಬೆಂಕಿಯ ದೀವಟಿಗೆ) ಹಿಡಿದು ಅದಕ್ಕೆ ರಾಳದ ಹುಡಿ ಎರಚುತ್ತಾ ಬೆಂಕಿಯ ಜ್ವಾಲೆಗಳೊಂದಿಗೆ ಸಭಾಮಧ್ಯದಿಂದ ಗಲಾಟೆ ಮಾಡುತ್ತಾ ರಂಗಸ್ಥಳಕ್ಕೆ ಬರುವ ಕ್ರಮವಿದೆ. ಈ ಅದ್ಭುತ ಚಿತ್ರಣಕ್ಕೆ ವಾದ್ಯಗಳು, ಡೋಲು, ಗರ್ನಾಲು, ದುರುಸುಗಳ ಗದ್ದಲವೂ ಸೇರಿಕೊಳ್ಳುತ್ತದೆ. ಮಹಿಷಾಸುರ ವಧೆಯಂತಹ ವಿಶಿಷ್ಟ ಪ್ರಕರಣಗಳಲ್ಲಿ ಕೋಳಿ, ಕುಂಬಳಕಾಯಿಗಳನ್ನು ಕಡಿದು ಬಲಿಕೊಡುವ ಕ್ರಮವೂ ಹಿಂದೆ ಇತ್ತಂತೆ.

ಆಟ ಮುಗಿದ ಬಳಿಕ ಭಾಗವತರು ಅಥವಾ ಮೇಳದ ವ್ಯವಸ್ಥಾಪಕರು ವೀಳ್ಯ(ಆಟಕ್ಕೆ ಗೊತ್ತು ಮಾಡಿದ ಹಣ)ವನ್ನೂ ಆಟ ಆಡಿಸುವವರಿಂದ ಸ್ವೀಕರಿಸಿ, ಅವರಿಗೆ ಒಳ್ಳೆಯ ದಾಗಲೆಂದು ಹರಸಿ ಮತ್ತೆ ಮುಂದಿನ ಊರಿಗೆ ಪ್ರಯಾಣ ಬೆಳೆಸುತ್ತಾರೆ. ದಿನವೂ ಸಂಚರಿಸುವ ಮೇಳಗಳ ಜನರ ಬದುಕು ವಿಚಿತ್ರವಾಗಿರುತ್ತದೆ. ಊರಿಂದೂರಿಗೆ ಪ್ರಯಾಣ, ಸಾಮಾನ್ಯವಾದ ಆಹಾರ, ಅಪೂರ್ಣನಿದ್ದೆ, ದಿನವೂ ಪರಿಶ್ರಮ, ಒಬ್ಬ ವೇಷಧಾರಿಗೆ ನಾಲ್ಕೈದು ಪಾತ್ರಗಳು ಆದರೂ ಅಲ್ಪ ಸಂಬಳ -ಇಷ್ಟು ಎಲ್ಲಾ ಪ್ರತಿಕೂಲಗಳೊಂದಿಗೆ ಮೂವತ್ತು-ನಲವತ್ತು ವರ್ಷಗಳ ತಿರುಗಾಟ ನಡೆಸಿದ ಯಕ್ಷಗಾನ ಕಲಾವಿದರ ಬಗ್ಗೆ ಎಣಿಸಿದಾಗ ಅವರ ಕಲಾಬದುಕು ಸಾರ್ಥಕವೆನಿಸುತ್ತದೆ.

ಮೇಳದ ಕಲಾವಿದರೊಳಗೆ ಕೆಲವೊಮ್ಮೆ ಅಲ್ಪಸ್ವಲ್ಪ ಜಗಳಗಳಾಗುವುದೂ ಇದೆ. ಮತ್ತೆ ರಾಜಿಯೂ ಆಗುತ್ತದೆ. ರಂಗದ ಹೊರಗೆ ಪರಸ್ಪರ ಸಂಭಾಷಣೆ ಇಲ್ಲದ ಕಲಾವಿದರು ರಂಗಸ್ಥಳ ದಲ್ಲಿ ಸೊಗಸಾದ ಸಂಭಾಷಣೆ ಮಾಡುವುದಿದೆ. ಹೀಗೆ ಆಟದ ಸಂಚಾರ, ಚೌಕಿ, ಬಿಡಾರ ಪ್ರಸಂಗ ಇತ್ಯಾದಿಗಳ ನಡುವೆ ಬದುಕಿನ ಅಪೂರ್ವ ಚಿತ್ರಗಳಿವೆ. ಜೀವಂತ ಸಂಘರ್ಷಗಳಿವೆ.

ಇತ್ತೀಚಿನ ವರ್ಷಗಳಲ್ಲಿ ಆಟಗಳ ರೀತಿ, ಆಡಳಿತ, ಸಂಚಾರಕ್ರಮ, ಸ್ಥಳನಿರ್ಣಯ, ಶಿಸ್ತುಗಳು ಇವುಗಳಲ್ಲೆಲ್ಲಾ ಬಹಳಷ್ಟು ಮಾರ್ಪಾಟಾಗಿವೆ. ಹೆಚ್ಚಿನ ಮೇಳಗಳು ಸ್ವಂತ ವಾಹನ ಗಳನ್ನು ಹೊಂದಿವೆ. ಕಲಾವಿದರ ಪ್ರಯಾಣದ ವ್ಯವಸ್ಥೆ ಈಗ ಚನ್ನಾಗಿದೆ. ಆಟದ ವ್ಯವಸ್ಥಾಪ ಕರು ತಮ್ಮ ಆರುತಿಂಗಳ ಸಂಚಾರದ ಕ್ರಮವನ್ನು ಮೊದಲೇ ನಿಶ್ಚಯಿಸಿಕೊಳ್ಳುತ್ತಾರೆ. ಇದಕ್ಕಾಗಿ ಒಬ್ಬ ಕ್ಯಾಂಪ್ ಮ್ಯಾನೇಜರ್ ಇರುತ್ತಾರೆ. ಇವರಿಗೆ ಸಾರ್ವಜನಿಕ ಸಂಪರ್ಕ ಮತ್ತು ವ್ಯವಹಾರ ಜ್ಞಾನ ಸಾಕಷ್ಟು ಇರಬೇಕಾಗುತ್ತದೆ.

ಇವರು ಪ್ರತಿ ಊರಿನ ಪ್ರಮುಖರನ್ನು ಸಂಪರ್ಕಿಸಿ ಅವರೊಂದಿಗೆ ಸಮಾಲೋಚಿಸಿ, ದಿನ ಗೊತ್ತುಪಡಿಸಿ, ಪ್ರಸಂಗವನ್ನು ನಿರ್ಣಯಿಸಿ ಪ್ರಚಾರದ ವ್ಯವಸ್ಥೆ, ಸರಕಾರಿ ಲೈಸನ್ಸ್ ಇವುಗಳನ್ನು ಮಾಡಿಕೊಳ್ಳುತ್ತಾರೆ. ಕೆಲವು ಪ್ರದರ್ಶನಗಳನ್ನು ಸಂಸ್ಥೆಗಳ ಸಹಾಯಾರ್ಥ ಅಥವಾ ಕಾಂಟ್ರಾಕ್ಟ್ ಮೇಲೆ ನೀಡುತ್ತಾರೆ. ಹೆಚ್ಚಿನ ಮೇಳಗಳು ಪ್ರತಿವರ್ಷ ಒಂದೆರಡು ಹೊಸ

ಪ್ರಸಂಗಗಳನ್ನು ಪ್ರಯೋಗಕ್ಕೆ ತರುತ್ತವೆ. ಆಟದ ಆರಂಭದ ಪೂರ್ವರಂಗ ಈಗ ಮರೆಯಾಗುತ್ತಿದೆ. ಇತ್ತೀಚೆಗೆ ಚಿಕ್ಕರೂಪದಲ್ಲಿ ಅದನ್ನು ನಡೆಸುತ್ತಾರೆ.

೧೯೬೦ರ ದಶಕದಲ್ಲಿ ಆಟದ ಕಥಾಭಾಗ ಆರಂಭಕ್ಕೆ ಮೊದಲು ಭರತನಾಟ್ಯ, ಕರಗನೃತ್ಯ, ಸಂಗೀತ ಕಛೇರಿಗಳನ್ನು ಕೆಲವು ಮೇಳಗಳು ನಡೆಸಿಕೊಂಡು ಬರುತ್ತಿದ್ದವಂತೆ. ಹಿಂದೆ ಜೋಡಾಟಗಳೆಂದರೆ ಜನರಿಗೆ ತುಂಬಾ ಆಸಕ್ತಿ. ಕಲಾವಿದರಿಗೂ ಅಷ್ಟೆ. ಜೋಡಾಟಗಳಲ್ಲಿ ವಿದ್ವತ್ತಿನ ಮೇಲೆ ಜಗಳಗಳಾಗುವುದೂ ಉಂಟು. ಈ ಜಗಳಗಳು ಆ ಸಂದರ್ಭಕ್ಕೆ ಮಾತ್ರ ಸೀಮಿತವಾಗಿರುತ್ತದೆ. ರಂಗಸ್ಥಳಗಳು ಎರಡು. ಕತೆ ಒಂದೇ, ಆಟ ಒಂದೇ. ಹಿಮ್ಮೇಳಗಳು ಮಾತ್ರ ಎರಡು(ವಿಶೇಷವಾಗಿ 'ಕುರುಕ್ಷೇತ್ರ' ಪ್ರಸಂಗದಲ್ಲಿ ಪಾಂಡವ-ಕೌರವ ಪಕ್ಷಗಳಿಗೆ ಬೇರೆ ಬೇರೆ ಹಿಮ್ಮೇಳ ನಡೆಸುವುದಿದೆ).

ಇಂತಹ ಪ್ರಯೋಗಗಳನ್ನು ಡಾ.ಕಾರಂತರು, ಶ್ರೀ ವಿಠಲ ಶೆಟ್ಟರು ನಡೆಸಿದ್ದರು. ಒಂದೇ ಕಥೆಯಲ್ಲಿ ತೆಂಕು-ಬಡಗು ವೇಷಗಳನ್ನು ಸೇರಿಸಿ ಆಟ ಆಡಿಸು ವುದಿದೆ. ಟೆಂಟಿನ ಮೇಳಗಳು ಒಂದೇ ಕ್ಯಾಂಪಿನಲ್ಲಿ ಒಂದೇ ಕಡೆ ಕೆಲವೊಮ್ಮೆ ನಾಲ್ಕೈದು ಆಟಗಳನ್ನು ಆಡುವುದಿದೆ. ಈಗೀಗ ಈ ಪದ್ಧತಿ ಕಡಿಮೆಯಾಗಿದೆ. ಮಾತುಗಾರಿಕೆಗೆ ಆಟಗಳಲ್ಲಿ ವಿಶೇಷ ಮಹತ್ವವಿದೆ. ಹರಿದಾಸತ್ರಯರಾದ ಶೇಣಿ ಗೋಪಾಲಕೃಷ್ಣ ಭಟ್, ಮಲ್ಪೆ ಶಂಕರ ನಾರಾಯಣ ಸಾಮಗ, ಮಲ್ಪೆ ರಾಮದಾಸ ಸಾಮಗರು ಆಟಗಳಲ್ಲಿ ಮಾತುಗಾರಿಕೆಗೆ ಮಹತ್ವ ತಂದುಕೊಟ್ಟರು. ಇದರಿಂದಾಗಿ ಮೇಳಗಳಲ್ಲಿ ಈಗ ಪೀಠಿಕೆ ವೇಷ, ಎರಡನೇ ವೇಷ, ಬಣ್ಣದ ವೇಷ, ಪುಂಡು ವೇಷಗಳ ಪಾತ್ರ ವಿವರಣೆಗಿಂತಲೂ ಮಾತುಗಾರ ಕಲಾವಿದರ ಪ್ರವೇಶಕ್ಕೆ ಪ್ರಾಧಾನ್ಯತೆ ಕೊಡುತ್ತಾರೆ. ಬರಿಯ ನೃತ್ಯದಿಂದಲೇ ಕತೆಯ ಕೆಲವು ಅಂಶಗಳನ್ನು ತೋರಿಸುವ ಪದ್ಧತಿಯನ್ನು ಕರ್ನಾಟಕ ಮೇಳದಲ್ಲಿ ಭಾಗವತರಾಗಿದ್ದ ದಾಮೋದರ ಮಂಡೆಚ್ಚರ ದಿಗ್ದರ್ಶನದಿಂದ ಪ್ರಭಾವಕ್ಕೆ ಬಂದಿತು.

ಯಕ್ಷಗಾನದ ಶೈಲಿಯ ಚೌಕಟ್ಟಿನಲ್ಲಿ ಚೊಕ್ಕ, ವ್ಯವಸ್ಥಿತ ಪ್ರದರ್ಶನಕ್ಕೆ ಸಾಲಿಗ್ರಾಮದ ಮಕ್ಕಳ ಮೇಳ ಒಂದು ಆದರ್ಶವಾಗಿದೆ. ದೇಶ ವಿದೇಶಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಿದ ಹೆಗ್ಗಳಿಕೆ ಇವರದಾಗಿದೆ. ಇಬ್ಬರು ಭಾಗವತರು ಪದ್ಯಗಳನ್ನು ಹಂಚಿಕೊಂಡು ಪಾತ್ರಾನುಸಾರವಾಗಿ ಹಾಡುವ ದ್ವಂದ್ವ ಹಿಮ್ಮೇಳ ಪದ್ಧತಿ 'ಯಕ್ಷರಂಗ' ಬ್ಯಾಲೆಯಲ್ಲಿ ಪ್ರಯೋಗದಲ್ಲಿತ್ತು. ಯಕ್ಷಗಾನ ಭಾಗವತಿಕೆಯಲ್ಲಿ ದಕ್ಷಿಣಾದಿ ಗಾಯನ ಪದ್ಧತಿಯೂ ಅಲ್ಲಲ್ಲಿ ಬಳಕೆಗೆ ಬಂದಿದೆ. ಯಕ್ಷಗಾನದ ಪ್ರಾದೇಶಿಕ ಬೇಧಗಳಾದ ತೆಂಕು-ಬಡಗು-ಉತ್ತರ ಕನ್ನಡ ಈ ಮೂರು ತಿಟ್ಟುಗಳಲ್ಲಿ ಹಿಂದೆ ಆಗಿ ಹೋಗಿರುವ (ಕೆಲವು ಈಗ ಇವೆ) ಸುಮಾರು ೯೦ರಷ್ಟು ಯಕ್ಷಗಾನ ಮೇಳಗಳನ್ನು ವಿಮರ್ಶಕ ಡಾ.ಎಂ.ಪ್ರಭಾಕರ ಜೋಶಿಯವರು ಗುರುತಿಸಿ ಉಲ್ಲೇಖಿಸಿದ್ದಾರೆ.

ಭಾಗವತಿಕೆ : ಯಕ್ಷಗಾನದಲ್ಲಿ ಭಾಗವತನೇ ಪ್ರಥಮವೇಷ ಅನ್ನಿಸಿಕೊಳ್ಳುತ್ತಾನೆ. ಆತನೇ ಪ್ರಧಾನ ವ್ಯಕ್ತಿ. ಒಂದು ರಾತ್ರಿಯೆಲ್ಲವೂ ಕುಳಿತು ಆತ ಆಯಾ ಪ್ರಸಂಗದ ಹಾಡುಗಳನ್ನು ತಾಳಹಿಡಿದು ಹಾಡಬೇಕು. ನಟರನ್ನು ಕುಣಿಸಬೇಕು. ಕುಣಿತದ ಕಾಲದಲ್ಲಿ ಚೆಂಡೆ ಮದ್ದಳೆಗಳು ಅವನಿಗೆ ನೆರವಾಗುತ್ತವೆ. ಆಗಾಗ ರಂಗಸ್ಥಳವನ್ನು ಪ್ರವೇಶಿಸುವ ಪಾತ್ರಗಳನ್ನು ಭಾಗವತನೇ ಮಾತನಾಡಿಸಿ -ಯಾರು, ಯಾಕೆ ಬಂದಿದ್ದಾರೆ- ಎಂಬುದನ್ನು ತೋರಿಸಿ ಕೊಡುತ್ತಾನೆ. ಒಂಟಿ ಪಾತ್ರಗಳ ಮನೋಗತಗಳನ್ನು ಬಹಿರಂಗಪಡಿಸುವ ಭಾಗವತನೇ ಅವರ ಸಂಭಾಷಣೆಯಲ್ಲಿ ನೆರವಾಗುತ್ತಾನೆ. ಭಾಗವತನ ಕೈಯಲ್ಲಿ ಎರಡು ಪುಟ್ಟದಾದ ತಾಳಗಳಿರುತ್ತದೆ ಅಥವಾ ದಪ್ಪವಾದ ಚಕ್ಕ ಗಂಟೆಯಿರುತ್ತದೆ. ಭಾಗವತಿಕೆಗೆ ಸಹಾಯಕವಾಗಿ ಹಿಮ್ಮೇಳದಲ್ಲಿ ಹಾರ್ಮೋನಿಯಂ ಶೃತಿಯಿರುತ್ತದೆ.

ಭಾಗವತನು ಮೊದಲು ದೇವತಾಸ್ತುತಿಗಳನ್ನು ಹಾಡುತ್ತಾನೆ. ಆನಂತರ ವಿಷ್ಣುವಿನ ಹತ್ತು ಅವತಾರಗಳನ್ನು ಕುರಿತಾದ ಶ್ಲೋಕಗಳನ್ನು ಹಾಡುತ್ತಾನೆ. ಆನಂತರ ಅಷ್ಟದಿಕ್ಪಾಲಕರ ಸ್ತುತಿ ಬರುತ್ತದೆ. ಇದೆಲ್ಲಾ ಮುಗಿದ ಮೇಲೆ ರಂಗಸ್ಥಳದ ಲಕ್ಷಣ, ಸಭಾಲಕ್ಷಣಗಳನ್ನು ಬಣ್ಣಿಸ ತೊಡಗುತ್ತಾನೆ. ಈ ಶ್ಲೋಕ ಭಾಗವು ಹೆಚ್ಚಾಗಿ ಭರತನ ನಾಟ್ಯ ಶಾಸ್ತ್ರದಿಂದ ಆಯ್ದುದ್ದಾಗಿರುತ್ತದೆ. ಇದಾದ ಮೇಲೆ ರಂಗಸ್ಥಳದ ಮೇಲೆ ಬಾಲಗೋಪಾಲ ವೇಷಗಳು ಕುಣಿಯುತ್ತವೆ. ಭಾಗವತ-ಕೋಡಂಗಿಯರ ಮಾತುಕತೆ ಆರಂಭವಾಗುತ್ತದೆ. ಆನಂತರ ಎರಡು ಸ್ತ್ರೀ ವೇಷಗಳ ಕುಣಿತ ನಡೆದು ಪೂರ್ವರಂಗ ಮುಗಿಯುತ್ತದೆ. ನಂತರ ಉತ್ತರರಂಗದಲ್ಲಿ ಅಂದು ಆಡಲು ನಿರ್ಧರಿಸಿರುವ ಪ್ರಸಂಗದ ಭಾಗ ಮುಂದುವರಿಯುತ್ತದೆ. ಯಾವ ಪ್ರಸಂಗ ವನ್ನು ಆಡುವುದಾದರೂ ಪ್ರಾರಂಭದಲ್ಲಿ ಅದರ ಒಡ್ಡೋಲಗವಿರುತ್ತದೆ. ಪಾತ್ರಗಳನ್ನು ತೆರೆಯ ಹಿಂದಕ್ಕೆ ನಿಲ್ಲಿಸಿ ನೃತ್ಯಮುಖೇನ ಪಾತ್ರಗಳನ್ನು ಭಾಗವತ ಪರಿಚಯಿಸಿ ಕೊಡುತ್ತಾನೆ. ಕಥೆಯ ನಡುವೆ ಪ್ರಮುಖ ಪಾತ್ರಗಳನ್ನು ಸಹಾ ಒಡ್ಡೋಲಗದ ಮೂಲಕವಾಗಿಯೇ ರಂಗಸ್ಥಳಕ್ಕೆ ತರುವ ಕ್ರಮವಿದೆ.

೨. ಭಾಗವತಿಕೆ : ಯಕ್ಷಗಾನದ ಭಾಗವತಿಕೆಯಲ್ಲಿ (ಹಾಡು) ಬಗೆಬಗೆಯ ಪ್ರಯೋಗಗಳು ಹಿಂದಿನಿಂದಲೂ ನಡೆದು ಬಂದಿದೆ. ತೆಂಕುತಿಟ್ಟು ಮತ್ತು ಬಡಗುತಿಟ್ಟಿನ ಪರಂಪರೆಯ ಹಾಡು ಗಾರಿಕೆಯ ನಡುವೆ ಇವೆರಡರ ಮಿಶ್ರಣದ ಹೊಸತೊಂದು ಶೈಲಿಯ ಹಾಡುಗಾರಿಕೆ ಈಗೀಗ ಕಂಡುಬರುತ್ತಿದೆ.

ಯಕ್ಷಗಾನ ಪದ್ಯಗಳ ಸ್ವಂತದ್ದಾದ ಛಂದಸ್ಸನ್ನು ಹೊಂದಿದ್ದು ರಾಗ ಮತ್ತು ತಾಳಗಳಿಗೆ ಬದ್ಧವಾಗಿರುತ್ತವೆ. ಭಾಗವತ ಇವುಗಳ ಗಾಯಕ. ಆತ ತನ್ನ ಕೈಯಲ್ಲಿರುವ ತಾಳದಿಂದ ತಾಳ-ಲಯಗಳ ಸೂಕ್ಷ್ಮ ರೂಪವನ್ನು ಚಿತ್ರಿಸುತ್ತಾನೆ. ಅದನ್ನು ವಿಸ್ತರಿಸುವ ಮದ್ದಳೆಯು ಮಡಿತ ವೇಷಧಾರಿಗಳ ಕುಣಿತವನ್ನು ನಿರ್ದೇಶಿಸುತ್ತದೆ. ಚೆಂಡೆಯು ಬಡಿತ ಭಾಗವತನ

ಹಾಡಿಕೆಯ ವೀರ-ರೌದ್ರ ರಸಭಾವಗಳನ್ನು ವೈಭವೀಕರಿಸುತ್ತದೆ. ಯಕ್ಷಗಾನದಲ್ಲಿ ಹಾಡುವ ಸುಮಾರು ೮೦ ರಾಗಗಳನ್ನು ತಜ್ಞರು ಗುರುತಿಸಿದ್ದಾರೆ. ಈ ರಾಗಗಳು ಶಾಸ್ತ್ರೀಯ ಪ್ರಕಾರಗಳಾದ ಹಿಂದುಸ್ತಾನಿ ಮತ್ತು ಕರ್ನಾಟಕ ಸಂಗೀತಗಳಿಗೆ ಸಮಾನವಾಗಿವೆಯಾದರೂ ಅವು ವಾಸ್ತವಿಕವಾಗಿ ರಾಗ ಎನ್ನುವುದಕ್ಕಿಂತಲೂ ಧಾಟಿ ಅಥವಾ ಮಟ್ಟುಗಳಾಗಿವೆ. ಗಮಕ ಮತ್ತು ಆಲಾಪನೆಗಳಲ್ಲಿ ಈ ವ್ಯತ್ಯಾಸವನ್ನು ಗುರುತಿಸಬಹುದಾಗಿದೆ.

ಯಕ್ಷಗಾನ ಹಾಡುಗಾರಿಕೆಯು ಕೇಳುವುದಕ್ಕಾಗಿ ಇರುವ ಸಂಗೀತವಲ್ಲ. ಬದಲಾಗಿ ಇದೊಂದು ರಂಗಸಂಗೀತವಾಗಿದೆ. ರಂಗದ ಮೇಲೆ ವೇಷಧಾರಿಗಳು ಪ್ರಕಟಪಡಿಸುವ ಭಾವನೆಗಳನ್ನು ಉದ್ದೀಪಿಸಿ ಕೊಡುವುದು ಈ ಸಂಗೀತದ ಉದ್ದೇಶವಾಗಿರುತ್ತದೆ. ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಬೀಭತ್ಸ ರೌದ್ರ, ಶಾಂತ ಇತ್ಯಾದಿ ನವರಸ ಭಾವನೆಗಳಿಗೆ ಇಂಬುಕೊಡುವುದು ಯಕ್ಷಗಾನ ಭಾಗವತಿಕೆಯ ಉದ್ದೇಶವಾಗಿರುತ್ತದೆ. ಹಾಗಾಗಿ ಸಿಟ್ಟು, ಪರಾಕ್ರಮ ಮುಂತಾದ ಭಾವನೆಗಳನ್ನು ಪ್ರಸ್ತುತಪಡಿಸಲು ಯಕ್ಷಗಾನದಲ್ಲಿ ಪ್ರತ್ಯೇಕ ರಾಗಗಳಿವೆ.

ಚೆಂಡೆಯ ಆರ್ಭಟದೊಂದಿಗೆ ಪ್ರಸ್ತುತಗೊಳ್ಳುವ 'ಕ್ರೋಧ'ದ ರಾಗವು ಗರ್ಜಿಸುವ ಸಿಂಹಗಾಂಭೀರ್ಯವನ್ನು ಪಡಿಮೂಡಿಸಬಲ್ಲದು. ಭೈರವಿ, ಕಾಂಬೋಧಿ, ಘಂಟಾರವ ಮೊದಲಾದ ರಾಗಗಳು ವೀರರಸಪ್ರಧಾನವಾಗಿದ್ದರೆ, ಆನಂದ ಭೈರವಿ, ತೋಡಿ, ಸಾವೇರಿ, ನೀಲಾಂಬರಿ, ರೇಗುಪ್ತಿ, ಪುನ್ನಾಗತೋಡಿ, ಮೋಹನ, ಕಲ್ಯಾಣಿ ಮುಂತಾದವು ಕರುಣ, ದುಃಖ ರಸಗಳನ್ನು ಹೊರಹೊಮ್ಮಿಸುತ್ತವೆ. ಮುಖಾರಿ, ನಾದನಾಮ ಕ್ರಿಯೆ ಮೊದಲಾದ ರಾಗಗಳು ಭಯಾನಕ ಸನ್ನಿವೇಶದ ಸೃಷ್ಟಿಗೆ ಬಳಕೆಯಾಗುತ್ತದೆ. ಯಕ್ಷಗಾನದ ತೀವ್ರತೆಗಾಗಿ ಇಡೀ ರಾತ್ರಿಯ ಬಯಲಾಟ ಮುಗಿಯುವುದರೊಳಗೆ ಶ್ರುತಿಯನ್ನು ೮-೧೦ ಬಾರಿ ಬದಲಾಯಿಸುತ್ತಾರೆ. ರಂಗಸ್ಥಳದ ಮೇಲೆ ವೇಷಧಾರಿಗಳು ಹಾಡಿ ಕುಣಿದು ಅಭಿನಯಿಸುವ ಪರಿಣಾಮಕಾರಿ ನಿರೂಪಣೆ ಶಕ್ತಿಯುತವಾಗಬೇಕಾದರೆ ಅಲ್ಲಿ ಅರ್ಥಗಾರಿಕೆಯ ಸೊಗಸೂ ಬೇಕಾಗುತ್ತದೆ. ಭಾಗವತರಾಡುವ ಪದ್ಯಗಳ ಅರ್ಥವನ್ನು ಪಾತ್ರಧಾರಿಗಳು ಸರಳವಾದ ಮಾತುಗಳಿಂದ ಸಂಭಾಷಿಸಿ ಪ್ರಸಂಗಕ್ಕೆ ಜೀವಕಳೆಯನ್ನು ಕೊಡುತ್ತಾರೆ.

ಯಕ್ಷಗಾನ ಹಾಡಿನ ಭಾಗವತಿಕೆಯಲ್ಲಿ ಬಗೆಬಗೆಯ ಪ್ರಯೋಗಗಳು ನಡೆದಿವೆ. ಪ್ರಸಿದ್ಧ ಭಾಗವತರಾದ ಕಿಣಿ ಕಿಣಿ ಭಾಗವತರು, ಕಡತೋಕ ಶಂಭು ಭಾಗವತರು, ಕಡತೋಕ ಸುಬ್ರಾಯ ಭಾಗವತರು, ಲಕ್ಷ್ಮೀನಾರಾಯಣ ಭಾಗವತರು, ಮಕ್ಕಿ ಮಹಾಬಲೇಶ್ವರ ಹೆಗಡೆ, ಕಡತೋಕ ಮಂಜುನಾಥ ಭಾಗವತರು, ಕೃಷ್ಣ ಬಲಿಪರು, ಅಗರಿ, ಮಂಡೆಚ್ಚರು, ಉಪ್ಪೂರರು, ನಾವಡರೇ ಮೊದಲಾದ ಮಹಾನ್‌ಪ್ರತಿಭೆಗಳೆಲ್ಲ ತಮ್ಮ ಹೆಸರಿನಲ್ಲಿಯೇ ಒಂದು ಶೈಲಿಯನ್ನು ಸೃಷ್ಟಿಸಿಕೊಂಡಿದ್ದಾರೆ.

ಯಕ್ಷಗಾನ ಭಾಗವತಿಕೆಗೆ ಇಂದ್ರಪಟ್ಟ ಕಟ್ಟಿದ ದಿ.ಕಾಳಿಂಗ ನಾವಡರ ಕೋಟಿನ ಕಂಠದ ಹಾಡುಗಾರಿಕೆಗೆ ಮರುಳಾಗದವರೇ ಇರಲಿಲ್ಲ. ಧ್ವನಿವರ್ಧಕದ ಬಳಕೆಯು ಆಧುನಿಕ ಭಾಗವತರು ಗಳ ಶೃತಿಯನ್ನು ಆಮೂಲಾಗ್ರವಾಗಿ ಬದಲಾಯಿಸಿದೆ. ಇಡೀ ರಾತ್ರಿಯ ಆಟ ದಲ್ಲಿ ಎರಡು-ಮೂರು ಭಾಗವತರುಗಳೇ ಭಾಗವಹಿಸುವುದರಿಂದಾಗಿ ರಾಗತಾಳಗಳ ಬಳಕೆ ಯಲ್ಲಿ ಪುನರಾವೃತ್ತಿ ಆಗುವುದಿದೆ. ಆದರೂ ಯಕ್ಷ ಸಂಗೀತವು ಕರ್ಣಾನಂದಕರವಾಗಿದ್ದು ಯಕ್ಷಲೋಕಕ್ಕೆ ನಮ್ಮನ್ನೂ ಒಯ್ಯುತ್ತವೆ.

೩. **ರಂಗಸಿದ್ಧತೆ :** ಯಕ್ಷಗಾನದ ಈಗಿನ ಸ್ಥಿತಿಗೆ ಹೋಲಿಸಿದರೆ, ಹಿಂದೆ ಅದು ಈಗಿನಷ್ಟು ಉತ್ತಮ ಸ್ಥಿತಿಯಲ್ಲಿರಲಿಲ್ಲ. ವೇಷ ಭೂಷಣಗಳೂ ಪ್ರಮಾಣಬದ್ಧವಾಗಿರಲಿಲ್ಲ. ಹಲವು ಭಾಗವತರಿದ್ದು ಅವರೆಲ್ಲಾ ನಿಂತೇ ಹಾಡುತ್ತಿದ್ದರು. ನಟನು ಹಾಡುಗಾರನೂ ಆಗಿರಬೇಕಿತ್ತು. ಮಾತುಗಾರಿಕೆಗೆ ವಿಶೇಷ ಅವಕಾಶವಿರುತ್ತಿರಲಿಲ್ಲ. ದೊಂದಿಬೆಳಕಿಗೆ ಅನುಗುಣವಾದ ಒರಟು ಬಣ್ಣಗಾರಿಕೆ ಇತ್ತು. ಊರಿನ ನಡುವಿನ ಎತ್ತರದ ದಿಬ್ಬವೇ ರಂಗಸ್ಥಳವಾಗಿತ್ತು.

ಪ್ರೇಕ್ಷಕರು ನಾಲ್ಕೂ ಕಡೆಯೂ ಇರುತ್ತಿದ್ದರು. ನಟರು ನಾಲ್ಕು ದಿಕ್ಕುಗಳನ್ನು ಗಮನ ದಲ್ಲಿರಿಸಿಕೊಂಡೇ ಅಭಿನಯಿಸಬೇಕಾಗಿತ್ತು. ಮುಂದಿನ ಭಕ್ತಿಯುಗದಲ್ಲಿ ಯಕ್ಷಗಾನವು ಒಪ್ಪ ಓರಣಗೊಂಡಿತು. ಹರಿದಾಸರುಗಳ ಪ್ರವೇಶದಿಂದಾಗಿ ಯಕ್ಷಗಾನದಲ್ಲಿ ಚುರುಕಿನ ಮಾತು ಗಾರಿಕೆ ಪ್ರಮುಖವಾಯಿತು. ಕಾವ್ಯ-ಶಾಸ್ತ್ರ-ಪುರಾಣಗಳಿಂದ ಬೇಕಾದ್ದನ್ನು ಬೇಕಾದ ಹಾಗೆ ತೆಗೆದು ಉಪಯೋಗಿಸುವ ಕಲೆ ಅವರಲ್ಲಿತ್ತು. ೨೦ನೇ ಶತಮಾನದ ಉತ್ತರಾರ್ಧದಲ್ಲಿ ತುಳು ಯಕ್ಷಗಾನಗಳು ಪ್ರವೇಶಿಸುವವರೆಗೆ ಪೌರಾಣಿಕ ಯಕ್ಷಗಾನ ಪ್ರಸಂಗಗಳೇ ಮೇಲುಗೈ ಸಾಧಿಸಿದ್ದವು.

೨೦ನೇ ಶತಮಾನದ ಉತ್ತರಾರ್ಧದಲ್ಲಿ ಯಕ್ಷಗಾನದ ವ್ಯವಸ್ಥೆಯಲ್ಲಿ ವಿಶೇಷ ಬದ ಲಾವಣೆ ಗಳಾದವು. ರಾತ್ರಿಯ ಪ್ರದರ್ಶನಗಳು ರಾತ್ರಿ ೧೦ಕ್ಕೆ ಆರಂಭವಾಗಿ ಮುಂಜಾನೆ ೬ಕ್ಕೆ ಮುಗಿಯುತ್ತಿದ್ದವು. ಇದರ ಜೊತೆಗೆ ಎರಡು-ಮೂರು ಗಂಟೆಗಳ ಕಾಲಾವಕಾಶದ ಯಕ್ಷಗಾನ ಪ್ರದರ್ಶನ ಗಳೂ ಹೆಚ್ಚಿದವು. ಸಂಘ ಸಂಸ್ಥೆಗಳ ಸಮಾವೇಶ, ವಾರ್ಷಿಕೋತ್ಸವದ ಸಂದರ್ಭದಲ್ಲಿ ಇಂತಹ ಪ್ರದರ್ಶನಗಳನ್ನು ಹಗಲಿನಲ್ಲಿ ಆಯೋಜಿಸಲಾಗುತ್ತಿತ್ತು.

ಮಳೆಗಾಲದಲ್ಲಿ ಕೂಡಾ ಸಭಾಂಗಣದೊಳಗೆ ಅಪರಾಹ್ನದ ಯಕ್ಷಗಾನ ಪ್ರದರ್ಶನಗಳನ್ನು ಆಡಲಾಗುತ್ತಿತ್ತು. ಇದು ವಿದ್ಯಾವಂತ ಜನರಿಗೆ, ಕಚೇರಿಯಲ್ಲಿ ಕೆಲಸ ಮಾಡುವವರಿಗೆ ತುಂಬಾ ಉಪಯುಕ್ತವಾಗುತ್ತಿತ್ತು. ರಾತ್ರಿ ಇಡಿ ನಿದ್ದೆ ಬಿಟ್ಟು ಮರುದಿನ ಕಚೇರಿಯಲ್ಲಿ ತೂಕಡಿಸುವ ಪ್ರಸಂಗ ಇದರಿಂದಾಗಿ ತಪ್ಪುತ್ತಿತ್ತು.

ಹಿಂದೆ ಯಕ್ಷಗಾನ ಪ್ರದರ್ಶನಗಳು ನವೆಂಬರ್ ಕೊನೆಯಲ್ಲಿ ಆರಂಭವಾಗಿ ಮೇ ತಿಂಗ ಳಲ್ಲಿ ಮುಗಿದು ಬಿಡುತ್ತಿದ್ದವು. ಯಕ್ಷಗಾನ ಕಲಾವಿದರೆಲ್ಲಾ ಮಳೆಗಾಲದಲ್ಲಿ ಜೀವನಕ್ಕಾಗಿ

ಬೇರೆ ವೃತ್ತಿಗಳನ್ನು ಅವಲಂಬಿಸಬೇಕಾಗಿತ್ತು. ಈ ಸ್ಥಿತಿ ಈಗ ಬದಲಾಗಿದೆ. ಈಗ ಮೇಳದ ತಿರುಗಾಟ ನಿಲ್ಲುತ್ತಿದ್ದಂತೆ ಮಳೆಗಾಲದ ಪ್ರದರ್ಶನಗಳು ಸಭಾಭವನದೊಳಗೆ ಆರಂಭ ವಾಗುತ್ತವೆ. ಇವು ತುಂಬ ಜನಪ್ರಿಯವಾಗಿವೆ.

ಏಕೆಂದರೆ ಬೇರೆಬೇರೆ ಮೇಳಗಳಲ್ಲಿ ಹಂಚಿಹೋಗಿರುವ ಕಲಾ ವಿದರೆಲ್ಲ ಮಳೆಗಾಲದ ಪ್ರದರ್ಶನಗಳಲ್ಲಿ ಒಟ್ಟಾಗಿ ಸಿಗುತ್ತಾರೆ. ಏಕ ಕಾಲದಲ್ಲಿ ರಂಗದ ಮೇಲೆ ಅನೇಕ ಕಲಾವಿದರನ್ನು ನೋಡುವ ಅವಕಾಶವು ಸಿಗುತ್ತದೆ. ಅನೇಕ ಹಾಸ್ಯಗಾರರೆಲ್ಲಾ ಒಟ್ಟಾಗಿ ರಂಗದಲ್ಲಿ ಸಿಗುತ್ತಾರೆ. ಭಾಗವತರುಗಳ ದ್ವಂದ್ವ ಹಾಡುಗಾರಿಕೆಯ ಸವಿಯೂ ಸಿಗುತ್ತದೆ. ಹಾಗಾಗಿ ಮಳೆಗಾಲದ ಯಕ್ಷಗಾನ ಪ್ರದರ್ಶನಗಳಿಗೆ ಅಪಾರ ಸಂಖ್ಯೆಯಲ್ಲಿ ಕಲಾಭಿಮಾನಿಗಳು ಸೇರುತ್ತಾರೆ.

ರಂಗಸಿದ್ಧತೆಯಲ್ಲೂ ಈಗ ಬಹಳಷ್ಟು ಮಾರ್ಪಾಡಾಗಿವೆ. ತಿರುಗಾಟದ ಮೇಳಗಳು ಎತ್ತರವಾದ ರಂಗಸ್ಥಳವನ್ನು ಕಟ್ಟಿ ಅದರ ಮೂರು ಕಡೆಯೂ ಪ್ರೇಕ್ಷಕರು ಕುಳಿತು ಯಕ್ಷಗಾನ ವನ್ನು ವೀಕ್ಷಿಸುವಂತೆ ವ್ಯವಸ್ಥೆ ಮಾಡುತ್ತವೆ. ಮೇಲಕ್ಕೆ ಡೇರೆಯೂ ಕುಳಿತುಕೊಳ್ಳಲು ಸುಖಾಸನವೂ ಇರುತ್ತದೆ. ಕೆಲವು ಮೇಳಗಳು ಅರ್ಧಚಂದ್ರಾಕೃತಿಯ ರಂಗಸ್ಥಳವನ್ನು ಹೊಂದಿವೆ.

ಭಾಗವತರು ಗಳ ಹಿಂದೆ ಒಂದು ಪರದೆ, ಮಧ್ಯದಲ್ಲಿ ದೇವತಾಚಿತ್ರದ ಒಂದು ಪರದೆ, ಮುಂಭಾಗ ದಲ್ಲಿ ಜಾರುವ ಪರದೆಯಿರುತ್ತದೆ. ಹರಕೆ ಮೇಳಗಳು ಮಾತ್ರ ನೆಲದಲ್ಲಿಯೇ ಪ್ರದರ್ಶನ ನೀಡುತ್ತವೆ. ಬೆಂಗಳೂರು, ಮುಂಬೈ, ದೆಹಲಿ, ವಿದೇಶಗಳಲ್ಲಿ ಪ್ರದರ್ಶನ ನೀಡುವ ತಂಡಗಳು ಅಲ್ಲಿನ ಅತ್ಯಾಧುನಿಕ ಸಭಾಂಗಣಗಳನ್ನು ಪರಿಣಾಮಕಾರಿಯಾಗಿಯೇ ಬಳಸಿ ಕೊಳ್ಳುತ್ತಿವೆ. ಸಮಾಜದ ಎಲ್ಲಾ ವರ್ಗದ ಜನರೂ ಯಕ್ಷಗಾನ ನೋಡಲು ಬರುತ್ತಾರೆ. ಯಕ್ಷಗಾನ ಕಲಾವಿದರಲ್ಲೂ ಈಗ ವಿವಿಧ ವೃತ್ತಿಯಲ್ಲಿದ್ದವರು ವೇಷಧಾರಿಗಳಾಗಿ ಭಾಗ ವಹಿಸುತ್ತಾರೆ. ಇದರಿಂದಾಗಿ ಇಂದು ಯಕ್ಷಗಾನ ಯಾವುದೇ ಒಂದು ಪಂಗಡದ ಸೊತ್ತಾಗಿ ಉಳಿದಿಲ್ಲ ಇದೊಂದು ಸಮಷ್ಟಿ ಕಲೆ ಯಾಗಿದೆ.

ಕಳೆದ ಶತಮಾನದ ಉತ್ತರಾರ್ಧದಲ್ಲಿ ಯಕ್ಷಗಾನದಲ್ಲಿ ತುಳು ಪ್ರಸಂಗಗಳ ಪ್ರವೇಶ ಯಕ್ಷಗಾನದ ಸನ್ನಿವೇಶವನ್ನೇ ಬದಲಾವಣೆಗೊಳಿಸಿತು. ಯಕ್ಷಗಾನದಲ್ಲಿ ಬದಲಾವಣೆ ತಂದ ತುಳು ಪ್ರಸಂಗವೆಂದರೆ 'ಕೋಟಿ-ಚೆನ್ನಯ' ಆಗಿದೆ. ಪಂದಿಬೆಟ್ಟು ವೆಂಕಟರಾಯರಿಂದ ರಚಿತ ವಾದ ಈ ಪ್ರಸಂಗವು ಯಕ್ಷರಂಗ ಭೂಮಿಗೆ ತುಳುವೀರರನ್ನು ತಂದಿತು. ತುಳು ಪಾಡ್ದನದ ಮತ್ತು ತುಳುನಾಡಿನ ಆಚರಣೆಯ ಸಹಾಯದಿಂದ ತುಳುಭಾಷೆಯಲ್ಲಿ ರೂಪಿತಗೊಂಡ ಇಂತಹ ಪ್ರಸಂಗಗಳು ಜನಸಾಮಾನ್ಯರಿಗೆ ಖುಷಿ ಕೊಟ್ಟವು.

ತಾವು ನಂಬುವ ದೈವಗಳನ್ನೇ ಯಕ್ಷರಂಗದ ಮೇಲೆ ಕಾಣುವಾಗ ಜನರಿಗೆ ತಮ್ಮ ಬದುಕನ್ನೇ ಕಂಡಂತಾಗಿ ಉತ್ಸಾಹಬಂದಿತು. ಪರಿಣಾಮವಾಗಿ ಇಂತಹ ಅನೇಕ ತುಳು ಪ್ರಸಂಗ ಗಳು ಯಕ್ಷಗಾನ ರೂಪಕಗಳಾದವು. ತುಳುನಾಡಸಿರಿ, ಕೋಡ್ದಬ್ಬು ಬಾರಗ, ಕಾಡಮಲ್ಲಿಗೆ,

ದೇವು ಪೂಂಜ ಪ್ರತಾಪ, ಭೂತಾಳ ಪಾಂಡ್ಯ, ಅಮರಶಿಲ್ಪಿ ವೀರಕಲ್ಕುಡ, ಕಾಂತಾ ಬಾರೆ-ಬೂದಾ ಬಾರೆ... ಇತ್ಯಾದಿ ತುಳು ಯಕ್ಷಗಾನಗಳು ಪ್ರಸಿದ್ಧಿಗೊಂಡವು.

ತುಳು ಯಕ್ಷಗಾನಗಳು ಯಕ್ಷಲೋಕದಲ್ಲಿ ಭಾರೀ ಬದಲಾವಣೆಗಳನ್ನು ತಂದವು. ವೇಷಭೂಷಣಗಳು ಮತ್ತು ಬಣ್ಣಗಾರಿಕೆಗಳು ಸರಳಗೊಂಡವು. ಬಣ್ಣದವೇಷಗಳು ರಂಗದಿಂದಲೇ ಮಾಯವಾದವು. ಹಾಸ್ಯಗಾರರಿಗೆ ಮಹತ್ವ ಹೆಚ್ಚಿತು. ಯಕ್ಷಗಾನದ ಪಾರಂಪರಿಕ ಕುಣಿತಗಳು ಮರೆಗೆ ಸಂದವು. ಯಕ್ಷರಂಗವು ನಾಟಕ ರಂಗವಾಗಿ ಪರಿವರ್ತನೆಯ ರೂಪ ಪಡೆಯಿತು. ಆದರೆ ಇದು ಅನೇಕ ತುಳು ಯುವಕರಿಗೆ ಅಭಿನಯ ಅವಕಾಶವನ್ನು ತೆರೆದುಕೊಟ್ಟಿತು. ತೆಂಕುತಿಟ್ಟಿನ ಪ್ರಮುಖ ಆಕರ್ಷಣೆಯೇ ತುಳು ಪ್ರಸಂಗಗಳು ಎಂದಾಯಿತು.

೪. ಮೇಳ ವ್ಯವಸಾಯ : ಯಕ್ಷಗಾನದ ಆರಂಭ ಕಾಲದಿಂದಲೂ ಅದು ದೇವಾಲಯದ ಕೂಸಾಗಿತ್ತು. ಈಗಲೂ ದೇವರ ಹೆಸರಿನ ಮೇಳಗಳೇ ಹೆಚ್ಚು ಇವೆ. (ಕಟೀಲು ಮೇಳ, ಧರ್ಮಸ್ಥಳ ಮೇಳ, ಮಂದರ್ತಿ ಮೇಳ ಇತ್ಯಾದಿ) ಆಟದ ಆರಂಭ ಮತ್ತು ಮುಕ್ತಾಯದ ಪ್ರಯೋಗಗಳು ದೇವಸ್ಥಾನದ ಬಯಲಿನಲ್ಲಿಯೇ ನಡೆಯುತ್ತದೆ. ವ್ಯಾಪಾರೀ ಮನೋಭಾವದ ಸಂಚಾರಿ ಮೇಳಗಳು ಕೂಡಾ ಇದನ್ನು ಪರಿಪಾಲಿಸಿಕೊಂಡು ಬಂದಿವೆ.

ಯಕ್ಷಗಾನದ ರಂಗವೇದಿಕೆಯೂ ಸಹಾ ದೇವಾಲಯದ ರೂಪವನ್ನು ನೆನಪಿಸುತ್ತವೆ. ಹಿಮ್ಮೇಳದವರು ನಿಂತು ಹಾಡುವ ಪದ್ಧತಿ, ಸಿಂಹಾಸನದಲ್ಲಿ ಕುಳಿತ ದೇವರ ಮೂರ್ತಿ, ರಂಗಸ್ಥಳದ ಅಳತೆಯ ಮಿತಿ, ವೃತ್ತಾಕಾರವಾಗಿ ಕುಣಿಯುವ ವಿಧಾನ, ತಾಳ, ಮೃದಂಗ, ಜಾಗಟೆ, ಚಂಡೆ ಮುಂತಾದವುಗಳೂ ದೇವಾಲಯದ ರೂಪವನ್ನು ನೆನಪಿಸುತ್ತವೆ.

ಯಕ್ಷಗಾನ ಮೇಳಗಳ ತಿರುಗಾಟ ರೀತಿಯಲ್ಲೂ ಇಂದು ಗಮನಾರ್ಹ ಬದಲಾವಣೆಗಳಾಗಿವೆ. ಹಿಂದಿನಂತೆ ಕಾಲು ನಡಿಗೆಯಲ್ಲಿ ಊರಿಂದ ಊರಿಗೆ ಸಾಗುವ ಮೇಳಗಳು, ಗಂಜಿ ಊಟದ ಮೇಳಗಳು ಈಗ ಇಲ್ಲವೇ ಇಲ್ಲ. ಎಲ್ಲವೂ ಆಧುನೀಕರಣಗೊಂಡಿವೆ. ವಿದೇಶಗಳಿಂದ ಇಲ್ಲವೇ ಮುಂಬೈ ಮಹಾನಗರದಿಂದ ಊರಿಗೆ ಬಂದು ಹರಕೆ ಆಟಗಳನ್ನು ಪ್ರಾಯೋಜಿಸುವವರ ಸಂಖ್ಯೆ ಈಗ ಹೆಚ್ಚುತ್ತಿದೆ. ಅವರು ಯಕ್ಷಗಾನವನ್ನು ವೈಭವೀಕರಣಗೊಳಿಸಿದ್ದಾರೆ.

ಭವ್ಯ ವೇದಿಕೆ, ಅಲಂಕಾರ, ವಿದ್ಯುದ್ದೀಪಗಳ ಸೊಬಗು, ಸಾಮೂಹಿಕ ಭೋಜನ, ಸಿಡಿಮದ್ದು, ಬೇಂಡು ವಾಲಗಗಳೆಲ್ಲಾ ಸೇರಿ ಯಕ್ಷಗಾನ ಒಂದು ಜಾತ್ರೆಯಂತೆ ಸಾಗುತ್ತಿದೆ. ಧಾರ್ಮಿಕತೆ ಮತ್ತು ಶ್ರೀಮಂತಿಕೆ ಜೊತೆಯಾಗಿ ಮೆರೆಯುತ್ತದೆ.

ಹರಕೆ ಮೇಳಗಳಲ್ಲಿ ಕಂಡುಬರುವಂತಹ ಜಾತ್ರಾತ್ಮಕ ಸ್ವರೂಪಗಳು ವಾಣಿಜ್ಯ ಮೇಳಗಳಲ್ಲಿಲ್ಲ. ಅವು ಊರಿಂದ ಊರಿಗೆ ಪ್ರಯಾಣಿಸಿ ಕ್ಷಣ ಮಾತ್ರದಲ್ಲಿ ಟೆಂಟ್ ಊರಿ ರಂಗಸ್ಥಳ ನಿರ್ಮಿಸಿ ಯಕ್ಷಗಾನದ ವಾತಾವರಣ ನಿರ್ಮಿಸುತ್ತಾರೆ. ಟಿಕೆಟ್‌ಗಳನ್ನು ಕೌಂಟರಿನಲ್ಲಿ ಮಾರುತ್ತಾರೆ. ಆಕರ್ಷಕವಾದ ಟೆಂಟ್, ರಂಗಸ್ಥಳ ಅಲ್ಲಿರುತ್ತದೆ.

ಊರಿಗೆ ತಕ್ಕ ಅಭಿರುಚಿಯ ಪ್ರಸಂಗವನ್ನು ಅಲ್ಲಿ ಆಡಿಸಿ ತೋರಿಸುತ್ತಾರೆ. ಬೆಳಗಾತ ಆಟ ಮುಗಿದೊಡನೆ ಕ್ಷಣ ಮಾತ್ರದಲ್ಲಿ ಟೆಂಟ್ ತೆಗೆದು ಲಾರಿಗೆ ಪೇರಿಸಿ ಮುಂದಿನ ಊರಿಗೆ ಹೋಗಲು ಸಿದ್ಧರಾಗುತ್ತಾರೆ. ಈ ರೀತಿ ಉತ್ತಮ ಕಾರ್ಯಕ್ಷಮತೆಯ ದೃಷ್ಟಿಯಿಂದ ಧರ್ಮಸ್ಥಳ ಮೇಳ, ಕರ್ನಾಟಕ ಮೇಳ, ಸಾಲಿಗ್ರಾಮ ಮೇಳ, ಪೆರ್ಡೂರು ಮೇಳ, ಸುರತ್ಕಲ್ ಮೇಳ, ಇಡಗುಂಜಿ ಮೇಳಗಳು ಹೆಸರುವಾಸಿಯಾಗಿವೆ.

ಮೇಳಗಳು ತಿರುಗಾಟದಲ್ಲಿ ತಾವೇ ಟಿಕೆಟ್‌ಗಳನ್ನು ಮಾರಿ ಹಣ ಸಂಪಾದನೆ ಮಾಡುವುದು ಒಂದು ರೀತಿಯಾದರೆ; ಮೇಳಗಳನ್ನು ಒಂದು ದಿನದ ಮಟ್ಟಿಗೆ ಗುತ್ತಿಗೆ ಪಡೆದು, ಮೇಳಗಳಿಗೆ ನಿಗದಿತ ಸಂಭಾವನೆ ನೀಡಿ, ಗುತ್ತಿಗೆದಾರರು ಹಣ ಸಂಪಾದಿಸುವುದು ಇನ್ನೊಂದು ರೀತಿ. ಹೀಗೆ ಗುತ್ತಿಗೆ ಪಡೆದು ಅನೇಕ ಸಂಘಸಂಸ್ಥೆಗಳು ಆರ್ಥಿಕವಾಗಿ ಪ್ರಬಲವಾದದ್ದಿದೆ.

ವಾಣಿಜ್ಯ ಮೇಳ, ಹರಕೆ ಮೇಳಗಳ ಒಟ್ಟಿಗೆ ಹವ್ಯಾಸಿ ಯಕ್ಷಗಾನ ತಂಡಗಳೂ ಈ ಕ್ಷೇತ್ರಕ್ಕೆ ತಮ್ಮ ಕೊಡುಗೆಗಳನ್ನು ನೀಡಿವೆ. ತಮ್ಮ ಊರಿನ ಹೆಸರಿನಲ್ಲಿ ಅಥವಾ ತಮ್ಮ ಊರಿನ ದೈವ-ದೇವರ ಹೆಸರಿನಲ್ಲಿ ಮಾಡಿಕೊಳ್ಳುತ್ತಿರುವ ಇಂಥ ಹವ್ಯಾಸಿ ಯಕ್ಷಗಾನ ತಂಡ ಗಳ ಸಂಖ್ಯೆ ಸಾವಿರಕ್ಕೂ ಮಿಕ್ಕಿದೆ.

ವರ್ಷಕ್ಕೆ ನಾಲ್ಕೈದು ಪ್ರದರ್ಶನಗಳನ್ನು ನೀಡುವ ಈ ಹವ್ಯಾಸಿ ತಂಡಗಳು ಪ್ರಯತ್ನ ಪೂರ್ವಕವಾಗಿ ಪ್ರಸಂಗಗಳನ್ನು ಅಭಿನಯಿಸುತ್ತವೆ. ಪೌರಾಣಿಕ ಕನ್ನಡ ಪ್ರಸಂಗಗಳನ್ನೇ ಇವು ಹೆಚ್ಚಾಗಿ ಆಡುತ್ತವೆ. ಹವ್ಯಾಸಿ ತಂಡಗಳನ್ನು 'ಪರಂಪರೆಯ ರಕ್ಷಕರು' ಎಂದು ಭಾವಿಸ ಲಾಗುತ್ತದೆ.

ಯಕ್ಷಗಾನವು ಮೂಲತಃ ನೋಡಿ ಕಲಿಯುವ ಕಲೆ. ಅದನ್ನು ಕಲಿಸಿಕೊಡುವ ಶಾಲೆಗಳು ಹಿಂದೆ ಇರಲಿಲ್ಲ. ಆದರೆ ಈಗ ಯಕ್ಷಗಾನದ ತರಬೇತಿ ಕ್ಲಾಸುಗಳು ಅಲ್ಲಲ್ಲಿ ನಡೆಯುತ್ತಿರು ತ್ತವೆ. ಶಾಲಾಕಾಲೇಜುಗಳಲ್ಲಿ ಕೂಡಾ ಸಾಯಂಕಾಲದ ಹೊತ್ತು ಯಕ್ಷಗಾನ ತರಗತಿಗಳನ್ನು ನಡೆಸಲಾಗುತ್ತದೆ. ಯಕ್ಷಗಾನ ಭಾಗವತಿಕೆಯ ತರಗತಿಗಳು ಅಲ್ಲಲ್ಲಿ ನಡೆಯುತ್ತಿರುತ್ತವೆ. ಹಿಮ್ಮೇಳ ವಾದನದ ತರಗತಿಗಳೂ ನಡೆಯುತ್ತವೆ. ಅನೇಕ ಕಲಾವಿದರುಗಳು ಯಕ್ಷಗಾನ ಹೇಳಿಕೊಡಲು ಊರಿಂದೂರಿಗೆ ಹೋಗುತ್ತಾರೆ. ಒಟ್ಟಿನಲ್ಲಿ ಯಕ್ಷಗಾನವನ್ನು ಕಲಿಸುವ-ಕಲಿಯುವ, ಅದನ್ನು ಅರ್ಥಮಾಡಿಕೊಳ್ಳುವ ಕೆಲಸಗಳು ನಿರಂತರ ನಡೆಯುತ್ತಿವೆ.

ಡಾ.ಶಿವರಾಮ ಕಾರಂತರು ಯಕ್ಷಗಾನದಲ್ಲಿ ಮಾಡಿದ ಕೆಲವು ಪ್ರಯೋಗಗಳು ಗಮ ನಾರ್ಹವಾಗಿವೆ. ಅವರು ಸಿದ್ಧಪಡಿಸಿದ 'ಯಕ್ಷರಂಗ'ವು ಯಕ್ಷಗಾನಕ್ಕೆ ವಿಶ್ವಮಾನ್ಯತೆ ಯನ್ನು ತಂದುಕೊಟ್ಟಿದೆ. ಅವರು ಯಕ್ಷಗಾನಕ್ಕೆ ಅಳವಡಿಸಿದ ಕೆಲವು ಸಂಗತಿಗಳು ಮುಂದೆ ಪರಂಪರೆಯ ಭಾಗಗಳಾದವು. ಅವರ ಯಕ್ಷರಂಗದಲ್ಲಿ ಪಳಗಿದ ಕಲಾವಿದರುಗಳು ವೃತ್ತಿ ಮೇಳದಲ್ಲೂ ಹೆಸರು ಮಾಡಿದರು.

ತುಳು ಯಕ್ಷಗಾನವು ಯಕ್ಷಗಾನ ನೃತ್ಯಗಾರಿಕೆಯ ಮೇಲೆ ಬಹಳಷ್ಟು ಪರಿಣಾಮ ಬೀರಿದೆ. ಪರಂಪರೆಯ ಅನೇಕ ನೃತ್ಯಗಳು ಇಂದು ಮರೆಗೆ ತಳ್ಳಲ್ಪಟ್ಟಿವೆ. ಒಡ್ಡೋಲಗ ಕುಣಿತ, ಸ್ತ್ರೀವೇಷ ಕುಣಿತ, ಬಾಲಗೋಪಾಲರ ಕುಣಿತ, ಕೃಷ್ಣನ ಪ್ರವೇಶ, ಹನುಮಂತನ ಪ್ರವೇಶ ಇವುಗಳನ್ನೆಲ್ಲಾ ತುಳುಯಕ್ಷಗಾನಗಳು ಬಿಟ್ಟು ಬಿಟ್ಟಿವೆ. ನೃತ್ಯದಲ್ಲಿ ಕಳಕೊಂಡದ್ದನ್ನು ಅದು ಮಾತಿನಲ್ಲಿ ತುಂಬಿಕೊಂಡಿದೆ.

ತೆಂಕುತಿಟ್ಟಿನ ವೀರರಸ ಕುಣಿತ ಮತ್ತು ಬಣ್ಣದ ವೇಷಗಳಿಂದ ಬಡಗಿನವರೂ ಆಕರ್ಷಿತರಾಗಿದ್ದಾರೆ. ಶೇಣಿ-ಸಾಮಗರ ಮಾತುಗಾರಿಕೆಯನ್ನು ಅನುಸರಿಸುವ ಬಡಗಿನವರೂ, ಚಿಟ್ಟಾಣಿ-ಕೊಂಡದಕುಳಿಯವರನ್ನು ಅನುಸರಿಸುವ ತೆಂಕಿನವರೂ ಹೆಚ್ಚಾಗಿದ್ದಾರೆ. ಮೇಳ ಗಳೊಳಗೆ ನಡೆಯುತ್ತಿರುವ ಕಲಾವಿದರ ವಲಸೆಯಿಂದಾಗಿ ಇಂತಹ ಪ್ರಭಾವಗಳು ಹೆಚ್ಚು ಆಗಿವೆ. ಐರೋಡಿ ಗೋವಿಂದಪ್ಪನವರ ತೆಂಕಿನ ಪ್ರವಾಸ, ಸಿದ್ಧಕಟ್ಟೆ ಚೆನ್ನಪ್ಪ ಶೆಟ್ಟರ ಬಡಗಿನ ಪ್ರವಾಸ, ಮಲ್ಪೆ ವಾಸುದೇವ ಸಾಮಗರ ಎರಡೂ ತಿಟ್ಟಿನ ಪ್ರವಾಸಗಳು ಎರಡೂ ತಿಟ್ಟುಗಳ ನಡುವಣ ಅಂತರವನ್ನು ಕಡಿಮೆಗೊಳಿಸಿವೆ.

ಅರ್ಥಗಾರಿಕೆಯಲ್ಲೂ ತೀವ್ರವಾದ ಬದಲಾವಣೆ ಗೋಚರಿಸಿದೆ. ವಿದ್ಯಾವಂತ ಕಲಾವಿದರ ಪ್ರವೇಶದಿಂದಾಗಿ ಅರ್ಥಗಾರಿಕೆಯ ಬೌದ್ಧಿಕತೆಯು ಎತ್ತರಕ್ಕೇರಿದೆ. ಪೆರ್ಲ, ಶೇಣಿ, ಸಾಮಗ, ಜೋಶಿ, ಮೂಡಂಬೈಲು, ತೆಕ್ಕಟ್ಟೆ, ಕುಂಬಳೆ ಮೊದಲಾದವರ ಮಾತುಗಾರಿಕೆಯು ಅರ್ಥದ ಕ್ಷಿತಿಜಗಳನ್ನು ವಿಸ್ತರಿಸಿವೆ. ಧಾರ್ಮಿಕ ವಿಚಾರಗಳಿಗಿಂತಲೂ ಇಂದಿನ ಸಮಕಾಲೀನ ರಾಜ ಕೀಯ, ಸಾಮಾಜಿಕ, ಸಾಂಸ್ಕೃತಿಕ ವಿಚಾರಗಳು ವೇದಿಕೆಯ ಮೇಲೆ ಚರ್ಚೆಗೆ ಬರುವುದಿದೆ.

ಕಲಾವಿದ ಕುಂಬಳೆ ಸುಂದರರಾಯರು ವಿಧಾನಸಭಾ ಸದಸ್ಯರಾಗಿ ಯಕ್ಷಗಾನಕ್ಕೆ ಒಂದು ರಾಜಕೀಯ ಆಯಾಮವನ್ನು ತಂದುಕೊಟ್ಟಿದ್ದಾರೆ.

೫. ಯಕ್ಷಗಾನದ ಚೌಕಿ : ವೇಷಧಾರಿಗಳು ವೇಷಹಾಕುವ ಬಣ್ಣದ ಮನೆಯನ್ನು 'ಚೌಕಿ' ಎನ್ನುತ್ತಾರೆ. ಇದು ಶುದ್ಧವಾದ ಸ್ಥಳವಾಗಿದ್ದು ಇಲ್ಲಿ ಕಲಾವಿದರು ಶಿಷ್ಟಾಚರಣೆಯಲ್ಲಿರಬೇಕಾ ಗುತ್ತದೆ. ಇಲ್ಲಿ ಗಣಪತಿ ಪೂಜೆಯು ಆರಂಭದಲ್ಲಿ ನಡೆಯುತ್ತದೆ. ಗಣಪತಿಗೆ ಕೈಮುಗಿದು ವೇಷಧಾರಿಗಳು ಬಣ್ಣಕ್ಕೆ ತೊಡಗುತ್ತಾರೆ. ಗಣಪತಿ ಪೂಜೆಯನ್ನು ಹಿಂದೆ ಕೋಡಂಗಿಯೇ ನಿರ್ವಹಿಸುತ್ತಿದ್ದ.

ಈಗ ಈ ಪೂಜೆಗಾಗಿ ಒಬ್ಬರು ಭಟ್ಟರು ಇರುತ್ತಾರೆ. ಗಣಪತಿಗೆ (ರಾಜ ಕಿರೀಟಕ್ಕೆ) ಆರತಿ ಬೆಳಗಿದ ನಂತರ ಗಣಪತಿಯ ಮುಂದಿಟ್ಟ ಎಲೆ ಅಡಿಕೆಯನ್ನು ಭಾಗವತರ ಕೈಗೆ ಕೊಡುತ್ತಾರೆ. ಅದರಲ್ಲಿನ ಅಕ್ಷತೆ ಕಾಳನ್ನು ಭಾಗವತರು ಎಲ್ಲರಿಗೂ ಹಂಚುತ್ತಾರೆ. ಎಲ್ಲರೂ ಗಣಪತಿಗೆ (ಕಿರೀಟಕ್ಕೆ) ಅಕ್ಷತೆ ಕಾಳನ್ನು ಹಾಕಿ ಕೈಮುಗಿದು ತಮ್ಮ ಕೆಲಸಗಳಲ್ಲಿ ತೊಡಗುತ್ತಾರೆ. ಕೋಡಂಗಿ ಪೂಜಿಸಿ ನೀಡಿದ ಗೆಜ್ಜೆಯನ್ನು ಪಾತ್ರಧಾರಿಗಳು ಕಟ್ಟಿಕೊಳ್ಳುತ್ತಾರೆ. ಎರಡು ಕೋಡಂಗಿಗಳನ್ನು ಮುಂದೆ ಮಾಡಿಕೊಂಡು ಹಿಮ್ಮೇಳದವರು ರಂಗವನ್ನು ಪ್ರವೇಶಿಸುತ್ತಾರೆ.

ರಂಗಸ್ಥಳದಲ್ಲಿ ಮತ್ತೆ ಗಣಪತಿ ಸ್ತುತಿ ಆಗಬೇಕು. ಕಿರೀಟಕ್ಕೆ ಆರತಿ ಬೆಳಗಬೇಕು. ನರ್ತನವೂ ಆಗಬೇಕು. ಭಾಗವತರು "ಕರದೊಳು ಪರಶು ಪಾಶಾಂಕುಶಧಾರಿ ಗಣಪಗೆ" ಎಂದು ಗಣಪತಿಯನ್ನು ಸ್ಮರಿಸಿ ಕಥೆಗೆ ತೊಡಗುತ್ತಾರೆ. ಕಥೆಯ ಪ್ರಾರಂಭದಲ್ಲಿ ಮತ್ತೆ ಅಂತ್ಯದಲ್ಲಿ ಗಣಪತಿ ಸ್ತುತಿಯಾಗಿ ಅದು ಸಂಪುಟೀಕರಣಗೊಳ್ಳುತ್ತದೆ.

ಯಕ್ಷಗಾನ ರಂಗಸ್ಥಳದಲ್ಲಿ ಅಭಿನಯಿಸುವ ಕಥೆಯಾಗಲಿ, ಅದನ್ನು ನಿರೂಪಿಸಲು ಅವಲಂಬಿಸುವ ರಂಗಸಂಪ್ರದಾಯವಾಗಲಿ ನಿಜಜೀವನದ ಯಥಾನಕಲು ಎನಿಸುವ ಅನುಕರಣೆಯಲ್ಲ. ಕಥಾನಿರೂಪಣೆ, ಸಂಭಾಷಣೆ ಇವೆರಡನ್ನೂ ಒಳಗೊಂಡ ಪೌರಾಣಿಕ ಕತೆಯ ಪದಗಳನ್ನು ಭಾಗವತರು ಹಾಡಿ ನಿರೂಪಿಸುವುದು. ಆವಿಲಕ್ಷಣ ಹಾಡುಗಾರಿಕೆಗೆ ಸರಿಯಾಗಿ ವಿಚಿತ್ರ ರೂಪಗಳೊಂದಿಗೆ, ಅಷ್ಟೇ ವಿಲಕ್ಷಣ ಹೆಜ್ಜೆಗಾರಿಕೆಯೊಂದಿಗೆ ಕುಣಿಯುವುದು, ಅಭಿನಯಪೂರ್ವ್ವಕ ಸಂಭಾಷಣೆ ನಡೆಸುವುದು ಇವೆಲ್ಲಾ ಸೇರಿ ಯಕ್ಷಲೋಕದ ವೈಭವ ಕಲಾಭಿಮಾನಿಗಳಿಗೆ ಸಿಗುವುದು.

ಯಕ್ಷಗಾನದ ಓರ್ವ ನರ್ತನ ಕುಶಲಿಯೇ ಆಗಲಿ, ಅಭಿನಯಚತುರನೇ ಆಗಲಿ, ಮಾತಿನ ಮಲ್ಲನೇ ಇರಲಿ, ಅವನ ಪ್ರಥಮ ಆಕರ್ಷಣೆಯಿರುವುದು ಅವನ ವೇಷಗಾರಿಕೆಯಲ್ಲಿಯೇ. ವೇಷ ಚೆನ್ನಾಗಿ ಒಪ್ಪದವ ಎಷ್ಟು ಕುಣಿದರೂ, ಎಷ್ಟು ಅಭಿನಯಿಸಿದರೂ, ಎಷ್ಟು ಮಾತನಾಡಿದರೂ, ನೋಡುವ ಕಣ್ಣಿಗೆ ಏನೋ ತೊಡಕೆನಿಸುತ್ತದೆ.

ಈ ವೇಷಗಾರಿಕೆಯ ಜೊತೆಗೆ ಚಿತ್ರಕಲೆಯೂ ಮೇಳೈಸಿದೆ ಎನ್ನುವುದು ಗಮನಿಸತಕ್ಕ ಅಂಶ. ಯಕ್ಷಗಾನದ ಚೌಕಿಯು ಚಿತ್ರಕಲೆ ಮತ್ತು ಕುಶಲಕಲೆಗಳ ಒಂದು ತಾಣವಾಗಿದೆ ಎಂದರೂ ತಪ್ಪಲ್ಲ. ಇಲ್ಲಿ ಸಾಕಾರಗೊಂಡ ರೂಪಗಳು ರಂಗಸ್ಥಳದಲ್ಲಿ ಅಭಿನಯ ಪೂರ್ವಕವಾಗಿ ಹೊರಹೊಮ್ಮುತ್ತವೆ. ವೀಕ್ಷಕರಿಗೆ ಅವಿಸ್ಮರಣೀಯ ಸೊಬಗನ್ನೀಯುತ್ತವೆ.

೬. ಕಲೆ ಮತ್ತು ಬಣ್ಣಗಾರಿಕೆ : ಈಗಾಗಲೇ ತಿಳಿಸಿರುವಂತೆ ಯಕ್ಷಗಾನದ ಪ್ರಮುಖ ಆಕರ್ಷಣೆಯೆಂದರೆ ಬಣ್ಣಗಾರಿಕೆ ಮತ್ತು ವೇಷಭೂಷಣಗಳು. ಇವುಗಳಿಂದ ಗಾಂಭೀರ್ಯಗೊಳ್ಳುವ ಯಕ್ಷಗಾನದ ರಾಜವೇಷ ಇತಿಹಾಸದ ರಾಜನನ್ನು ಮೀರಿಸಿದೆ. ರಾಜರು ಹೀಗೆ ಇದ್ದಿರಬೇಕು ಎಂಬ ಭ್ರಮೆಯನ್ನು ಹುಟ್ಟಿಸುತ್ತದೆ. ಯಕ್ಷಗಾನದ ರಾಕ್ಷಸ ವೇಷಗಳನ್ನು ಕಂಡರೆ ರಾಕ್ಷಸ ವರ್ಗವೇ ಭಯಪಡುವಂತಾಗಬಹುದು.

ಸ್ತ್ರೀ ವೇಷದ ಕೊಂಕು, ಬಿಂಕ, ಲಜ್ಜೆ, ವಯ್ಯಾರ ಮತ್ತು ಸೌಂದರ್ಯವನ್ನು ಕಂಡಾಗ ಸ್ತ್ರೀ ಸಮುದಾಯವೇ ಲಜ್ಜೆಗೊಳ್ಳಬಹುದು. ಅಂತಹ ಯಕ್ಷಗಾನ ಕಲೆ ಲೋಕ ಧರ್ಮಿಯೂ ಹೌದು. ನಾಟ್ಯಧರ್ಮಿಯೂ ಹೌದು. ಕಲಾವಿದ ಡಾ.ಗೋಪಾಲಕೃಷ್ಣ ಹೆಗಡೆಯವರು ಯಕ್ಷಗಾನದ ಆಹಾರ್ಯಾಭಿನಯದಲ್ಲಿ ಎರಡು ವಿಭಾಗಗಳನ್ನು ಗುರುತಿಸಿದ್ದಾರೆ.

೧. ಬಣ್ಣಗಾರಿಕೆ ಅಥವಾ ಮುಖವರ್ಣಿಕೆ ೨. ವೇಷಭೂಷಣಗಳು ಹಾಗೂ ವಸ್ತ್ರಾಲಂಕಾರ ಗಳು. ಭರತನು ನಾಟ್ಯಶಾಸ್ತ್ರದಲ್ಲಿ ಆಹಾರ್ಯಾಭಿನಯವನ್ನು ನಾಲ್ಕು ವಿಭಾಗಗಳಲ್ಲಿ ತಿಳಿಸಿದ್ದಾನೆ. ಅವುಗಳೆಂದರೆ ಪುಸ್ತ, ಅಲಂಕಾರ, ಅಂಗರಚನಾ, ಸಂಜೀವ.

ಯಕ್ಷಗಾನದಲ್ಲಿ ಮೊದಲನೆಯದಾದ ಪುಸ್ತದ ಅಗತ್ಯವಿಲ್ಲ. ಅರಮನೆ, ರಥ, ವಿಮಾನಾದಿಗಳು, ಆನೆ, ಕುದುರೆಗಳು, ಧ್ವಜಸ್ತಂಭ, ಗುಡ್ಡಬೆಟ್ಟನದಿ ಸರೋವರಗಳು ಇತ್ಯಾದಿಯೆಲ್ಲಾ ಯಕ್ಷಗಾನದ ಅಗತ್ಯಗಳಲ್ಲ. ಈ ಅಗತ್ಯಗಳನ್ನು ಹೆಚ್ಚಿನ ವೇಳೆ ನಾಲ್ಕು ಕಂಬಗಳ ನಡುವಿನ ರಂಗಸ್ಥಳವೇ ನಿಭಾಯಿಸುತ್ತದೆ. ರಂಗಸ್ಥಳವೇ ಇಡಿ ಪ್ರಪಂಚವಾಗಿ ಕಾಣುತ್ತದೆ.

ಕೆಲವೊಮ್ಮೆ ಕಲಾವಿದರ ಮಾತು, ಅಭಿನಯಗಳು ಇವುಗಳನ್ನು ಪೂರೈಸಿಕೊಡುತ್ತದೆ. ಯುದ್ಧದ ಕುಣಿತ ರಣರಂಗವನ್ನು, ಬೇಟೆಯ ಕುಣಿತ ಬೆಟ್ಟಗಳನ್ನು, ಜಲಕೇಳಿಯ ಕುಣಿತ ಸರೋವರಗಳನ್ನು, ಒಡ್ಡೋಲಗದ ಕುಣಿತ ಅರಮನೆಯನ್ನು ಕಲ್ಪಿಸಿ ಕೊಡುತ್ತದೆ.

ಪುಸ್ತದ ಹಾಗೆ ಸಂಜೀವ ಕೂಡಾ ಯಕ್ಷಗಾನಕ್ಕೆ ಅನಿವಾರ್ಯವಾಗಿಲ್ಲ. ಸಂಜೀವವೆಂದರೆ ಜೀವಂತ ದ್ವಿಪಾದಿ, ಚತುಷ್ಪಾದಿ, ಅಪಾದಿಗಳು. ವಿವಿಧ ಪ್ರಾಣಿಗಳ ರೂಪವನ್ನು ಸಹಾ ಅಂಗರಚನೆ ಹಾಗೂ ಅಲಂಕಾರಗಳಿಂದಲೇ ಕಲಾವಿದರು ರೂಪಿಸಿಕೊಳ್ಳುತ್ತಾರೆ.

ಯಕ್ಷಗಾನದಲ್ಲಿ ಬಣ್ಣಗಾರಿಕೆ ಅಥವಾ ಮುಖವರ್ಣಿಕೆ ನಡೆಯುವ ಸ್ಥಳ ಚೌಕಿಯೆನಿಸಿದೆ. ಇಲ್ಲಿ ಗಣಪತಿ ಪೆಟ್ಟಿಗೆಯಿಂದ ಎದುರು ಉದ್ದಕ್ಕೆ ವಿದ್ಯುದ್ದೀಪಗಳನ್ನು ನೇತಾಡಿಸಿಕೊಂಡು ಎರಡೂ ಪಕ್ಕಗಳಲ್ಲಿ ಕಲಾವಿದರು ಕುಳಿತುಕೊಂಡು ಬಣ್ಣಗಾರಿಕೆಯನ್ನು ಮಾಡುತ್ತಾರೆ.

ಹಿಂದಿನ ಕಾಲದಲ್ಲಿ ಎಣ್ಣೆ ದೀಪಗಳನ್ನಿಟ್ಟುಕೊಂಡು ಸುತ್ತಲೂ ಕುಳಿತುಕೊಂಡು ಬಣ್ಣಗಾರಿಕೆ ಮಾಡುತ್ತಿದ್ದರು. ಯಕ್ಷಗಾನದ ವೇಷಭೂಷಣಗಳನ್ನು ಇಡುವ ಪೆಟ್ಟಿಗೆಗೆ ಚಿನ್ನದ ಪೆಟ್ಟಿಗೆ ಎಂದು ಹೆಸರು. ಇದರೊಳಗೆ ಬಣ್ಣಗಳು, ಆಭರಣ, ವಸ್ತ್ರ, ಆಯುಧ, ಗೆಜ್ಜೆಗಳು ಇರುತ್ತವೆ. ಹಿಂದಿನ ಕಾಲದಲ್ಲಿ ಅವರವರ ವೇಷದ ಸಾಮಾನುಗಳ ಪೆಟ್ಟಿಗೆ ಅವರವರ ಜವಾಬ್ದಾರಿ ಯಲ್ಲಿರುತ್ತಿತ್ತು. ಈಗ ಸಾಮೂಹಿಕ ಪೆಟ್ಟಿಗೆಗಳು ಇರುತ್ತವೆ. ಅಲ್ಲದೆ ಅದೇ ವೃತ್ತಿಯನ್ನು ಮಾಡುವವರೂ ಇದ್ದಾರೆ. ಬಯಲಾಟದಲ್ಲಿ ಇವರಿಗೆ ಬೇಡಿಕೆ ಹೆಚ್ಚು ಇರುತ್ತದೆ. ವೇಷಭೂಷಣಗಳನ್ನು ಖರೀದಿಸಲು ಶಕ್ತಿಯಿಲ್ಲದವರು ಮತ್ತು ತಮ್ಮ ವೇಷವನ್ನು ತಾವೇ ಸಿದ್ಧಪಡಿಸಿಕೊಳ್ಳಲು ಸಾಧ್ಯವಿಲ್ಲದವರು ಬಾಡಿಗೆ ಪೆಟ್ಟಿಗೆಯವರನ್ನು ಅವಲಂಬಿಸುತ್ತಾರೆ. ಅವರು ಬಣ್ಣ ಹಚ್ಚಿ ವೇಷಭೂಷಣಗಳನ್ನು ತೊಡಿಸಿ ವೇಷವನ್ನು ಸಿದ್ಧಗೊಳಿಸುತ್ತಾರೆ. ಹಿಂದಿನ ಕಾಲದಲ್ಲಿ 'ವೇಷ ಮಾಡಿಕೊಳ್ಳಲು ಬಾರದವನು ಕಲಾವಿದನೇ ಅಲ್ಲ' ಎಂಬ ರೂಢಿಯ ಮಾತೊಂದಿತ್ತು. ಈಗ ಕಾಲ ಬದಲಾಗಿದೆ.

ಯಕ್ಷಗಾನದಲ್ಲಿ ಬಣ್ಣದ ಚೌಕಿ ಒಂದು ಪ್ರಮುಖ ಅಂಗವಾಗಿದೆ. ಇಲ್ಲಿರುವ ಜನರೆಲ್ಲರೂ ಗಂಡಸರೇ. ಸ್ತ್ರೀ ವೇಷವನ್ನು ಪುರುಷರೇ ಧರಿಸುತ್ತಾರೆ. ಸಾಮಾನ್ಯವಾಗಿ ಪುರುಷವೇಷ

ಧರಿಸುವವರು ಕಪ್ಪು ಚಲ್ಲಣವನ್ನು ಧರಿಸುತ್ತಾರೆ. ಸ್ತ್ರೀ ವೇಷಧಾರಿಗಳು ಕಿರುಗಣೆ ತೊಟ್ಟು ಬಣ್ಣದ ಪೆಟ್ಟಿಗೆಯ ಮುಂದೆ ಕುಳಿತುಕೊಳ್ಳುತ್ತಾರೆ. ಅವರ ಎದೆಯ ಭಾಗವೆಲ್ಲಾ ಬರಿದಾಗಿಯೇ ಇರುತ್ತದೆ. ಸ್ತ್ರೀ ವೇಷದವರು ತಲೆ ಬಾಚಿಕೊಂಡು ಹೆರಳು ಹಾಕಿದರೆ, ಗಂಡು ವೇಷದವರು ತಲೆಯ ತುಂಬು ಗೂದಲನ್ನು ನೆತ್ತಿಯ ಮೇಲಕ್ಕೆ ಎಳೆದು, ಜುಟ್ಟು ಬಿಗಿಯುತ್ತಾರೆ. ನಂತರ ಮುಖಕ್ಕೆ ಬಣ್ಣ ಸವರುವ ಕಾರ್ಯಕ್ರಮಕ್ಕೆ ತೊಡಗುತ್ತಾರೆ.

ಯಕ್ಷಗಾನ ಆರಂಭದ ಕಾಲದಿಂದಲೂ ರಾತ್ರಿಯಲ್ಲಿ ಆಡುತ್ತಿದ್ದ ಆಟಗಳಿಗೆ ಎಣ್ಣೆ ದೀವಟಿಗೆಗಳು ಬೆಳಕನ್ನು ಕೊಡುತ್ತಿದ್ದುದರಿಂದ ಅದಕ್ಕೆ ಹೊಂದುವ ರೀತಿಯಲ್ಲಿ ವೇಷ-ವರ್ಣ ಸಂಯೋಜನೆ ಇರುತ್ತಿತ್ತು. ಎಣ್ಣೆ ದೀವಟಿಗೆಗಳ ಬೆಳಕು ಅಷ್ಟೊಂದು ಉಜ್ವಲವಾಗಿಲ್ಲದಿದ್ದುದರಿಂದ ಮತ್ತು ಹಳದಿ ಬಣ್ಣದ ಪ್ರಕಾಶ ಹೊರ ಹೊಮ್ಮುತ್ತಿದ್ದುದರಿಂದ ಆ ವೇಷ ಭೂಷಣಗಳು ರಂಗಸ್ಥಳದಲ್ಲಿ ಒಂದುರೀತಿಯ ಭ್ರಾಮಕ ಪರಿಣಾಮವನ್ನು ಸೃಷ್ಟಿಸುತ್ತಿದ್ದವು.

ಆ ಬೆಳಕು ಅಷ್ಟೊಂದು ಪ್ರಕಾಶಮಾನವಾಗಿಲ್ಲದಿದ್ದುದರಿಂದ ಆಭರಣಗಳ ನ್ಯೂನತೆಗಳಾಗಲೀ, ಅವನ್ನು ಕಟ್ಟಿದ ಹಗ್ಗದ ಕುಡಿಗಳಾಗಲೀ ಕಣ್ಣಿಗೆ ಹೊಡೆದು ಕಾಣಿಸುತ್ತಿರಲಿಲ್ಲ. ಆದರೆ ಕಳೆದ ಶತಮಾನದ ಆರಂಭದಲ್ಲಿ ಬಳಕೆಗೆ ಬರತೊಡಗಿದ ಕಿಟ್ಸನ್ ದೀಪ, ಪೆಟ್ರೋಮ್ಯಾಕ್ಸ್ ದೀಪಗಳಂತಹ ಗ್ಯಾಸ್ ದೀಪಗಳು ಹಳದಿ ಬಣ್ಣದ ಮಂಜು ಬೆಳಕಿನ ಬದಲು ಉಜ್ವಲ ಬಿಳಿಯ ಬೆಳಕು ರಂಗಸ್ಥಳದ ಮೇಲೆ ಚೆಲ್ಲತೊಡಗಿತು.

ಇದರಿಂದಾಗಿ ಪಾತ್ರಧಾರಿಗಳು ತಮ್ಮ ಮುಖದ ಮೂಲ ಬಣ್ಣವನ್ನು ಬದಲಿಸಬೇಕಾಗಿ ಬಂತು. ಹಿಂದಿನ ಕಾಲದಲ್ಲಿ ಮುಖಕ್ಕೆ ತೆಂಗಿನ ಎಣ್ಣೆಯಲ್ಲಿ ಅರದಾಳದ ಪುಡಿಗಳನ್ನು ಬೆರೆಸಿ ಹಚ್ಚಿಕೊಳ್ಳುತ್ತಿದ್ದರು. ಅದನ್ನು ಬಿಟ್ಟು ಗ್ಯಾಸ್ ದೀಪಗಳ ಬೆಳಕಿಗೊಪ್ಪುವ ಬೇರೆ ಬಣ್ಣದ ಲೇಪಕ್ಕೆ ತೊಡಗಬೇಕಾಯಿತು. ನಂತರ ವಿದ್ಯುದ್ದೀಪಗಳು ಬರತೊಡಗಿದಾಗ ಮುಖಕ್ಕೆ ಲೇಪಿಸುವ ಪ್ರಧಾನ ಲೇಪನದ ಬಣ್ಣದ ಗುಣ ತೀರಾ ಬದಲಾಗಬೇಕಾಯಿತು.

ಬಾಲವೇಷಗಳ ಮುಖವರ್ಣಿಕೆ ಮತ್ತು ಸ್ತ್ರೀ ವೇಷಗಳ ಮುಖವರ್ಣಿಕೆ ಸರಳವಾಗಿರುತ್ತದೆ. ಸಪೇತು, ಇಂಗಲೀಕ, ಹಳದಿ ಬಣ್ಣದ ಪುಡಿಗಳನ್ನು ತೆಂಗಿನ ಎಣ್ಣೆಯಲ್ಲಿ ಬೆರೆಸಿ, ತಿಕ್ಕಿ ಮುಖಕ್ಕೆ ಸಮನಾಗಿ ಲೇಪಿಸಿಕೊಳ್ಳುವುದು ವಾಡಿಕೆ. ಅದನ್ನು ಹಚ್ಚಿಕೊಂಡ ಮೇಲೆ ಹುಬ್ಬು ಮತ್ತು ಎದೆಗಳಿಗೆ ಕಪ್ಪು ಹಚ್ಚಿಕೊಳ್ಳುತ್ತಾರೆ. ತುಟಿಗೆ ಕೆಂಪು ಸವರುತ್ತಾರೆ. ನಾಮ ಇಲ್ಲವೇ ತಿಲಕ ಇಟ್ಟುಕೊಳ್ಳುತ್ತಾರೆ. ಗಂಡು ವೇಷಗಳಲ್ಲಿ ಗಂಧರ್ವ, ಕಿರಾತ ಮೊದಲಾದ ಪಾತ್ರಗಳಿಗೆ ಇನ್ನಷ್ಟು ಮುಖವರ್ಣಿಕೆಯ ಕೆಲಸವಿರುತ್ತದೆ. ರಾಕ್ಷಸ ವೇಷದ ಮುಖವರ್ಣಿಕೆ ಮತ್ತೂ ಕ್ಲಿಷ್ಟವಾದದ್ದು.

ಗಂಡುವೇಷಗಳು ಧರಿಸುವ ಮುಂಡಾಸುಗಳ ರಚನೆಗೆ ಸಾಕಷ್ಟು ಸಮಯ ಹಿಡಿಯುತ್ತದೆ. ನೆತ್ತಿಯ ಮೇಲೆ ಕಟ್ಟಿದ ಜುಟ್ಟೇ ಅದಕ್ಕೆ ಆಧಾರವಾಗಿರುತ್ತದೆ. ಅದರ ಸುತ್ತು ಅಟ್ಟೆ ಅಟ್ಟೆ

ಯಾಗಿ ಮುಂಡಾಸು ಬೆಳೆದು, ಕೆಸವೆ ಎಲೆಯ ಆಕಾರದಲ್ಲಿ ರೂಪುಗೊಳ್ಳುತ್ತದೆ. ಕಿರೀಟ ತೊಡುವುದಕ್ಕೂ ಜುಟ್ಟೇ ಆಧಾರವಾಗುತ್ತದೆ.

ಮುಖದ ಬಣ್ಣದ ಕೆಲಸ ಮುಗಿದ ಬಳಿಕ ರಾತ್ರಿಯೆಲ್ಲಾ ಧರಿಸಬೇಕಾದ ಉಡುಗೆ-ತೊಡುಗೆಯ ಕೆಲಸ ತೊಡಗುತ್ತದೆ. ಗಂಡು ವೇಷಗಳು ವೀರ ಇಲ್ಲವೆ ರಾಕ್ಷಸ ವೇಷಗಳಾದರೆ, ಹದಿನೆಂಟು ಮೊಳ ಉದ್ದದ ಚೌಕಳಿ ಬಟ್ಟೆಯನ್ನು ಇಚ್ಚಿಡಿಸಿ ವೀರ ಕಚ್ಚೆ ಹಾಕುತ್ತಾರೆ. ಮೇಲೆ ಹಸುರು ಇಲ್ಲವೆ ಕೆಂಪು ಬಣ್ಣದ ಹತ್ತಿಯ ದಗಲೆ ಅಂಗಿ ತೊಡುತ್ತಾರೆ. ಅವುಗಳ ಮೇಲೆ ಆಭರಣಗಳು ಬರುತ್ತವೆ.

ಮುಖವರ್ಣಿಕೆಯಲ್ಲಿ ಇಂದಿನವರು ಸಾಮಾನ್ಯವಾಗಿ ಮುಖ, ಕೈಕಾಲುಗಳಿಗೆ ಸಫೇದು, ಸ್ವಲ್ಪ ಹಳದಿಪುಡಿ, ಸ್ವಲ್ಪ ಇಂಗ್ಲೀಕದ ಪುಡಿಗಳನ್ನು ಬೆರೆಸಿ, ಹಳದಿಪೂರಿತ ಪಾಟಲ ಬಣ್ಣದ ಒಂದು ಲೇಪನಗಳನ್ನು ತಯಾರಿಸುತ್ತಾರೆ. ಅದಕ್ಕೆ ತೆಂಗಿನ ಎಣ್ಣೆ ಬೆರೆಸಿ ಮುಖ, ಕತ್ತು, ಹಸ್ತ ಮೊದಲಾದುದಕ್ಕೆ ಸವರಿಕೊಳ್ಳುತ್ತಾರೆ.

ಇದನ್ನು ಮುಖಕ್ಕೆ ಸವರಿದ ಬಳಿಕ ಮೇಲೆ ಒಂದಿಷ್ಟು ಫೇಸ್ ಪೌಡರನ್ನು ಕುಂಚದಿಂದ ಸವರಿಕೊಳ್ಳುತ್ತಾರೆ. ಕಣ್ಣು, ಹುಬ್ಬು, ತುಟಿಯನ್ನು ರೂಪಿಸಿಕೊಳ್ಳುತ್ತಾರೆ. ಮೀಸೆ ತೊಡುವ ವೇಷಗಳಲ್ಲಿ ಗಲ್ಲದ ಕೆಳಗಡೆ ಕಪ್ಪುಗೆರೆಯನ್ನು ಹಾಕಿ ಅದರ ಕೆಳಭಾಗವನ್ನು ಕೂದಲಿನ ಸೂಚನೆ ಕೊಡುವುದಕ್ಕಾಗಿ ಕಪ್ಪಾಗಿ ಬಳಿದುಕೊಳ್ಳುತ್ತಾರೆ. ಮುಖ ಹೊಡೆದು ಕಾಣಿಸುವುದಕ್ಕೆ ಇದು ಅವಶ್ಯಕ. ಏಕೆಂದರೆ ಅವರು ಧರಿಸುವ ಶಿರೋಭೂಷಣ, ಕರ್ಣಕುಂಡಲ, ಕತ್ತಿನ ಸರ, ಎದೆಯ ಆಭರಣ ಮೊದಲಾದುವುಗಳು ಥಳಥಳಿಸುವಾಗ, ಮುಖದ ಪಾಟಲವರ್ಣ ಎದ್ದು ಕಾಣಿಸುವ ಗಲ್ಲದ ಕೆಳಗಡೆ ಕಪ್ಪು ಬಣ್ಣವಿದ್ದರೆ ಹೆಚ್ಚಿನ ಪುಷ್ಟಿ ಸಿಗುತ್ತದೆ.

ಮುಖದ ಸಾದಾವರ್ಣ ಲೇಪನವಾದ ಬಳಿಕ ಕಣ್ಣಿನ ಆಚೀಚೆ ಎರಡು ಬಿಳಿಯ ದುಂಡು ಬೊಟ್ಟುಗಳನ್ನು ಲೇಪಿಸಿ, ಅವುಗಳ ಹೊರಗಡೆ ಕೆಂಪು ಅಂಚನ್ನು ಬರೆಯುತ್ತಾರೆ. ಇದು ಗೋಪೀ ಚಂದನದ ಸಂಕೇತ. ಬಳಿಕ ಹಣೆಗೆ ತಿಲಕವನ್ನೋ, ನಾಮವನ್ನೋ ಬರೆದುಕೊಳ್ಳುತ್ತಾರೆ. ಇದು ಬರಿಯ ಬೊಟ್ಟಲ್ಲ. ಮೊದಲು ಬೆರಳಷ್ಟು ದಪ್ಪದ ಬಿಳಿ ನಾಮವನ್ನು ಬರೆದು, ಅದರ ಅಂಚಿಗೆ ಕೆಂಪುಗೆರೆ ಎಳೆದು ಆನಂತರ ಬಿಳಿನಾಮದ ಮೇಲೆ ಕಪ್ಪುಗೆರೆ ಇಲ್ಲವೆ ತಿಲಕವನ್ನು ಇರಿಸುವುದು ಕ್ರಮ. ಸ್ತ್ರೀ ಪಾತ್ರಗಳು ಗಂಡು ಪಾತ್ರಗಳಂತೆ ಕಣ್ಣಿನ ಮಗ್ಗುಲಿಗೆ ಗೋಪೀ ಚಂದನದ ಗುರುತು ಹಾಕುವುದಿಲ್ಲ. ಹಣೆಗೆ ಬೊಟ್ಟನಂತರ ತಿಲಕವನ್ನೋ, ಜೋಡು ಗೆರೆಗಳ ನಾಮವನ್ನೋ ಹಾಕಿಕೊಳ್ಳುತ್ತಾರೆ.

ಯಕ್ಷಗಾನದ ಸರಳ ವೇಷಗಳಲ್ಲಿ ಬಾಲಗೋಪಾಲರು, ಲವ ಕುಶರು, ಕೃಷ್ಣ, ಅಭಿಮನ್ಯು, ಬಭ್ರುವಾಹನರಂಥ ಪಾತ್ರಗಳನ್ನು ಸೇರಿಸಬಹುದು. ಅವರು ಬೆಳೆದ ಗಂಡಸರಂತೆ ಮೀಸೆ ಧರಿಸುವ ಕ್ರಮವಿಲ್ಲ. ಕೃಷ್ಣನ ಮುಖವರ್ಣಿಕೆ ಕೂಡಾ ಇದೇ ತೆರನಾದದ್ದು. ಆತ ನಿತ್ಯ ಬ್ರಹ್ಮಚಾರಿ ಎಂಬ ಕಲ್ಪನೆ ಬಂದುದರಿಂದ ಅವನನ್ನು ಎಳೆಯನಂತೆಯೇ ತೋರಿಸುವ ವಾಡಿಕೆ

ಯಿದೆ. ದುಡುಕು ಸ್ವಭಾವದ ಪಾತ್ರಗಳಲ್ಲಿ ಇಲ್ಲವೇ ಕಿರಾತ, ಗಂಧರ್ವರಂಥ ಪಾತ್ರಗಳ ಮುಖವರ್ಣಿಕೆಯಲ್ಲಿ ಕಣ್ಣಿನ ಕೆಳಗಡೆ ಸ್ವಲ್ಪ ಜಾಗಕ್ಕೆ ಕೆಂಪುಬಣ್ಣ ಸವರುತ್ತಾರೆ. ಇದರಿಂದಾಗಿ ಮುಖ ಸ್ವಲ್ಪ ಉನ್ಮತ್ತವಾಗಿ ಕಾಣಿಸುತ್ತದೆ.

ಪರಶುರಾಮ, ಅಶ್ವತ್ಥಾಮರಂತಹ ದುಡುಕಿನ ಋಷಿಮುನಿಗಳ ಪಾತ್ರಗಳನ್ನು ಚಿತ್ರಿಸುವಾಗಲೂ ಕಣ್ಣಿನ ಸುತ್ತು ಕೆಂಪು ಬಣ್ಣ ಸವರಿಕೊಳ್ಳುತ್ತಾರೆ. ಅವರಿಗೆ ಗಡ್ಡ ಮೀಸೆಗಳೆರಡೂ ಇರುತ್ತದೆ. ಪರಶುರಾಮನಿಗೆ ಕೆಂಚುಬಣ್ಣದ ಗಡ್ಡ ಧರಿಸಿದರೆ, ಕೃಪ, ದ್ರೋಣರ ಮೀಸೆ ಕಪ್ಪಾಗಿರುತ್ತದೆ. ಬ್ರಹ್ಮನ ಪಾತ್ರಕ್ಕೆ ಕೆಂಚುಗಡ್ಡವಿರುತ್ತದೆ.

ದಶರಥ ಮೊದಲಾದ ಮುದುಕ ಪಾತ್ರಗಳಿಗೂ ಕೆಂಚುಗಡ್ಡವನ್ನು ಕಟ್ಟಿಕೊಳ್ಳುತ್ತಾರೆ. ಅತಿ ಪ್ರಾಯದ ಪಾತ್ರಗಳಿಗೆ ಬಿಳಿಯ ಗಡ್ಡ ಮೀಸೆ ಧರಿಸುತ್ತಾರೆ. ಅದಕ್ಕೆ ತಕ್ಕಂತೆ ಥಳ ಥಳಿಸುವ ಕೊರಳಪಟ್ಟಿ ಎದೆ ಕಟ್ಟುಗಳನ್ನು ಕಟ್ಟಿಕೊಳ್ಳುತ್ತಾರೆ. ವೀರ ಪಾತ್ರಗಳಲ್ಲೂ ಅತಿಕಾಯನಂತಹ ಪಾತ್ರದ ಮುಖವರ್ಣಿಕೆ ಬೇರೆ ತೆರನಾಗಿರುತ್ತದೆ. ಆತ ಅಸುರ ಪುತ್ರನಾದರೂ ಸೌಮ್ಯ ಸ್ವಭಾವದವನು.

ಹಾಗಾಗಿ ರಾಕ್ಷಸ ಪಾತ್ರದ ಉಗ್ರತೆಯನ್ನೂ, ವೀರ ಪಾತ್ರದ ಗಾಂಭೀರ್ಯವನ್ನೂ ಅವನ ಮುಖವರ್ಣಿಕೆಯಲ್ಲಿ ತೋರಿಸಬೇಕಾಗುತ್ತದೆ. ಹಾಗಾಗಿ ಆ ಪಾತ್ರದ ಮುಖಕ್ಕೆ ಲೇಪಿಸುವ ತಳಪಾಯದ ಬಣ್ಣ ಹಸುರು. ಅದರ ಮೇಲೆ ಬಿಳಿ ಚಿಟ್ಟೆಗಳ ಸಾಲು ಬರೆದು ಕ್ರೂರತೆಯನ್ನು ತೋರ್ಪಡಿಸುತ್ತಾರೆ. ಆದರೂ ಈ ರೂಪವು ಸಾಮಾನ್ಯ ರಾಕ್ಷಸ ವೇಷಗಳಷ್ಟು ಉಗ್ರವಾಗಿ ಕಾಣುವುದಿಲ್ಲ.

ಯಕ್ಷಗಾನಕ್ಕೂ ನಾಟ್ಯಶಾಸ್ತ್ರಕ್ಕೂ ಸಂಬಂಧವಿದೆ. ನಾಟ್ಯ ಶಾಸ್ತ್ರದಲ್ಲಿ ಸೂಚಿಸಿದ ರೀತಿಯಲ್ಲಿಯೇ ಹೆಚ್ಚಿನ ವೇಳೆ ಬಣ್ಣಗಾರಿಕೆಯನ್ನು ಮಾಡುತ್ತಾರೆ. ನಾಟ್ಯಶಾಸ್ತ್ರದ ಪ್ರಕಾರ ರುದ್ರ, ಬ್ರಹ್ಮ, ಸ್ಕಂದ, ಯಕ್ಷ, ಅಪ್ಸರೆಯರಿಗೆ ಬಂಗಾರದಂತೆ ಹೊಳೆಯುವ ಗೌರವರ್ಣವನ್ನು ಸೂಚಿಸಲಾಗಿದೆ. ಚಂದ್ರ, ಬೃಹಸ್ಪತಿ, ಇಂದ್ರ, ಶುಕ್ರ, ವರುಣ, ನಕ್ಷತ್ರಗಣ, ಸಮುದ್ರ, ಹಿಮಾಲಯ, ಗಂಗಾ ಇವುಗಳಿಗೆಲ್ಲಾ ಬಿಳಿಯ ಬಣ್ಣ, ನಾರಾಯಣ, ನರ, ವಾಸುಕಿ, ದೈತ್ಯ ದಾನವ ರಾಕ್ಷಸ, ಗುಹ್ಯಕ, ನಾಗ, ಪಿಶಾಚ, ಯಮ, ಆಕಾಶ ಇವುಗಳಿಗೆಲ್ಲಾ ಶ್ಯಾಮ ವರ್ಣ, ರಾಜರುಗಳಿಗೆ ಶ್ಯಾಮ ಪದ್ಮ ಹಾಗೂ ಗೌರವರ್ಣ, ಹೇಯ ಕಾರ್ಯ ಮಾಡುವವರಿಗೆ, ಗ್ರಹವ್ಯಾಧಿಪೀಡಿತರಿಗೆ, ತಪೋನಿರತ ಋಷಿಮುನಿಗಳಿಗೆ ಅನಿತ ವರ್ಣ(ಬಿಳಿ ಅಲ್ಲದ ಕಪ್ಪುಬಣ್ಣ-ನಾರದ, ಶಬರ ಮುಂತಾದ ಪಾತ್ರಗಳಿಗೆ), ಬರ್ಬರ, ಕಿರಾತ, ಆಂಧ್ರ, ದ್ರಮಿಳ, ಕಾಶಿ, ಕೋಸಲ, ಪುಲಿಂದ, ದಾಕ್ಷಿಣಾತ್ಯರಿಗೆ ಅನಿತ ಬಣ್ಣ, ಬ್ರಾಹ್ಮಣ, ಕ್ಷತ್ರಿಯರಿಗೆ ಗೌರಬಣ್ಣ, ವೈಶ್ಯ, ಶೂದ್ರರಿಗೆ ಶ್ಯಾಮ ಬಣ್ಣ ಈ ಬಗೆಯ ಬಣ್ಣ ವಿಧಿಗಳನ್ನು ಭರತಮುನಿಗಳು ಉಲ್ಲೇಖಿಸಿದ್ದಾರೆ.

ಆದರೂ ಯಕ್ಷಗಾನದ ಬಣ್ಣಗಾರಿಕೆಯು ಕೆಲವೊಮ್ಮೆ ಪ್ರತ್ಯೇಕತೆಯನ್ನು ಸಾರುವುದಿದೆ. ಮಂಡಲಗಳಂತೆ ವರ್ಣಸಾಮ್ಯವನ್ನು ರಾಕ್ಷಸ ವೇಷದ ಮುಖವರ್ಣಿಕೆಯಲ್ಲಿ ಬಳಸುತ್ತಾರೆ. ಪ್ರಾದೇಶಿಕವಾಗಿ ದೊರಕುವ ಬಿಳಿಯ ಶೇಡಿ ಮಣ್ಣು, ಅರಶಿಣ, ಕುಂಕುಮ, ಇಂಗಾಲ, ಹರಳೆಣ್ಣೆ ದೀಪದ ಮಸಿ ಇವುಗಳೊಂದಿಗೆ ಎಣ್ಣೆ ನೀರು ಬಳಸಿಕೊಂಡು ಆರಂಭಿಕ ಹಂತಗಳಲ್ಲಿ ವೇಷ ಧರಿಸುತ್ತಿದ್ದರು.

ಈಗ ಬಣ್ಣದ ಪುಡಿಗಳು ಧಾರಾಳವಾಗಿ ಸಿಗುವುದರಿಂದ ಅವುಗಳನ್ನೆ ಬಳಸುತ್ತಾರೆ. ಕಳೆದ ಶತಮಾನದ ಆರಂಭ ಕಾಲದವರೆಗೆ ಹೊನ್ನೆಯೆಣ್ಣೆ ಸುರಿದು ಉರಿಸುವ ದೀವಟಿಗೆಗಳ ಬೆಳಕಿನಲ್ಲಿ ಬಯಲಾಟ ನಡೆಯುತ್ತಿತ್ತು. ದೀವಟಿಗೆಗಳ ಮಂದ ಬೆಳಕಿನಲ್ಲಿ ಕತ್ತಲಿನ ಹಿನ್ನೆಲೆಯಿಂದ ಯಕ್ಷಗಾನ ವೇಷಗಳು ಮೂಡಿ ಕಾಣಿಸುತ್ತಿದ್ದವು. ಅದಕ್ಕಾಗಿ ಕತ್ತಲಿನ ಕಪ್ಪು ಹಿನ್ನೆಲೆಯಲ್ಲಿ ಹೊಡೆದು ಕಾಣಿಸುವ ಬಣ್ಣಗಳನ್ನೇ ಮುಖವರ್ಣಿಕೆಗೂ ಉಡುಗೆ ತೊಡುಗೆಗಳಿಗೂ ಬಳಸುತ್ತಿದ್ದರು. ಬಿಳಿ, ಕೆಂಪು, ಹಳದಿ, ಕಪ್ಪು, ಹಸಿರು ಬಣ್ಣ ಮತ್ತು ಅವುಗಳ ಮಿಶ್ರ ಬಣ್ಣಗಳೇ ಇಲ್ಲಿ ಮುಖವರ್ಣಿಕೆಯಾಗಿ ಬಳಕೆಯಾಗುತ್ತಿದ್ದವು.

ಮುಖದಲ್ಲಿ ಹಸಿ ಬಣ್ಣಗಳೇ ಇರುತ್ತಿದ್ದವು. ಮುಖದಲ್ಲಿ ಹೆಚ್ಚಾಗಿ ರೇಖೆಗಳ, ಬೊಟ್ಟುಗಳ ವಿನ್ಯಾಸವಿರುತ್ತಿತ್ತು. ರಾಕ್ಷಸ ರಾಕ್ಷಸಿಯರಂತಹ ಪಾತ್ರಗಳ ಮುಖವರ್ಣಿಕೆ ತುಂಬಾ ಉಗ್ರವಾಗಿರುತ್ತದೆ. ಅದನ್ನು ಬರೆಯುವುದಕ್ಕೂ ತುಂಬಾ ಕಾಲ ಹಿಡಿಯುತ್ತದೆ. ರಾಕ್ಷಸ ಪಾತ್ರದಲ್ಲಿ ತಳಪಾಯದ ಬಣ್ಣ ಹಸಿರು ಅಥವಾ ಕೆಂಪು ಆಗಿರುತ್ತದೆ. ರಾಕ್ಷಸಿ ಪಾತ್ರದಲ್ಲಿ ತಳಪಾಯದ ಬಣ್ಣ ಕಪ್ಪು ಆಗಿರುವುದಿದೆ. ರಾಕ್ಷಸ ಪಾತ್ರದ ಮುಖವರ್ಣಿಕೆಯಲ್ಲಿ ಸ್ವಾಭಾವಿಕ ರೆಪ್ಪೆಯ ಮೇಲೆ ಕಪ್ಪು ಬರೆದು ಅದನ್ನು ಮರೆಸಿ ಹಣೆಯ ಮೇಲೆ ಕೃತಕ ಕಣ್ಣಿನ ಚಿತ್ರವನ್ನು ಬರೆಯುತ್ತಾರೆ.

ಇಂಥ ಪಾತ್ರದ ಮುಖದ ಬಣ್ಣ ಒಂದೇ ಸಮನಾದ ಲೇಪವಾಗಿರದೆ ಕೆಂಪು, ಹಸಿರು, ಕಪ್ಪು, ಬಣ್ಣಗಳಿಂದ ಬರೆಯುವ ಒಂದು ಚಿತ್ತಾರದಂತೆ ಕಾಣುತ್ತದೆ. ಎರಡೆರಡು ಬಣ್ಣಗಳು ಕೂಡುವ ರೇಖೆಗಳು ಬರುವಲ್ಲಿ ನಡುವೆ ಬಿಳಿ ಚಿಟ್ಟೆಗಳ ಸಾಲನ್ನು ಬರೆಯುತ್ತಾರೆ. ವಾಲಿ, ಸುಗ್ರೀವ, ಹನುಮರಂಥ ಕಪಿಗಳು, ಜಾಂಬವನಂಥ ಕರಡಿ, ಜಟಾಯುವಿನಂಥ ಪಕ್ಷಿಗಳನ್ನು ಚಿತ್ರಿಸುವುದು ಕಷ್ಟದ ಕೆಲಸವಾಗಿರುತ್ತದೆ. ಏಕೆಂದರೆ ಅವರು ವೀರರಾಗಿಯೂ ಕಾಣಬೇಕು, ಪಶುನರರಂತೆಯೂ ಕಾಣಬೇಕು.

ಹನುಮ, ವಾಲಿ, ಸುಗ್ರೀವರಂಥವರು ವೀರರಂತೆ ತೋರಿಬಂದರೂ ಮುಖವರ್ಣಿಕೆಯ ರೀತಿ ಅವರ ಕಪಿತನಕ್ಕೆ ಒಪ್ಪುವಂತಿರ ಬೇಕು. ಸುಗ್ರೀವನಂಥ ಪಾತ್ರದ ಮುಖಲೇಪನ ಕಪ್ಪು ಬಣ್ಣದ್ದಾಗಿದ್ದು ಕಣ್ಣಿನ ಸುತ್ತಲೂ ಚೌಕುಳಿ ರೇಖೆಯ ಚಿಟ್ಟೆಗಳ ಸಾಲನ್ನು ಬರೆದು ತೋರಿಸುತ್ತಿದ್ದರು. ಮುಖದ ಕೆಳಗಡೆ ಗಡ್ಡ ಮೀಸೆಗಳನ್ನು ಇರಿಸುತ್ತಿದ್ದರು. ಯಕ್ಷಗಾನ ರಂಗಸ್ಥಳ

ದಲ್ಲಿ ಋಷಿ, ಚಾರಕ, ಹನುಮನಾಯಕರಂಥ ಸರಳ ಪಾತ್ರಗಳು ಮುಖಕ್ಕೆ ಬಣ್ಣ ಸವರಿಕೊಳ್ಳುವುದಿಲ್ಲ. ಆದರೆ ಪಾತ್ರಕ್ಕೆ ಉಚಿತವಾದ ಗಡ್ಡ-ಮೀಸೆಗಳನ್ನು ಧರಿಸುತ್ತಾರೆ. ಇಂಥ ಸರಳ ಪಾತ್ರಗಳ ಉಡುಗೆಯೂ ಸಾದಾವಾಗಿರುತ್ತದೆ.

ಕಳೆದ ಶತಮಾನದ ಆರಂಭದಲ್ಲಿ ಗಂಡು ಪಾತ್ರಗಳು ಹೆಚ್ಚಾಗಿ ಕೆಂಪು ಅಂಚಿನ ಬಿಳಿ ಧೋತ್ರ ಉಡುತ್ತಿದ್ದರು. ತಲೆಗೆ ರುಮಾಲು ತೊಡುವಲ್ಲಿ ಕೆಂಪು ಮತ್ತು ಬಿಳಿ ಅರಿವೆಗಳನ್ನು ಜೋಡಿಸಿ ಮುಂಡಾಸು ಸುತ್ತುತ್ತಿದ್ದರು. ಋಷಿ ಮುನಿಗಳ ಪಾತ್ರದಲ್ಲಿ ಮೈಯನ್ನು ಮುಚ್ಚಲು ಕೆಂಪಂಚಿನ ಬಿಳಿಶಾಲುಗಳನ್ನು ಹೊದೆಯುತ್ತಿದ್ದರು. ಹನುಮ ನಾಯಕನಂತಹ ಪಾತ್ರಗಳು ಬಿಳಿಬಣ್ಣದ ನೀಳಕಸೆ ಅಂಗಿ ತೊಡುವುದು ವಾಡಿಕೆಯಾಗಿತ್ತು.

ಈ ಸಾಮಾನ್ಯ ಪಾತ್ರಗಳ ಉಡುಗೆ ತೊಡುಗೆಗಳು ಯಕ್ಷಗಾನದ ಉಳಿದೆಲ್ಲಾ ಪಾತ್ರಗಳಿಗಿಂತ ಭಿನ್ನವಾಗಿ ಕಾಣಿಸುತ್ತದೆ. ಆಧುನಿಕತೆ ಬಂದಂತೆ ಹಸಿ ಬಣ್ಣ ಬರೆದು ತಯಾರಾಗುತ್ತಿದ್ದ ಮುಖವರ್ಣಿಕೆಯ ಸ್ಥಾನದಲ್ಲಿ ನಾಟಕದವರಂತೆ ಬಣ್ಣ ಹಚ್ಚಿ ಪೌಡರ ಹಾಕಿ ನೀರು ಒತ್ತಿ ವೇಷ ಮಾಡುತ್ತಿದ್ದರು. ರೇಖೆ, ಮುತ್ತರಿಗಳ ಜಾಗದಲ್ಲಿ ಶೇಡ್ ಕೊಡತೊಡಗಿದರು. ಮುಖಗಳು ಹೆಚ್ಚು ಹೆಚ್ಚಾಗಿ ಮಾಯಾಲೋಕವನ್ನು ಸರಿಸಿ ವಾಸ್ತವ ಲೋಕಕ್ಕೆ ತಿರುಗ ತೊಡಗಿದವು.

ಅರ್ವತ್ತರ ದಶಕದಿಂದೀಚೆಗೆ ಮುಖವರ್ಣಿಕೆಯ ರೀತಿ ಮನಬಂದಂತೆ ವ್ಯತ್ಯಾಸಗೊಳ್ಳ ತೊಡಗಿದೆ. ನಾಮಗಳು, ಮುದ್ರೆಗಳು, ಗದ್ದ ಬರೆಯುವುದು, ಅವುಗಳನ್ನು ರಚಿಸುವ ಬಣ್ಣಗಳು ಎಲ್ಲವೂ ಕಲಾವಿದರಿಗೆ ಆ ಹೊತ್ತಿಗೆ ಹೇಗೆ ಚಂದ ಅಂತ ಅನ್ನಿಸಿತೊ ಹಾಗೆ ಮಾಡ ತೊಡಗಿದರು.

ಹುಬ್ಬು, ಕಣ್ಣು ರೆಪ್ಪೆಗಳ ಬರಹವನ್ನು ಕೆಲವೊಮ್ಮೆ ಕಥಕ್ಕಳಿಯ ಹಾಗೆ ಕೆಲವೊಮ್ಮೆ ಚೀನೀ ಚಿತ್ರಗಳ ಹಾಗೆ ಚಿತ್ರವಿಚಿತ್ರವಾಗಿ ಬರೆಯಲು ತೊಡಗಿದ್ದನ್ನು ಗಮನಿಸಬಹುದು. ಹುಬ್ಬನ್ನು ಬಿಲ್ಲಿನಾಕಾರದಲ್ಲಿ ಸೌಮ್ಯ ಸುಂದರವಾಗಿ ಬರೆಯುವುದು ಹಳೆಯ ಕ್ರಮವಾಗಿತ್ತು. ಮೀಸೆ, ಗಡ್ಡಕಟ್ಟುವ ವಿಷಯದಲ್ಲೂ ಸಾಂಪ್ರದಾಯಿಕ ರೀತಿಯನ್ನು ತೊರೆಯಲಾಗಿದೆ. ಕೆಲವರು ಮೀಸೆಯಂತೆ ಹುಬ್ಬನ್ನು ಕ್ರೇಪ್ ಹ್ಯಾರಿನಿಂದ ತಯಾರಿಸಿ ಕಟ್ಟಲು ತೊಡಗಿದ್ದಾರೆ.

ನಾಮ ಮತ್ತು ಕೆನ್ನೆಯ ಮುದ್ರೆಗಳಲ್ಲಿ ಬಡಗುತಿಟ್ಟಿಗೆ ಮತ್ತು ತೆಂಕುತಿಟ್ಟಿಗೆ ಪ್ರತ್ಯೇಕವಾದ ಪರಂಪರೆಯ ಚಿತ್ರವಿತ್ತು. ಈಗ ಅವೆರಡೂ ಮನಬಂದಂತೆ ಬದಲಿಕೊಂಡಿವೆ. ಹಿಂದೆ ನಾಮ ಮುದ್ರೆಗಳಿಂದಲೇ ಪಾತ್ರ ಇಂಥದ್ದೆಂದು ಗುರುತಿಸಲಾಗುತ್ತಿತ್ತು. ಎರಡೂ ತಿಟ್ಟುಗಳಲ್ಲಿ ಕಟ್ಟು ಮೀಸೆಯ ಬಳಕೆ ಯಿತ್ತು. ಮೂಗಿನಿಂದ ಹಾದು ಕಿವಿಯ ಕೆಳಗಿನಿಂದ ಕಟ್ಟಲ್ಪಡುವ ಈ ಮೀಸೆ ಮುಖವನ್ನು ಉಬ್ಬಿಸಿಕೊಡುತ್ತಿತ್ತು. ಕೆಲವು ಪ್ರಭಾವಿ ವೇಷಧಾರಿಗಳು ತಮ್ಮ ಸ್ವಂತ ಮೀಸೆಯ ಇಕ್ಕೆಲಗಳಲ್ಲಿ ವುಲ್ಲನ್‌ಗೊಂಡೆ ಅಂಟಿಸಿ ಹೊಸದೇಖಿ ಕೊಟ್ಟರು. ಇದು

ನಾಟಕದ ಹೋಲಿಕೆ ಕೊಟ್ಟಿತು. ಆನಂತರ ಅದೇ ಬಾಗಿದ ಆಕೃತಿಯ ಕ್ರೇಪ್‌ಹ್ಯಾರ್ ಅಂಟು ಮೀಸೆಗಳು, ಅದೇ ಆಕೃತಿಯ ಕಟ್ಟು ಮೀಸೆಗಳು ಬಂದವು.

ಬ್ರಹ್ಮಾವರ ಕಡೆಯ ಬಡಗುತಿಟ್ಟಿನ ಯಕ್ಷಗಾನದಲ್ಲಿ ಮುಖವರ್ಣಿಕೆ, ಮುದ್ರೆಗಳಿಗೆ ಸಂವಾದಿಯಾಗಿ ನೂಲಿನ ಕಟ್ಟು ಮೀಸೆಯನ್ನೇ ಕಟ್ಟುವುದು ವಾಡಿಕೆಯಾಗಿದೆ. ಉತ್ತರ ಕನ್ನಡದ ಹೆಚ್ಚಿನ ಯಕ್ಷಗಾನ ಕಲಾವಿದರು ನೂಲಿನ ಕಟ್ಟುಮೀಸೆಯನ್ನು ಕಟ್ಟುವುದೇ ಇಲ್ಲ. ನೂಲಿನ ಕಟ್ಟುಮೀಸೆಯೇ ಶೃಂಗಾರ ಎಂಬುದನ್ನು ಡಾ.ಶಿವರಾಮ ಕಾರಂತರು ಒತ್ತಿ ಹೇಳಿದ್ದಾರೆ.

೭. ವೇಷ ಭೂಷಣ ಶೃಂಗಾರಗಳು : ಯಕ್ಷಗಾನದಲ್ಲಿ ಕಾಣುವ ಆಭರಣಗಳು ಹಿಂದಿನ ಕಾಲ ದಲ್ಲಿ ಮಹಿಳೆಯರು ಧರಿಸುತ್ತಿದ್ದ ಆಭರಣಗಳ ಸ್ಫೂರ್ತಿಯಿಂದಲೇ ಕೃತಕವಾಗಿ ರಚನೆ ಯಾದವುಗಳು. ಕೈಕಟ್ಟು, ತೋಳಬಂದಿ, ಮುಂದಲೆ, ಕಂಠೀಹಾರ (ಹತ್ತಗಟ್ಟು), ಕಾಂಚೀ ದಾಮ, ವಡ್ಯಾಣ (ಡಾಬು), ಕೇದಗೆ, ಮುಡಿಹೂವು, ಹೊನ್ನಾಲೆ ಮತ್ತು ಸಂಪಿಗೆಮಾಲೆ ಇವೆಲ್ಲಾ ಹೆಂಗಸರ ಆಭರಣಗಳು. ಇವುಗಳ ರಚನೆಗಾಗಿ ಹಗುರವಾದ ಮರಗಳನ್ನೂ, ಸೋನೇರಿ ಕಾಗದಗಳನ್ನೂ, ಕನ್ನಡಿ ಹರಳುಗಳನ್ನೂ ಬಳಸುತ್ತಾರೆ. ಮೂಲ ಆಭರಣಗಳ ಹಿಗ್ಗಿದ ರೂಪಗಳನ್ನು ರಚಿಸುತ್ತಾರೆ.

ಯಕ್ಷಗಾನದ ಸಿದ್ಧಕಿರೀಟಗಳನ್ನು ಹಾಲು ಬರುವ ಜಾತಿಯ ಕೆಲವು ಮರಗಳಿಂದಲೂ ಶ್ರೀಗಂಧದ ಮರದಿಂದಲೂ ತಯಾರಿಸುತ್ತಾರೆ. ಕಿರೀಟದ ಬಣ್ಣ ಚಿನ್ನದ ಬಣ್ಣ, ತುದಿಯಲ್ಲಿ ನವಿಲುಗರಿಯನ್ನು ಹೊಂದಿರುತ್ತದೆ. ಗಣಪತಿ ಕಿರೀಟದಂತೆ ಅಲ್ಪಸ್ವಲ್ಪ ಬದಲಾವಣೆ ಯೊಂದಿಗೆ ದೈತ್ಯವೇಷದ ಕಿರೀಟಗಳು ರಚನೆಯಾಗುತ್ತವೆ. ತೆಂಕುತಿಟ್ಟಿನ ಬಣ್ಣದ ಕಿರೀಟವು ಕಥಕ್ಕಳಿಯ ಕಿರೀಟದ ಪ್ರಭಾವ ಹೊಂದಿರುತ್ತದೆ.

ಸ್ತ್ರೀವೇಷದವರು ತಲೆಯ ಮುಂಭಾಗದಲ್ಲಿ ಕಟ್ಟಿಕೊಳ್ಳುವ ಆಭರಣಕ್ಕೆ ಮುಂದಲೆ ಎನ್ನು ವರು. ಕಿರೀಟ, ಪಗಡೆ, ಶಿಖೆ, ಶೃಂಗಾದಿ ವೇಷವೈವಿಧ್ಯಗಳಿಗೆ ಇದು ಅನಿವಾರ್ಯ ಆಭರಣವಾಗಿದೆ. ಇದನ್ನು ತಲೆಗೆ ಕಟ್ಟಿಕೊಂಡ ನಂತರವೇ ಉಳಿದ ಶಿರೋಭೂಷಣಗಳನ್ನು ಕಟ್ಟಿಕೊಳ್ಳುತ್ತಾರೆ.

ಕೇದಗೆಯಾಕಾರದ ಪೂಗಡೆ ಆಭರಣವನ್ನು ಕೇದಗೆ ಎನ್ನುತ್ತಾರೆ. ಪೂಗಡೆಯ ತುದಿಗೆ ಕಿರೀಟದ ಮಧ್ಯೆ ಕಮಲ ಹಾಗೂ ಬೆಂಡಿನ ದಂಡೆ ಕಟ್ಟುವ ಪದ್ಧತಿಯಿದೆ. ಮುಂದಲೆಯ ಮಧ್ಯದ ಬಳ್ಳಿಗೆ ಹೂವಿನ ದಂಡೆಯನ್ನು ಸೇರಿಸಿ ಅದರ ಮೇಲೆ ಮರದ ಆಭರಣ ಕಮಲವನ್ನು ಕಟ್ಟುತ್ತಾರೆ.

ಕಿವಿಯ ಮುಂಭಾಗದಲ್ಲಿ ಹೊಂದಿಸುವ ಆಭರಣಕ್ಕೆ ಕರ್ಣಪಾತ್ರ ಎನ್ನುತ್ತಾರೆ. ಹೆಣ್ಣು ಪಾತ್ರಗಳಿಗೆ ಈ ಆಭರಣವಿಲ್ಲ. ಹೆಣ್ಣು ಪಾತ್ರಗಳಿಗೆ ಹೊನ್ನಾಲೆ, ಮುಗಳು ಸರಪಳಿ, ಜುಮುಕಿ, ಕುಡುಕು ಇತ್ಯಾದಿ ಲೋಕ ಸಹಜವಾದ ಆಭರಣಗಳನ್ನು ಧರಿಸುತ್ತಾರೆ.

ಗಂಡು ಪಾತ್ರಗಳಲ್ಲಿ ಕುತ್ತಿಗೆಗೆ ಹೊಂದಿಸಿ ಕಟ್ಟುವ ಆಭರಣಕ್ಕೆ ಪತ್ತಗಟ್ಟು ಎನ್ನುತ್ತಾರೆ. ಇದನ್ನು ಕೊರಳಪಟ್ಟಿ, ಗುಂಡಡ್ಡಿಗೆ ಗೆಜ್ಜೆ ಎಂತಲೂ ಕರೆಯುತ್ತಾರೆ. ಹೆಣ್ಣು ವೇಷದಲ್ಲೂ ಇದನ್ನು ಬಳಸುತ್ತಾರೆ. ಮುತ್ತು, ಮರ ಹಾಗೂ ಹೊನ್ನೆಕಾಯಿಯಿಂದ ರಚಿಸಿದ ಸರಗಳನ್ನು ವೇಷಧಾರಿಗಳು ಬಳಸುತ್ತಾರೆ.

ಯಕ್ಷಗಾನದ ಪುರುಷ ವೇಷಗಳಲ್ಲಿ ಸಾಹಸದ ಸಂಕೇತವಾದ ಆಭರಣ 'ಭುಜಕೀರ್ತಿ' ಭುಜದ ಆಭರಣವಾಗಿದೆ. ಇದನ್ನು ಜುಮ್ಮನ ಮರದ ಮುಳ್ಳು ಅಥವಾ ಇತರ ಮರಗಳಿಂದ ತಯಾರಿಸುತ್ತಾರೆ. ಮುಳ್ಳಿನ ತುದಿಗೆ ಹರಳನ್ನು ಜೋಡಿಸಿ ಚಿನ್ನದ ಬಣ್ಣದ ಬೆಗಡೆ ಅಥವಾ ಬಿಳಿ ಬಣ್ಣದ ಸೋನೇರಿ ಕಾಗದವನ್ನು ಅಂಟಿಸುತ್ತಾರೆ. ಮುಳ್ಳನ್ನು ತ್ರಿಕೋನಾಕಾರದ ಕೆಂಪು ಬಣ್ಣದ ಬಟ್ಟೆಗೆ ಸೇರಿಸಿ ಹೊಲಿಯುತ್ತಾರೆ. ರಾಕ್ಷಸ ವೇಷದ ಭುಜಕೀರ್ತಿಯನ್ನು ಮರ ದಿಂದಲೇ ತಯಾರಿಸುತ್ತಾರೆ. ಇದಕ್ಕೆ ಮುಳ್ಳು ಸೇರಿಸುವುದಿಲ್ಲ. ಹರಳುಗಳನ್ನು ಜೋಡಿ ಸುತ್ತಾರೆ. ನಕ್ಷೆಗಳನ್ನು ಚಿತ್ರಿಸುತ್ತಾರೆ. ಇಂತಹ ಭುಜಕೀರ್ತಿಗೆ ಭುಜದಂಬೆ ಎನ್ನುತ್ತಾರೆ. ಹೆಣ್ಣು ರಾಕ್ಷಸವೇಷದ ಭುಜದಂಬೆ ಸ್ವಲ್ಪ ಚಿಕ್ಕ ಪ್ರಮಾಣದಲ್ಲಿರುತ್ತದೆ.

ಭುಜಕೀರ್ತಿಯ ಕೆಳಭಾಗದಲ್ಲಿ ಕಟ್ಟುವ ಆಭರಣಕ್ಕೆ ತೋಳಬಂದಿ ಎನ್ನುತ್ತಾರೆ. ಇದು ಹೆಂಗಸರ ಆಭರಣವಾದರೂ ಗಂಡುವೇಷಗಳೂ ಭುಜಕೀರ್ತಿಗೆ ತಾಗಿ ಕಟ್ಟಿಕೊಳ್ಳುತ್ತಾರೆ. ಕೈಯ ಮಣಿಗಂಟಿಗೆ ಹೊಂದಿಸಿ ಕಟ್ಟುವ ಆಭರಣಕ್ಕೆ ಕೈಕಟ್ಟು ಎನ್ನುತ್ತಾರೆ. ಮರದ ಪಟ್ಟಿಗಳಿಗೆ ಹವಳ ಮುಂತಾದ ಮಣಿಗಳನ್ನು ಸೇರಿಸಿ ನಿರ್ಮಿಸುತ್ತಾರೆ. ಹೆಣ್ಣು ಪಾತ್ರಗಳಿಗೂ ಈ ಆಭರಣ ವನ್ನು ಬಳಸುತ್ತಾರೆ.

ಕರಾವಳಿಯ ಯಕ್ಷಗಾನದ ಮೂರೂ ತಿಟ್ಟುಗಳಲ್ಲಿ ಬಳಸುವ ಸಮಗ್ರ ಆಭರಣವೆಂದರೆ ಎದೆ ಪದಕ. ಇದು ಗೋಲಾಕಾರದಲ್ಲಿರುತ್ತದೆ. ಚೌಕಹಾಳೆಯ ನಾಲ್ಕು ಮೂಲೆಗಳನ್ನು ಕತ್ತರಿಸಿ ಇದನ್ನು ನಿರ್ಮಿಸುತ್ತಾರೆ. ಇದರಲ್ಲಿ 'X' ಆಕಾರದ ಎದೆಪದಕಗಳ ಬಳಕೆ ಜಾಸ್ತಿ. ಉಳಿದಂತೆ ವಕ್ರ ತ್ರಿಕೋನಾಕೃತಿ, ಗೇರುಹಣ್ಣಿನ ಆಕೃತಿ, ಗೋಲಾಕೃತಿ, ಆಯತ ಆಕೃತಿಗಳ ಎದೆಪದಕಗಳು ಬಳಕೆಯಲ್ಲಿವೆ. ಬಡಗುತಿಟ್ಟಿನಲ್ಲಿ 'U' ಆಕೃತಿಯದು ಹೆಚ್ಚು ಬಳಕೆಯಲ್ಲಿದೆ. ಬಣ್ಣದ ವೇಷ ಗಳಿಗೆ ಉರುಟು ಎದೆಹಾರವಿದೆ. ಹಳೆಯವು ಮರದ ರಚನೆಗಳಾದರೆ ಈಗ ಮಣಿ, ಜರಿಗಳಿಂದಲೂ ತಯಾರಿಸುತ್ತಾರೆ.

ವೀರಗಾಸೆಯ ಮೇಲೆ ಹೊಂದಿಸಿ ಕಟ್ಟುವ ಆಭರಣಕ್ಕೆ ಸೊಂಟಪಟ್ಟಿ ಎನ್ನುತ್ತಾರೆ. ಇದನ್ನು ಸ್ತ್ರೀ ವೇಷದವರೂ ಧರಿಸುತ್ತಾರೆ. ಬೇರೆ ಬೇರೆ ಆಕಾರದ ಸೊಂಟಪಟ್ಟಿಯನ್ನು ಸ್ತ್ರೀ ಪಾತ್ರಕ್ಕೆ ಬಳಸುತ್ತಾರೆ. ಆದರೆ ಪುರುಷ ಪಾತ್ರಗಳಿಗೆ ಕನ್ನಡಿ ವಡ್ಯಾಣದ ಹಾಗೆ ಇರುವ ಮರದ ಆಭರಣವನ್ನು (ಡಾಬು) ಬಳಸುತ್ತಾರೆ. ಸೊಂಟಪಟ್ಟಿಯ ಕೆಳಕ್ಕೆ ಕಾಂಚೀಧಾಮ ಎಂಬ ಆಭರಣ ವನ್ನು ಕಟ್ಟಿಕೊಳ್ಳುತ್ತಾರೆ. ಇದು ಹೆಂಗಸರು ಬಳಸುವ ಆಭರಣವಾದರೂ ಯಕ್ಷಗಾನ

ಮತ್ತು ಅದರ ಸೋದರ ಕಲೆಗಳಲ್ಲಿ ಇದನ್ನು ಬಳಸುತ್ತಾರೆ. ಮೇಲೆ ಅಗಲ ಕೆಳಕ್ಕೆ ಬಂದ ಹಾಗೆ ಕಿರಿದಾಗುತ್ತಾ ಶೋಭಿಸುವ ಈ ಆಭರಣ ತುಂಬಾ ಆಕರ್ಷಕವಾದದ್ದು. ಇದರ ಅಡಿ ಭಾಗದಲ್ಲಿ ಕೆಂಪು, ಕಪ್ಪು ಬಟ್ಟೆಯನ್ನು ಜೋಡಿಸುತ್ತಾರೆ. ತುದಿಯಲ್ಲಿ ಬಣ್ಣದ ಗೊಂಡೆಗಳಿರುತ್ತದೆ. ಇಕ್ಕೆಲಗಳಲ್ಲಿ ಮಾರುಮಾಲೆ ಅಥವಾ ಸಂಪಿಗೆ ಮಾಲೆಗಳೆಂಬ ಹೊಂದಿಕೆಯಿರುತ್ತದೆ.

ಯಕ್ಷಗಾನ ವೇಷಧಾರಿಗಳು ಎಡಗಾಲಿಗೆ ೧೦೧ ಗೆಜ್ಜೆಯಿಂದ ಮಾಡಿದ ಸರವನ್ನೂ ಬಲ ಗಾಲಿಗೆ ೧೦೮ ಗೆಜ್ಜೆಗಳುಳ್ಳ ಸರವನ್ನು ಕಟ್ಟಿಕೊಳ್ಳುತ್ತಾರೆ. ಇದರಲ್ಲಿ ಬಳಸುವ ಬೆಳ್ಳಿ ಮಿಶ್ರಿತ ಕಂಚಿನ ಗೆಜ್ಜೆಗಳು ನಾದಯುಕ್ತವಾಗಿರುತ್ತವೆ. ರಾಕ್ಷಸವೇಷಗಳಲ್ಲಿ ಗೆಜ್ಜೆಯ ಮೇಲ್ಭಾಗದಲ್ಲಿ ಕಾಲು ಕಡಗವನ್ನು ಧರಿಸಿಕೊಳ್ಳುತ್ತಾರೆ. ೧೮ ಮೊಳದ ಧೋತ್ರದಿಂದ ಸೊಂಟಕ್ಕೆ ವೀರ ಕಚ್ಚೆಯನ್ನು ಕಟ್ಟಿಕೊಳ್ಳುತ್ತಾರೆ. ಸಾಮಾನ್ಯವಾಗಿ ಗಂಡುವೇಷ ತೊಡುವವರು ಮುಖಕ್ಕೆ ಬಣ್ಣ ಬಳಿಯುವ ಮೊದಲೇ ಒಂದು ಕಪ್ಪು ಹಿಜಾರವನ್ನು ತೊಟ್ಟು ಆ ಕೆಲಸಕ್ಕೆ ಕುಳಿತುಕೊಳ್ಳುತ್ತಾರೆ.

ಮುಖವರ್ಣಿಕೆಯ ನಂತರ ಮುಂಡಾಸನ್ನೋ, ಕಿರೀಟವನ್ನೋ ತೊಡುತ್ತಾರೆ. ಆಮೇಲೆ ಎದ್ದು ನಿಂತು ಹಿಜಾರದ ಮೇಲೆ ಒಂದು ಧೋತ್ರವನ್ನು ವೀರಕಸೆಯಂತೆ ತೊಡುತ್ತಾರೆ. ಇದು ಚೌಕುಳಿ ಬಟ್ಟೆಯಾಗಿದ್ದು ಒಂಬತ್ತು ಗಜ ಉದ್ದವಿರುತ್ತದೆ. ಇದನ್ನು ಇಚ್ಚಿಡಿಸಿ ತೊಡುತ್ತಾರೆ. ಇದರ ಚೌಕುಳಿಗಳು ಕೆಂಪು, ಕಿತ್ತಳೆ, ಹಳದಿ, ಕಂದು, ಕೆಂಚು ಬಣ್ಣದ್ದಾಗಿರುತ್ತದೆ. ವೀರವೇಷಗಳಲ್ಲಿ ಬಟ್ಟೆಯ ಚೌಕುಳಿ ಮುಕ್ಕಾಲು ಇಲ್ಲವೇ ಒಂದು ಇಂಚು ಗಾತ್ರವಾಗಿದ್ದರೆ, ರಾಕ್ಷಸ ವೇಷದ ಚೌಕುಳಿಗಳು ಎರಡು ಇಂಚು ಗಾತ್ರವಾಗಿರುತ್ತವೆ. ವೇಷಧಾರಿ ತನ್ನ ನಡುವಿನ ಕೆಳಕ್ಕೆ ಇಂತಹ ಅರಿವೆಯಿಂದ ವೀರಕಸೆ ತೊಡುತ್ತಾನೆ. ವೀರಕಸೆಯ ಸೆರಗುಗಳು ಮೊಣಕಾಲಿನ ಎರಡೂ ಮಗ್ಗುಲಲ್ಲೂ, ತ್ರಿಕೋನ ಆಕೃತಿಯಲ್ಲಿ ಹೊರಗಡೆ ಹರವಿ ನಿಲ್ಲುವುದರಿಂದ ವೇಷಧಾರಿಯ ಕಾಲುಗಳ ಆಕೃತಿಗೂ ಹೆಚ್ಚಿನ ಪುಷ್ಟಿ ದೊರೆಯುತ್ತದೆ. ವೇಷಧಾರಿಗಳು ಮೈಗೆ ಸಡಿಲವಾದ ದೊಗಲೆ ತೊಡುತ್ತಾರೆ. ಈ ದೊಗಲೆ ಹಸಿರು ಇಲ್ಲವೆ ಕೆಂಪು ಬಣ್ಣದ ಹತ್ತಿ ಬಟ್ಟೆಯಿಂದ ಹೊಲಿದ ಕಸೆ ಕಟ್ಟುವ ಅಂಗಿ ಆಗಿರುತ್ತದೆ.

ಇತ್ತೀಚೆಗೆ ಈ ಅರಿವೆಗಳ ಬದಲು ವೆಲ್‌ವೆಟ್ ಅರಿವೆಯ ಅಂಗಿಗಳನ್ನು ತೊಡುವುದುಂಟು. ಈ ಅಂಗಿಯ ಮೇಲೆ ಸೊಂಪಾಗಿ ಕಾಣಿಸುವ ಆಭರಣ ಪಟ್ಟಿಗಳನ್ನು ತೊಡುತ್ತಾರೆ. ತರುಣ ಪಾತ್ರಗಳು ಧೋತ್ರವನ್ನು ಉಡುವ ಕ್ರಮವೇ ಬೇರೆ. ಅವರು ಚೌಕುಳಿ ಬಟ್ಟೆಯ ಮೇಲಣ ಅಂಚನ್ನು ನಿರಿಗೆ ನಿರಿಗೆ ಮಾಡಿ ಪರಿಕಾರ ಅಥವಾ ಕಿರುಗಣೆಯ ರೀತಿಯಲ್ಲಿ ತೊಡುತ್ತಾರೆ. ಹೀಗೆ ತೊಟ್ಟಾಗ ಮುಂಭಾಗದಲ್ಲಿ ಹೆಚ್ಚು ನಿರಿಗೆಗಳೂ, ಹಿಂಭಾಗದಲ್ಲಿ ಕಡಿಮೆ ನಿರಿಗೆಗಳು ಕಾಣುತ್ತವೆ. ಇದು ನಮ್ಮಲ್ಲಿ ಬ್ರಹ್ಮಚಾರಿಗಳು ಬಟ್ಟೆ ಉಡುವ ಮಾದರಿಯನ್ನು ನೆನಪಿಸುತ್ತದೆ. ಗಂಡುವೇಷಗಳು ತೊಡುವ ದೊಗಲೆಗಳು ಇಡಿ ತೋಳಿನವಾದರೆ,

ತರುಣ ವೇಷಗಳು ಅರೆತೋಳಿನ ಅಂಗಿಗಳನ್ನು ತೊಡುವುದುಂಟು. ಅಥವಾ ಅಂಗಿಯನ್ನು ತೊಡದೆ ಬರಿಯ ಆಭರಣ, ಶಾಲುಗಳನ್ನಷ್ಟೇ ಧರಿಸುವ ಪಾತ್ರಗಳೂ ಇವೆ. ಎಲ್ಲಾ ಬಗೆಯ ವೀರ ಪಾತ್ರಗಳು, ದಾನವ ಪಾತ್ರಗಳು ತಾವು ಧರಿಸುವ ಧೋತ್ರದ ಮೇಲುಗಡೆ ನಡುವಿಗೆ ಒಂದು ಅಲಂಕಾರಿಕ ವಡ್ಯಾಣವನ್ನೂ, ಅದರಿಂದ ಕೆಳಕ್ಕೆ ತೂಗಾಡುವ ಜಲ್ಲರಿಯಂತಹ ಕಸೆಕಟ್ಟನ್ನೂ ಧರಿಸುತ್ತಾರೆ. ಇವೆಲ್ಲವೂ ಮರದ ತುಣುಕು ಮತ್ತು ಗಾಜಿನ ಚೂರುಗಳಿಂದ ಮಾಡಿದ ಹೊಂಬಣ್ಣದ ರಚನೆಗಳಾಗಿರುತ್ತವೆ.

ಇವು ಧೋತ್ರದ ಎದುರುಗಡೆ ಜೋತುಕೊಂಡಿರುತ್ತವೆ. ಅವುಗಳ ಕುಡಿಯಲ್ಲಿ ಜೋತುಕೊಂಡಿರುವ ಕಪ್ಪು ಗೊಂಡೆಗಳಿರುತ್ತವೆ. ಆಭರಣದ ಗಾಜು, ಚಿನ್ನದ ಹೊಳಪುಗಳಿಗೆ ಈ ಕಪ್ಪುಗೊಂಡೆಗಳು ಪುಷ್ಟಿಕೊಡುತ್ತವೆ. ಇಂಥ ಆಭರಣಗಳು ವೇಷಧಾರಿಗಳು ಕುಣಿಯುವಾಗ, ಗರಗರನೆ ತಿರುಗುವಾಗ ಬಲು ಮೋಹಕವಾದ ಬೆಡಗನ್ನು ಕಲ್ಪಿಸುತ್ತವೆ.

ಯಕ್ಷಗಾನದಲ್ಲಿ ವಿಭಿನ್ನ ವೇಷಗಳಿಗೆ ಬಗೆಬಗೆಯ ಶಿರೋಭೂಷಣಗಳಿರುತ್ತದೆ. ರಾಜ, ಯುವರಾಜ, ಮಂತ್ರಿ, ರಾಕ್ಷಸ, ಗಂಧರ್ವ ಇವೆಲ್ಲಾ ಬೇರೆ ಬೇರೆ ಶಿರೋಭೂಷಣಗಳನ್ನು ಹೊಂದಿವೆ. ಧರ್ಮರಾಯ, ಕೌರವರಂತಹ ದೊರೆಗಳು ಕಿರೀಟ(ಮುಕುಟ)ವನ್ನು ಧರಿಸುತ್ತಾರೆ. ಗಂಧರ್ವನಿಗೆ ಕೆಂಪು ಮುಂಡಾಸಿನ ಶಿರೋಭೂಷಣವಿದ್ದರೆ, ಕಿರಾತನಿಗೆ ಕೋರೆ ಮುಂಡಾಸವಿದ್ದರೆ, ಕರ್ಣನಿಗೆ ಕಪ್ಪು ಮುಂಡಾಸವಿರುತ್ತದೆ. ಅರ್ಜುನ, ಬಭ್ರುವಾಹನ, ಸುಧನ್ವರಂತಹ ಪರಾಕ್ರಮಿ ವೇಷಗಳಿಗೆ ಕೇದಿಗೆ ಮುಂದಲೆ (ಕೇದಿಗೆ ಹೂವನ್ನು ಹೋಲುವ ಚಿಕ್ಕ ಮುಂಡಾಸು) ಇರುತ್ತದೆ. ಇದನ್ನು ವೇಷಕಟ್ಟಿಕೊಳ್ಳವಾಗಲೇ ತಯಾರಿಸಿಕೊಳ್ಳಲಾಗುತ್ತದೆ.

ಯಕ್ಷಗಾನದ ಕಿರೀಟದಲ್ಲಿ ಮುಖ್ಯವಾಗಿ: ರಾಜ ವೇಷದ ಕಿರೀಟ (ಗಣಪತಿ ಕಿರೀಟ), ಹನುಮಂತನ ಕಿರೀಟ, ರಕ್ಕಸ ಕಿರೀಟ ಮತ್ತು ರಕ್ಕಸಿಯರ ಕಿರೀಟಗಳೆಂಬ ಬಗೆಯಿದೆ. ತೆಂಕಿನ ಕಿರೀಟಗಳಲ್ಲಿ ಕೇದಗೆಯ ಬದಲು ಕೆನ್ನೆಪ್ಪೂ ಎಂಬುದನ್ನು ಕಟ್ಟಿಕೊಳ್ಳುತ್ತಾರೆ. ರಾಜ ಕಿರೀಟ ವೇಷಗಳ ಮುಖವರ್ಣಿಕೆ ಗೌರವರ್ಣದೊಂದಿಗೆ ಆಕರ್ಷಕವಾಗಿರುತ್ತದೆ. ಹಣೆಗೆ ತಿಲಕ, ಹುಬ್ಬು ಕಣ್ಣುಗಳ ಕಾಡಿಗೆಯ ಶೋಭೆ, ಕಾಡಿಗೆಯ ಗೆರೆಗಳಿಂದ ರೂಪಿಸಿದ ಕೆಳಭಾಗದ ಗಡ್ಡ, ಕಟ್ಟುವ ಮೀಸೆಗಳು ಶೋಭಾಯಮಾನವಾಗಿರುತ್ತವೆ. ತಿಲಕ-ನಾಮಗಳು ಕಪ್ಪು, ಕೆಂಪು, ಹಳದಿ, ಬಿಳಿಗೆರೆ ಗಳಿಂದ ಹಾಗೂ ಚುಟ್ಟಿಗಳಿಂದ ಅಲಂಕೃತಗೊಳ್ಳುತ್ತದೆ.

೮. **ಪೊಗಡೆ ವೇಷಗಳು** : ಒಂದು ಬಗೆಯ ಮರ ಮತ್ತು ಅದರ ಹೂವಿನ ದೆಸೆಯಿಂದಾಗಿ ಈ ಹೆಸರು ಬಂದಿದೆ. ಒಣಹುಲ್ಲನ್ನು ಉದ್ದವಾಗಿನೆಂದು ಪೊಗಡೆ ಅಟ್ಟೆಗೆ ಬಳಸುತ್ತಾರೆ. ಸಾಮಾನ್ಯವಾಗಿ ಬುಡಕ್ಕೆ ಬಳಸುವ ಅಟ್ಟೆ ದಪ್ಪವಾಗಿರುತ್ತದೆ. ತುದಿಯ ಅಟ್ಟೆಗಳು ಮಧ್ಯೆ ತೆಳ್ಳಗಿದ್ದು ಬುಡದಲ್ಲಿ ಗಾತ್ರವಾಗಿರುತ್ತದೆ. ವೇಷಕಟ್ಟುವ ಕಲಾವಿದರು ತಲೆಯ ಸುಳಿಭಾಗದಲ್ಲಿ ಬಟ್ಟೆಯ ಜುಟ್ಟು ಕಟ್ಟಿಕೊಂಡು, ಅದರ ಮುಂಭಾಗದಲ್ಲಿ ಮುಂದಲೆಯನ್ನು ಕಟ್ಟಿ

ಕೊಂಡು, ಅಟ್ಟೆಗಳನ್ನು ಒಂದೊಂದಾಗಿ ಕಟ್ಟಿ ಬಳ್ಳಿಯಿಂದ ಬಿಗಿಗೊಳಿಸುತ್ತಾರೆ. ಕಪ್ಪು ಅಥವಾ ಕೆಂಪು ಬಣ್ಣದ ಬಟ್ಟೆಯನ್ನು ಅದಕ್ಕೆ ಹೊದೆಸಿ ಹಿಂಭಾಗದ ಜುಟ್ಟಕ್ಕೆ ನವಿಲುಗರಿ ಕಟ್ಟಿ ಕೊಳ್ಳುತ್ತಾರೆ. ಇದಕ್ಕೆ ಸೀರೆಯ ಮಧ್ಯಭಾಗದ ಒಂದು ತುದಿಯನ್ನು ಕಟ್ಟಿ ಎರಡು ಪಾಲನ್ನು ಎರಡು ಬದಿಗೆ ನೆರಿಗೆ ಮಾಡಿ ಸೊಂಟಕ್ಕೆ ಸಿಕ್ಕಿಸುತ್ತಾರೆ. ಇದನ್ನು `ಪಾಗು` ಎನ್ನುತ್ತಾರೆ. ಇದು ಹಿಂಬದಿಯನ್ನು ಮುಚ್ಚುತ್ತದೆ. ಆನಂತರ ಜರಿಗೋಟನ್ನು ಈ ಜುಟ್ಟಕ್ಕೆ ಆಧಾರವಾಗಿ ಕಟ್ಟಿ ಸುತ್ತಿ ಪೂಗಡೆಯನ್ನು ಕಟ್ಟಿಕೊಂಡು ಪೂಗಡೆಯ ಮಧ್ಯದ ಬಳ್ಳಿಗೆ ಬೆಂಡಿನ ದಂಡೆಯನ್ನು ರಿಂಗ್ ಆಕಾರದಲ್ಲಿ ಸಿಕ್ಕಿಸಿ ಪೂಗಡೆಯ ತುದಿಗೆ ಬರುವಂತೆ ಹೊಂದಿಸಿ ಹಿಂಬದಿಯ ಜುಟ್ಟಕ್ಕೆ ಕಟ್ಟಿಕೊಳ್ಳುತ್ತಾರೆ. ಕೇದಗೆ ಪೂಗಡೆಗೆ ಅನಿವಾರ್ಯವಾಗಿದೆ.

ತಾಮಸ ಗುಣದ ಪಾತ್ರಗಳಿಗೆ ಸ್ವಲ್ಪ ದೊಡ್ಡ ಮುಂಡಾಸು ಕಟ್ಟಿಕೊಳ್ಳುತ್ತಾರೆ. ರಂಗಸ್ಥಳ ದಲ್ಲಿ 'ಲಾಲಿ' ಹೊಡೆಯುವುದು ಪೂಗಡೆ ಪಾತ್ರಗಳಿಗೆ ಮಾತ್ರ ಶೋಭಿಸುತ್ತದೆ. ಪೂಗಡೆಯ ಗಾತ್ರ ವಿಪರೀತ ದೊಡ್ಡದಾದರೆ ನೃತ್ಯ ಅಭಿನಯಗಳು ಕ್ಷೀಣಿಸುತ್ತದೆ. ೫ ಅಟ್ಟೆ, ೭ ಅಟ್ಟೆ, ೯ ಅಟ್ಟೆಗಳ ಪೂಗಡೆ ಕಟ್ಟುತ್ತಾರೆ. ಪೂಗಡೆ ವೇಷಧಾರಿ ಮುಂಡಾಸು ಸಮೇತ ಎದುರು ಬಗ್ಗಿದಾಗ ಆತನ ಕೈಯ ಅಳತೆಯಲ್ಲಿ ಕೈಯ ತುದಿಗೆ ಪೂಗಡೆಯ ತುರಾಯಿ ಸಿಗಬೇಕು ಎನ್ನುವುದು ಒಂದು ನಿಯಮವಿದೆ. ಅದಕ್ಕಿಂತ ದೊಡ್ಡದಿರಬಾರದು ಎಂದು ಹಾರಾಡಿ ಮಹಾಬಲ ಗಾಣಿಗರು ಹೇಳಿದ್ದಾರೆ.

೯. ಬಣ್ಣದ ವೇಷಗಳು : ಯಕ್ಷಗಾನದಲ್ಲಿ ರಕ್ಕಸವೇಷಗಳ ಮುಖವರ್ಣಿಕೆಯನ್ನು ಬಣ್ಣದ ವೇಷವೆನ್ನುತ್ತಾರೆ. ರಕ್ಕಸ ಸ್ವಭಾವದ ಕಂಸ, ಜರಾಸಂಧ, ಅನುಸಾಲ್ವ ಮೊದಲಾದವರೂ ಬಣ್ಣದ ವೇಷದ ಸಾಲಿಗೆ ಬರುತ್ತಾರೆ. ಅದೇ ರೀತಿ ಕಪಿರಾಜ ವಾಲಿ, ನರಸಿಂಹ, ವರಾಹ, ವೀರಭದ್ರರನ್ನೂ ಬಣ್ಣದ ವೇಷದಲ್ಲಿ ಚಿತ್ರಿಸುತ್ತಾರೆ. ರಾಕ್ಷಸ ಸ್ತ್ರೀಯರ ವೇಷವನ್ನು 'ಹೆಣ್ಣು ಬಣ್ಣ' ಎನ್ನುತ್ತಾರೆ.

ಬಣ್ಣದ ವೇಷಗಳ ತಯಾರಿಗೆ ನಾಲ್ಕರಿಂದ ಐದು ಗಂಟೆಗಳ ಅವಧಿ ಬೇಕಾಗುತ್ತದೆ. ರಂಗದ ಮೇಲೆ ಅವುಗಳ ಪಾತ್ರ ಹೆಚ್ಚೆಂದರೆ ಅರ್ಧಗಂಟೆಗಳು ಆದರೂ ಅವು ಬೀರುವ ಭೀಕರಾದ್ಭುತ ರೋಮಾಂಚಕಾರಿ ಸನ್ನಿವೇಶದ ಪರಿಣಾಮ ಅದ್ಭುತವಾದುದು. ರಾಕ್ಷಸ ವೇಷ ಗಳಿಗೆ ತಳಪಾಯದ ಬಣ್ಣವಿಲ್ಲ. ಸಾಮಾನ್ಯವಾಗಿ ಹಳದಿ ಬಣ್ಣದಿಂದ ತಳದ ರೂಪರೇಖೆ ಗಳನ್ನು ಬರೆದುಕೊಳ್ಳುತ್ತಾರೆ. ಹಳದಿ ಗೆರೆಗಳ ನಂತರ ಕಪ್ಪು ಬಣ್ಣವನ್ನು ತುಂಬಿಕೊಳ್ಳುತ್ತಾರೆ. ಆನಂತರ ಬಿಳಿಯ ಬಣ್ಣವನ್ನು ಮೂಲರೇಖೆಗೆ ದಟ್ಟವಾಗಿ ಹಚ್ಚುತ್ತಾರೆ.

ಅಗತ್ಯಕಂಡರೆ ಕೆಂಪು ಬಿಳಿಗೂ ಹೀಗೆ ಹಚ್ಚುತ್ತಾರೆ. ರಾಳದ ಪುಡಿಯೊಂದಿಗೆ ಬೆರೆಸಿಕೊಂಡ ಕಾರಣ ಬಣ್ಣಗಳು ಸ್ವಲ್ಪವೂ ಹರಡುವುದಿಲ್ಲ. ಆನಂತರ ಹಳದಿಗೆರೆಗೆ ಒತ್ತಿಕೊಂಡು ಚುಟ್ಟಿ ಯನ್ನು ಇಡುತ್ತಾ ಹೋಗುತ್ತಾರೆ. ಅಕ್ಕಿ ಹಿಟ್ಟು ಹಾಗೂ ಸುಣ್ಣದ ಮಿಶ್ರಣದಿಂದ ಚುಟ್ಟಿಯನ್ನು

ತಯಾರಿಸುತ್ತಾರೆ. ಉತ್ತರ ಕನ್ನಡದಲ್ಲಿ ಬರೆ ಬಣ್ಣದಿಂದಲೇ ಚುಟ್ಟಿಯನ್ನು ರೂಪಿಸುವುದಿದೆ. ಕೆಲವೊಮ್ಮೆ ಬೆಂಡಿನ ಮುಳ್ಳುಗಳನ್ನು ರಾಳ ಮತ್ತು ಸ್ಪಿರಿಟ್‌ನ ಅಂಟಿನೊಂದಿಗೆ ಚಿಟ್ಟೆಯಾಗಿ ಅಂಟಿಸಿಕೊಳ್ಳುತ್ತಾರೆ. ಕಾಡು ರಕ್ಕಸರ ಪಾತ್ರ ಬಕಾಸುರ, ಹಿಡಿಂಬ, ಕಿಮ್ಮೀರ ವಹಿಸುವ ಕಲಾವಿದರು ಮುಖವರ್ಣಿಕೆಯಲ್ಲಿ ಹುಲಿ, ಚಿರತೆ, ಸಿಂಹಗಳ ಬಣ್ಣಗಳ ಮಾದರಿಯನ್ನು ಅನುಸರಿಸುತ್ತಾರೆ. ಬಣ್ಣದ ಬರವಣಿಗೆಯಲ್ಲಿ ಮುಖವನ್ನು ದೊಡ್ಡದು ಮಾಡುವುದಕ್ಕಾಗಿ ಹಣೆಗೆ ಕೆಂಪು ಅಲ್ವಾನ್ ವಸ್ತ್ರವನ್ನು ಕಟ್ಟಿಕೊಳ್ಳುತ್ತಾರೆ.

ಹಾಗೆಯೇ ಮುಖದ ವಿಸ್ತಾರಕ್ಕಾಗಿ ಕುತ್ತಿಗೆಯ ಅಡಿಯಿಂದ ವಸ್ತ್ರದ ಪಟ್ಟಿ ಯನ್ನು ಕಟ್ಟಿಕೊಳ್ಳುವುದಿದೆ. ಬಣ್ಣದಿಂದಲೇ ಹಲ್ಲನ್ನೂ ಚಿತ್ರಿಸುತ್ತಾರೆ. ಅಥವಾ ಮೀಸೆಯಡಿಗೆ ಶಂಖ ದಿಂದ ಮಾಡಿದ ಹಲ್ಲನ್ನು ಜೋಡಿಸಿ ಕೊಳ್ಳುತ್ತಾರೆ. ಮುಖ ಬಣ್ಣ ಮುಚ್ಚಿ ಹೋಗದೆ ಅದರ ಸೌಂದರ್ಯವನ್ನು ಹೆಚ್ಚಿಸಲು ಬೇಕಾಗುವಷ್ಟು ದೊಡ್ಡ ಹತ್ತಿಯ ಉಂಡೆಯನ್ನು ಮೂಗಿನ ಮೇಲೆ ಅಂಟಿಸಿಕೊಳ್ಳುತ್ತಾರೆ. ಕಿವಿಯ ಮೇಲ್ಭಾಗದ ಸಂದಿಯಲ್ಲಿ ಎರಡೂ ಕಡೆ ಹತ್ತಿಯ ಚೆಂಡನ್ನು ಇಟ್ಟುಕೊಳ್ಳುತ್ತಾರೆ. ಅಗತ್ಯ ಕಂಡರೆ ಅದಕ್ಕೆ ಬಣ್ಣವನ್ನು ಸವರುತ್ತಾರೆ.

ಮುಂದಲೆಯ ಮಧ್ಯಭಾಗದ ಹಣೆಗೆ ಇನ್ನೊಂದು ಹತ್ತಿಯ ಚೆಂಡನ್ನು ಅಂಟಿಸುತ್ತಾರೆ. ಕಡಲೆ ಕಾಳಿನ ಗಾತ್ರದ ಒಂದು ಹತ್ತಿಯ ಗುಳಿಗೆಯನ್ನು ಹುಬ್ಬುಗಳ ಮಧ್ಯೆ ಅಂಟಿಸುತ್ತಾರೆ. ಇದಾದ ನಂತರ ಉಡುಗೆ ಉಟ್ಟು, ಗೆಜ್ಜೆ ತೊಟ್ಟು ಆಭರಣಗಳನ್ನೆಲ್ಲಾ ಇಟ್ಟುಕೊಳ್ಳುತ್ತಾರೆ. ಆ ಬಳಿಕ ಕಿರೀಟವನ್ನೂ ಕೂದಲನ್ನೂ ಕಟ್ಟಿಕೊಳ್ಳುತ್ತಾರೆ.

ಹೆಣ್ಣು ಬಣ್ಣದಲ್ಲಿ ಗಂಡುಬಣ್ಣದಷ್ಟು ವೈವಿಧ್ಯಗಳಿಲ್ಲ. ಮುಖದ ಮೇಲೆ ಚಿಟ್ಟೆ ಬರೆದು ಕೊಳ್ಳುವ ಕ್ರಮದಲ್ಲೂ ವ್ಯತ್ಯಾಸವಿದೆ. ರಾಕ್ಷಸ ಪಾತ್ರದ ಚಿಟ್ಟೆಯ ಸಾಲು ದೊಡ್ಡಮುಳ್ಳಿನ ಗಾತ್ರದಲ್ಲಿದ್ದರೆ, ಹನುಮ, ವಾಲಿ, ಜಾಂಬವಾದಿ ಪಶುಪಾತ್ರಗಳಿಗೂ ಸಣ್ಣ ಚಿಟ್ಟೆಯ ಸಾಲು ಬರೆದುಕೊಳ್ಳುತ್ತಾರೆ. ಕಣ್ಣನ್ನು ಸುತ್ತುವರಿದ ಒಂದೆರಡು ಚಿಟ್ಟೆಯ ಸಾಲುಗಳು ಆಕರ್ಷಣೀಯ ವಾಗಿರುತ್ತವೆ. ನಾರಸಿಂಹ, ಚಂಡಿಗಳಂತಹ ಪಾತ್ರದಲ್ಲಿ ಹೆಚ್ಚಿನ ಉಗ್ರತೆ ತೋರಿಸಲು ದೊಡ್ಡ ಚಿಟ್ಟೆಗಳ ಸಾಲನ್ನು ಬರೆಯುತ್ತಾರೆ. ಮುಖ್ಯವಾಗಿ ಇಂತಹ ಪಾತ್ರಗಳಿಗೆ ಕಣ್ಣಿನ ಮೇಲೆ ಕಪ್ಪುಬರೆದು ಕೋರೆ ಚೌಕುಳಿಯಂತೆಯೋ, ವೃತ್ತದಂತೆಯೋ ಆಕೃತಿ ಬರೆದು ಅದರ ಸುತ್ತು ಹೊಡೆದು ಕಾಣಿಸುವಂತೆ ಚಿಟ್ಟೆಗಳ ಸಾಲನ್ನು ಬರೆಯುತ್ತಾರೆ.

ರತಿಕಲ್ಯಾಣದಲ್ಲಿ ಬರುವ ಚಂಡಿಯ ಪಾತ್ರಕ್ಕೆ ಕೃತಕ ಕಣ್ಣುಗಳನ್ನು ಇಡುತ್ತಾರೆ. ವಾಸ್ತವಿಕ ಕಣ್ಣಿನ ಮೇಲೆ ಅರ್ಧಗೋಲಾಕಾರದ ತೂತುಳ್ಳ ಎರಡು ಗುಳ್ಳೆಗಳನ್ನು ತೊಡಿಸುತ್ತಾರೆ. ಇದು ಒಂದು ರೀತಿಯಲ್ಲಿ ಗೂಜು ಕಣ್ಣಿನಂತೆ ಕಾಣುತ್ತದೆ. ರಂಗಸ್ಥಳದಲ್ಲಿ ಮಾತನಾಡುವ ಅವಶ್ಯಕತೆ ಇಲ್ಲದೆ ಹೋದರೆ ನಾರಸಿಂಹ, ಚಂಡಿಯರಂತಹ ಉಗ್ರಪಾತ್ರಗಳಲ್ಲಿ ಬಾಯಿಗೆ ತೂಗುವ ಇಳಿನಾಲಿಗೆಯನ್ನು ಇರಿಸಿಕೊಳ್ಳುತ್ತಾರೆ. ಇದಕ್ಕೆ ನಾಲಿಗೆಯಾಕಾರದ ಒಂದು ಕೆಂಪು

ಬೇಗಡೆಯ ತುಣುಕನ್ನು ಹಚ್ಚಿಕೊಳ್ಳುವುದು ವಾಡಿಕೆಯಾಗಿದೆ. ಇದಾದನಂತರ ಆಭರಣಗಳನ್ನು ಇಟ್ಟು, ಗೆಜ್ಜೆತೊಟ್ಟು, ಬಳಿಕ ಕಿರೀಟವನ್ನು, ಕೂದಲನ್ನು ಕಟ್ಟಿಕೊಳ್ಳುತ್ತಾರೆ.

ಸಾಮಾನ್ಯ ವೀರ ಅರಸನ ಕಿರೀಟಕ್ಕಿಂತ ಭಿನ್ನವಾದ ಆಕೃತಿಯ ಕಿರೀಟ ರಾಕ್ಷಸನದು. ಇದು ದೊಡ್ಡದಾಗಿದ್ದು ಗೋಪುರಾಕೃತಿಯ ಕಲಶದ ಬೆಂಗಡೆಯಲ್ಲಿ ಅಲಂಕೃತವಾದ, ವೃತ್ತಾಕಾರದ ಒಂದು ದೊಡ್ಡ ಬಿಲ್ಲೆಯಂತಿರುತ್ತದೆ. ಅದರ ಮುಂಭಾಗ ಕೆಂಪಾಗಿದ್ದು, ದುಂಡಾದ ಹಿಂಭಾಗದಲ್ಲಿ ಗಾಜು, ಸುನೇರಿ ಚಿತ್ತಾರಗಳಿರುತ್ತವೆ. ಶೂರ್ಪನಖಿಯಂಥ ರಕ್ಕಸಿ, ಚಂಡಿಯಂಥ ಉಗ್ರದೇವತೆಗಳಿಗೆ ಬೇರೆ ತೆರನಾದ ಕಿರೀಟವಿರುತ್ತದೆ. ಇವಕ್ಕೆ ಹಿಂಭಾಗವಿಲ್ಲ. ಈ ಕಿರೀಟದ ಮೈಲಾಳದ ಆಕೃತಿಯಂತೆ ಬಾಗಿದ್ದು ಕೆಳಗಿನಿಂದ ಮೇಲಕ್ಕೆ ಸರಿದಂತೆ ಅಗಲವಾಗಿ ಸಾಗುತ್ತದೆ. ಅದರ ಹೊರ ಭಾಗಗಳನ್ನು ಸುನೇರಿ ಕಾಗದ ಮತ್ತು ಗಾಜಿನ ತುಣುಕುಗಳಿಂದ ಅಲಂಕರಿಸುತ್ತಾರೆ. ಈ ಕಿರೀಟದ ಮೇಲಂಚಿಗೆ ನವಿಲುಗರಿಗಳನ್ನು ಸಿಕ್ಕಿಸಿರುತ್ತಾರೆ. ಇಂತಹ ಕಿರೀಟ ಧರಿಸಿದ ವ್ಯಕ್ತಿ ದೈತ್ಯಶರೀರಿಯಾಗಿ ಕಾಣಿಸುತ್ತಾನೆ.

ಚಂಡಿ, ತಾಟಕಿ, ಶೂರ್ಪನಖಿ, ಅಜಮುಖಿ, ಜರೆ, ಹಿಡಿಂಬೆ, ವೃತ್ರ ಜ್ವಾಲೆಯಂತಹ ಪಾತ್ರಗಳು ಹೆಣ್ಣು ಬಣ್ಣದಲ್ಲಿ ಬರುತ್ತದೆ. ಹೆಣ್ಣು ಬಣ್ಣದ ಕಿರೀಟವೂ ಬೇರೆ. ಅದು ಬುಡದ ಭಾಗದಲ್ಲಿ ಕಿರಿದಾಗ ಮೇಲ್ಭಾಗದಲ್ಲಿ ಅಗಲವಾಗಿರುತ್ತದೆ. ಅಲ್ಲಿ ನವಿಲುಗರಿಯನ್ನು ಹರಡಿರುತ್ತಾರೆ. ಭುಜಕೀರ್ತಿಗಳು ಹೆಣ್ಣು ಬಣ್ಣಕ್ಕೆ ಪ್ರತ್ಯೇಕವಾಗಿರುತ್ತದೆ. ಎದೆಹಾರ, ವೀರಗಸೆಯನ್ನು ಕುತ್ತಿಗೆಗೆ ಕಟ್ಟುತ್ತಾರೆ. ಕೋರೆಹಲ್ಲನ್ನೂ ಮೂಗುತಿಯನ್ನೂ ಬಣ್ಣದಿಂದಲೇ ಬರೆಯುತ್ತಾರೆ. ಹತ್ತಿಚೆಂಡಿನ ಬಳಕೆ ಇಲ್ಲಿಲ್ಲ.

೧೦. ಸ್ತ್ರೀ ವೇಷಗಳು : ಯಕ್ಷಗಾನದ ಸ್ತ್ರೀ ವೇಷಗಳು ಗಂಡು ವೇಷದಷ್ಟು ಭವ್ಯತೆ ಪಡೆದಿಲ್ಲ. ಸ್ತ್ರೀ ಪಾತ್ರಧಾರಿಗಳು ಮುಖಕ್ಕೆ ಹಾಕುವ ಪಾಟಲವರ್ಣ, ಶಿರೋಭೂಷಣಗಳನ್ನು ಬಿಟ್ಟರೆ ಮತ್ತೆಲ್ಲವೂ ಸಾಮಾನ್ಯ ಸ್ತ್ರೀಯರಂತೆ ಗೋಚರಿಸುತ್ತದೆ. ಮೂಲತಃ ದೇವದಾಸಿಯರ ಕುಣಿತವನ್ನು ಒಳಗೊಂಡಿರುವ ಸ್ತ್ರೀ ವೇಷಗಳು ಹಾವ-ಭಾವ, ಕೊಂಕು-ಬಿಂಕ, ವಯ್ಯಾರಗಳಲ್ಲಿ ಸಾಮಾನ್ಯ ಸ್ತ್ರೀಯರಿಗಿಂತ ಉತ್ಪ್ರೇಕ್ಷಿತ ಅಭಿನಯವಿರುತ್ತದೆ. ಯಕ್ಷಗಾನದಲ್ಲಿ ಸ್ತ್ರೀ ವೇಷದ ಭೂಮಿಕೆಯನ್ನು ಪುರುಷರೇ ನಿರ್ವಹಿಸಬೇಕಾಗಿರುವುದರಿಂದ ಅಂತಹ ಕಲಾವಿದರು ತಲೆ ಕೂದಲುಗಳನ್ನೆಲ್ಲಾ ಚೆನ್ನಾಗಿ ಬೆಳೆಯಿಸಿಕೊಳ್ಳುತ್ತಾರೆ.

ವೇಷ ಹಾಕುವುದಕ್ಕೆ ಮೊದಲು ಸಂಜೆ ಹೊತ್ತಲ್ಲಿ ಗಡ್ಡ ಮೀಸೆಯನ್ನು ನುಣ್ಣಗೆ ಬೋಳಿಸಿಕೊಳ್ಳುತ್ತಾರೆ. ತಲೆಯನ್ನು ಬಾಚಿ ಕೂದಲನ್ನು ಹಿಂದಲೆ ಮುಂದಲೆಯಾಗಿ ಎರಡು ಪಾಲು ಮಾಡಿಕೊಂಡು ಶಿರೋಭೂಷಣಗಳನ್ನೆಲ್ಲಾ ಕಟ್ಟಿಕೊಳ್ಳುತ್ತಾರೆ. ಮುಂದಲೆಗೆ ಕಿರೀಟ, ಪೊಗಡೆ ಆಭರಣಗಳನ್ನು ಕಟ್ಟಿಕೊಳ್ಳುತ್ತಾರೆ. ೧೮ ಮೊಳದ ಸೀರೆಯನ್ನು ಉಡುತ್ತಾರೆ. ಬಳೆಗಳ ಬದಲು ಕೈ ಕಟ್ಟುಗಳನ್ನು ಧರಿಸುತ್ತಾರೆ. ಹಾಗೆಯೇ ತೋಳು ಬಂದಿ, ಸೊಂಟದ (ಡಾಬು)

ವಡ್ಯಾಣಗಳನ್ನು ಕಟ್ಟಿಕೊಳ್ಳುತ್ತಾರೆ. ಮುಖದಲ್ಲಿ ವೃತ್ತಾಕಾರ, ನೇರ ಹಾಗು ಉದ್ದ ರೀತಿಯಲ್ಲಿ ತಿಲಕವನ್ನಿಟ್ಟು ಕೊಳ್ಳುತ್ತಾರೆ. ಬೇಗಡೆಯಿಂದ ಮಾಡಿದ ಮೂಗುತಿಯನ್ನು ಧರಿಸುವುದಿದೆ.

ಮೂರು ತಿಟ್ಟುಗಳಲ್ಲಿ ಸ್ತ್ರೀ ವೇಷದ ಮಾದರಿ ಸಾಮಾನ್ಯವಾಗಿ ಒಂದೇ ತೆರನಾಗಿದೆ. ಸೀತೆ, ಸಾವಿತ್ರಿ, ಮಂಡೋದರಿ, ತಾರೆ, ದ್ರೌಪದಿಯರೆಲ್ಲಾ ರಾಜವೇಷದ ಎದುರಿಗೆ ಹೆಚ್ಚು ಆಭರಣಗಳನ್ನು ಧರಿಸುತ್ತಾರೆ. ಮೀನಾಕ್ಷಿ, ಶಶಿಪ್ರಭೆ, ಪ್ರಮಿಳೆಯಂತಹ ಪಾತ್ರಗಳೂ ಸಹಾ ಅಲ್ಪ ಸ್ವಲ್ಪ ಮಾರ್ಪಾಟುಗಳಿಂದ ವೀರೋಚಿತರಾಗಿ ಕಾಣುತ್ತಾರೆ.

೧೧. ಋಷಿಮುನಿಗಳ ಪಾತ್ರಗಳು : ಯಕ್ಷಗಾನದಲ್ಲಿ ಋಷಿಮುನಿಗಳ ವೇಷ ರಚಿಸುವಾಗ ಜಟೆಗೆ ಕಪ್ಪು ವಸ್ತ್ರ ಸುತ್ತಿ, ಅದಕ್ಕೆ ಜರಿಗೋಟನ್ನು ಸುತ್ತಿ, ಮುಂದಲೆ ಕರ್ಣ ಪಾತ್ರಗಳನ್ನು ಕಟ್ಟಿ ವೈಭವೀಕರಿಸುವುದು ಸಾಮಾನ್ಯವಾಗಿದೆ. ಋಷಿ ವೇಷದಲ್ಲಿ ಸೌಮ್ಯ ಹಾಗೂ ಉಗ್ರರೂಪ ಗಳಿಗೆ ಸ್ವಲ್ಪ ವ್ಯತ್ಯಾಸಗಳಿವೆ. ವಿಶ್ವಾಮಿತ್ರ, ಜಮದಗ್ನಿ, ಪರಶುರಾಮ, ಅಶ್ವತ್ಥಾಮ, ದೂರ್ವಾಸ ಋಷಿ ಪಾತ್ರಗಳಲ್ಲಿ ಕಣ್ಣಿನ ಸುತ್ತ ಕೆಂಪುಬಣ್ಣದ ಛಾಯೆಯನ್ನು, ತ್ರಿಪುಂಡ್ರಗಳನ್ನು ಬರೆಯುತ್ತಾರೆ. ಗಡ್ಡಮೀಸೆಗಳನ್ನು ಕಟ್ಟುತ್ತಾರೆ. ಮೈಗೆ ಬೂದಿಯ ಬಣ್ಣವನ್ನು ಬಳಿದು ಕೊಳ್ಳುತ್ತಾರೆ.

ಅಶ್ವತ್ಥಾಮನಂತಹ ಪಾತ್ರಗಳಿಗೆ ಎದೆಹಾರ, ಭುಜಕೀರ್ತಿ, ವೀರಗಸೆಯನ್ನು ಕಟ್ಟುವ ಪದ್ಧತಿ ಇದೆ. ಉಳಿದ ಸಾತ್ವಿಕ ಋಷಿ ಪಾತ್ರಗಳಿಗೆ ಕೈಕಟ್ಟು ಬಾಜು ಬಂದಿಗಳನ್ನಷ್ಟೇ ಕಟ್ಟು ತ್ತಾರೆ. ಯಕ್ಷಗಾನದ ನಾರದರಿಗೆ ಗಡ್ಡ, ಮೀಸೆ, ಶಿಖೆಗಳ ಶೋಭೆಯಿರುತ್ತದೆ. ಹಿಂದೆ ಋಷಿಪಾತ್ರಗಳ ಕೈಯಲ್ಲಿ ನವಿಲುಗರಿಯ ಪಿಂಡಿ, ಜಪಸರಗಳು, ಕೊರಳಿಗೆ ರುದ್ರಾಕ್ಷಿ ಮಾಲೆ ಗಳು ಇರುತ್ತಿದ್ದವು. ಇತ್ತೀಚೆಗೆ ತಾಳ ತಂಬೂರಿಗಳು ಬಂದಿವೆ.

೧೨. ಹಾಸ್ಯ ಪಾತ್ರಗಳು : ಯಕ್ಷಗಾನದಲ್ಲಿ ಹಾಸ್ಯ ಪಾತ್ರಗಳಿಗಿರುವಷ್ಟು ಸ್ವಾತಂತ್ರ್ಯ ಬೇರೆ ಪಾತ್ರಗಳಿಗಿರುವುದಿಲ್ಲ. ಆದರೆ ಪ್ರಸಂಗದ ಒಪ್ಪಂದವನ್ನು ಕೆಡಿಸದಂತಹ ಹಾಸ್ಯ ಪ್ರಜ್ಞೆ ಅವನಿಗಿರಬೇಕಾಗುತ್ತದೆ. ಹಾಸ್ಯಗಾರನ ವೇಷ, ಕುಣಿತ, ಅಭಿನಯ, ಮಾತುಗಾರಿಕೆ ಎಲ್ಲವೂ ವ್ಯಂಗ್ಯವಾಗಿದ್ದು ಪ್ರೇಕ್ಷಕರಲ್ಲಿ ನಗು ಬರಿಸುತ್ತದೆ. ಇದಿರು ಪಾತ್ರದ ಸಂಭಾಷಣೆಯ ಹಂತದಲ್ಲಿ ಹಾಸ್ಯಗಾರನ ಚಾಕಚಕ್ಯತೆ ತಿಳಿದುಬರುತ್ತದೆ.

ಹಾಸ್ಯಗಾರನಿಗೆ ತನ್ನ ಬಣ್ಣಗಾರಿಕೆಯಲ್ಲಿ ವಿಶೇಷ ಕಾಳಜಿಯಿರಬೇಕಾಗುತ್ತದೆ. ಮೇಲಿಂದ ಮೇಲೆ ಶೀಘ್ರವಾಗಿ ಬಣ್ಣ ಬದಲಾಯಿಸುವ ತಂತ್ರಗಾರಿಕೆ ಅವನಲ್ಲಿರಬೇಕಾಗುತ್ತದೆ. ರಾಜ ದೂತನಾಗಿ ರಂಗ ಪ್ರವೇಶಿಸಿದವ ಇನ್ನರ್ಧ ಗಂಟೆಯ ನಂತರ ದೇವದೂತನಾಗಲೂಬಹುದು. ಮತ್ತೆ ಸ್ವಲ್ಪ ಹೊತ್ತಿನ ಬಳಿಕ ರಾಕ್ಷಸ ದೂತನಾಗಬೇಕಾಗುತ್ತದೆ. ಮುದುಕಿಯಾಗಲೂ ಬೇಕಾಗುತ್ತದೆ. ಸಣ್ಣ ಬದಲಾವಣೆಯಲ್ಲಿ ಆತ ದೊಡ್ಡ ಪರಿಣಾಮವನ್ನು ಮಾಡಿ ತೋರಿಸ ಬೇಕಾಗುತ್ತದೆ.

ಅರವತ್ತರ ದಶಕದಿಂದ ಈಚೆಗೆ ಕಾಣಿಸಿಕೊಂಡ ಕ್ಷೇತ್ರಮಹಾತ್ಮೆಗಳ ಪ್ರಸಂಗಗಳು, ತುಳು ಪಾಡ್ದನಗಳ, ದೈವಗಳ ಕತೆಗಳು ತೆಂಕುತಿಟ್ಟಿನಲ್ಲಿ ಸಂಪೂರ್ಣವಾಗಿ ವೇಷಗಳ ರೀತಿಯನ್ನು ಬದಲಿಸಿದವು. ಯಕ್ಷಗಾನವು ನಾಟಕದ ಹಾದಿಗೆ ಬರತೊಡಗಿತು. ಕಿರೀಟದ ಜಾಗದಲ್ಲಿ ನಾಟಕದ ಪೇಟಾಗಳು, ಷಟ್ಟುಚಟ್ಟ ಕಚ್ಚೆಯ ವೇಷಗಳು, ಕುಡಿಮೀಸೆಯ ಪಾತ್ರಗಳು ಪ್ರತ್ಯಕ್ಷವಾದವು. ತಮಿಳು ಸಿನೆಮಾದಲ್ಲಿ ಬಳಸಿ ತೊರೆದ ವೇಷ ಸಾಮಗ್ರಿಗಳು, ವಸ್ತ್ರಾಲಂಕಾರಗಳನ್ನು ಮದ್ರಾಸಿನಿಂದ ದಕ್ಷಿಣ ಕನ್ನಡ ಜಿಲ್ಲೆಯ ಮೇಳಗಳು ತರಿಸಿಕೊಂಡವು. ಜರಿಯಿಂದ ಮಿರುಗುವ ಜವುಳಿಯ ಈ ಉಡುಗೆ-ತೊಡುಗೆಗಳು ಯಕ್ಷಗಾನದ ಆಕಾರವನ್ನು ಬದಲಾಯಿಸಿಬಿಟ್ಟವು. ಇದಕ್ಕೆ ಸರಿಯಾಗಿ ಹುಬ್ಬು ಬರೆಯುವ ರೀತಿ, ಗದ್ದ ಬರೆಯುವ ರೀತಿ, ಮೀಸೆ ಕಟ್ಟುವರೀತಿ, ನಾಮ ಮುದ್ರೆಗಳ ರೀತಿ ಇವೆಲ್ಲದರಲ್ಲೂ ಸಿನೆಮಾ ಮಂದಿಗೆ ಯಕ್ಷಗಾನ ಕಲಾವಿದರು ಶರಣಾದರು. ಕಲ್ಪಿತ ಕತೆಗಳ ಪ್ರಸಂಗಗಳಿಂದಾಗಿ ತೆಂಕುತಿಟ್ಟಿನಲ್ಲಿ ರೂಪ ವ್ಯತ್ಯಾಸವಾದರೆ ಬಡಗುತಿಟ್ಟಿನಲ್ಲಿ ಪೌರಾಣಿಕ ಪಾತ್ರಗಳಿಗಾಗಿ ಇದ್ದ ಸಾಂಪ್ರದಾಯಿಕ ರೂಪ ರಚನೆ ಅಪಮೌಲ್ಯಗೊಂಡಿತು. ಯಕ್ಷಗಾನದಲ್ಲಾದ ಈ ಬೇಕಾಬಿಟ್ಟಿ ಬೆಳವಣಿಗೆಯನ್ನು ತಡೆದು ಸಾಂಪ್ರದಾಯಿಕ ಮೌಲ್ಯವನ್ನು ಪುನರುಜ್ಜೀವನಗೊಳಿಸಲು ಕೆಲವು ಸಮೂಹಗಳು ಪ್ರಯತ್ನಿಸುತ್ತಿವೆ.

ಅದೇನೇ ಇರಲಿ, ಯಕ್ಷಗಾನದ ಅಭಿನಯರಂಗ ಬೆಳಗಬೇಕಾದರೆ ಅಲ್ಲಿ ಚಿತ್ರಕಲೆಯ ಮಹತ್ವವೂ ಬಹಳವಿದೆ. ಚಿತ್ರ-ನಕ್ಷೆ-ಬಣ್ಣಗಳಿಲ್ಲದ ವೇಷವಾಗಲೀ, ಭೂಷಣವಾಗಲೀ, ಉಡುಗೆ-ತೊಡುಗೆಗಳಾಗಲೀ ಎಂದಿಗೂ ಕಣ್ಮನ ಸೆಳೆಯಲಾರವು. ಅವುಗಳಿಲ್ಲದ ಯಾವ ಕಲೆಯೂ ಬೆಳಗಲಾರದು.

■■

ಟಿಪ್ಪಣಿ : ಯಕ್ಷಗಾನ ಕಲಾ ಸಾಹಿತಿಗಳಾದ ಡಾ.ಕೆ.ಶಿವರಾಮ ಕಾರಂತ, ಡಾ.ಗೋಪಾಲಕೃಷ್ಣ ಹೆಗಡೆ, ಮನೋಹರ ಎಸ್.ಕುಂದರ್, ಕೆ.ಎಸ್.ಉಪಾಧ್ಯಾಯ, ಪಾದೆಕಲ್ಲು ವಿಷ್ಣು ಭಟ್ಟ, ಪುರುಷೋತ್ತಮ ಬಿಳಿಮಲೆ, ಕೆ.ಎಂ.ರಾಘವ ನಂಬಿಯಾರ್, ಪಾಲ್ತಾಡಿ ರಾಮಕೃಷ್ಣ ಆಚಾರ್ ಮೊದಲಾದವರು ಬರೆದಿರುವ ಗ್ರಂಥಗಳಿಂದ ವಿಷಯವನ್ನು ಆಯ್ದು ಇಲ್ಲಿ ಬಳಸಿಕೊಳ್ಳಲಾಗಿದೆ. ಭಾವ ಚಿತ್ರಗಳ ಸಹಾಯವನ್ನು ಪಡೆಯಲಾಗಿದೆ. ಕೆಲವು ಚಿತ್ರಗಳನ್ನು ಆಸ್ಟ್ರೊ ಮೋಹನ್ ಮತ್ತು ಗಣೇಶ ಯಾಜಿ ಒದಗಿಸಿಕೊಟ್ಟಿದ್ದಾರೆ. ಇವರೆಲ್ಲರಿಗೂ ನಾನು ಋಣಿಯಾಗಿದ್ದೇನೆ.



ಉಪಾಧ್ಯಾಯ ಮೂಡುಬೆಳ್ಳೆ ೧೯೬೪ರಲ್ಲಿ ಉಡುಪಿಯ ಹತ್ತಿರದ ಮೂಡುಬೆಳ್ಳೆಯಲ್ಲಿ ಜನಿಸಿದ ಅವರು ಎ.ಎಮ್.ಜಿ.ಡಿ.ಆರ್ಟ್ ಪೇಂಟಿಂಗ್‌ನಲ್ಲಿ ಪದವಿಯನ್ನು ಪಡೆದಿದ್ದಾರೆ. ಚಿತ್ರಕಾರರಾಗಿ ಚಿತ್ರಕಲಾ ವಿಮರ್ಶಕರಾಗಿ, ಚಿತ್ರಕಲಾ ಶಿಕ್ಷಕರಾಗಿ ಸಲ್ಲಿಸಿದ ಸೇವೆ ಗಮನಾರ್ಹವಾದುದು. ಇವರು ಹಲವಾರು ವಿಚಾರಸಂಕಿರಣ ಮತ್ತು ಚಿತ್ರಕಲಾ ಪ್ರದರ್ಶನಗಳಲ್ಲಿ ಭಾಗವಹಿಸಿ ಅನೇಕ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಕನ್ನಡ ರಾಜ್ಯೋತ್ಸವ ಪ್ರಶಸ್ತಿ, ಉತ್ತಮ ಶಿಕ್ಷಕ ಪ್ರಶಸ್ತಿ ಅತ್ಯುತ್ತಮ ಕಲಾಸಾಹಿತಿ ಪ್ರಶಸ್ತಿ, ಉತ್ತಮ ಕಲಾವಿದ ಪ್ರಶಸ್ತಿ, ಜಿಲ್ಲಾ ಅತ್ಯುತ್ತಮ ಶಿಕ್ಷಕ ಪ್ರಶಸ್ತಿಗಳನ್ನು ಪಡೆದಿದ್ದಾರೆ. ಅನೇಕ ಸಂಘ ಸಂಸ್ಥೆಗಳಿಂದ ಇವರು ಸನ್ಮಾನ ಮತ್ತು ಪುರಸ್ಕಾರಗಳನ್ನು ಪಡೆದಿರುವುದಲ್ಲದೆ, ಆಫ್ರಿಕಾ, ನೇಪಾಳ ದೇಶದ ಅನೇಕ ಕ್ಷೇತ್ರಗಳಲ್ಲಿಯ ಗಣ್ಯ ವ್ಯಕ್ತಿಗಳಿಂದ ಇವರ ಕಲಾಕೃತಿ ರಚನೆಗಾಗಿ ಪ್ರಶಂಸಾ ಪತ್ರಗಳು ಬಂದಿವೆ. ಕರ್ನಾಟಕ ದೃಶ್ಯಕಲಾ ಸಾಹಿತ್ಯ ಪರಿಷತ್ತು, ಆರ್ಟಿಸ್ಟ್ ಪೋರಂ ಉಡುಪಿ, ಉಡುಪಿ ಜಿಲ್ಲಾ ಶಿಕ್ಷಕರ ಕಲಾ ಸಂಘ ಮತ್ತು ಕರ್ನಾಟಕ ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರು ಅಂಕಣಕಾರರಾಗಿ ಉದಯವಾಣಿ, ಜನವಾಹಿನಿ ಹೊಸದಿಗಂತ ದಿನ ಪತ್ರಿಕೆಗಳಲ್ಲಿ ಪ್ರತಿವಾರವೂ ಕಲೆ, ಕಲಾವಿದರ ಕುರಿತು ಕಲಾವಿಮರ್ಶೆ ಮತ್ತು ವಿವಿಧ ಬರಹಗಳನ್ನು ಬರೆಯುತ್ತಲೇ ಇದ್ದಾರೆ. ಸುಮಾರು ಸಾವಿರಕ್ಕೂ ಹೆಚ್ಚು ಕಿರು ಬರಹಗಳು ಅನೇಕ ಪತ್ರಿಕೆಗಳಲ್ಲಿ ಪ್ರಕಟಗೊಂಡಿದ್ದು ಅವು ನಾಡಿನ ಕಲಾಸಕ್ತರ ಗಮನ ಸೆಳೆದಿವೆ. ಇವರು ಕರ್ನಾಟಕ ಲಲಿತಕಲಾ ಅಕಾಡೆಮಿಗಾಗಿ 'ಯಕ್ಷಗಾನ ಮತ್ತು ಚಿತ್ರಕಲೆ' ಎಂಬ ಸಂಶೋಧನಾತ್ಮಕ ಗ್ರಂಥವನ್ನು ವ್ಯಾಪಕವಾಗಿ ಅಧ್ಯಯನ ಮಾಡಿ ಬರೆದುಕೊಟ್ಟುದಕ್ಕಾಗಿ ಅಕಾಡೆಮಿ ಅವರನ್ನು ಅಭಿನಂದಿಸುತ್ತದೆ.

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ
ಬೆಂಗಳೂರು - 560 002